LIST 'B' (*concld.*)

Sl. No.	Village	Taluk
25	Virupasandra	Kanakapura
26	Varadanhalli	Kanakapura
27	Anadevadi	Kanakapura
28	Hulugandanahalli	Kanakapura
29	Kudihalli	Kanakapura
30	Honnekuppe	Ramanagaram
31	Golleradoddi	Ramanagaram
32	Jalamangala	Ramanagaram
	Nadikavagalu	
	Talwadi	
33	Achalu	Ramanagaram
	Kailancha	
	Chikkanahalli	
	Chickegowdan Doddi	
	Vaddarahalli	
	Bibuthigere	
	Bamaikanapura	
	Shanbboganaballi	
	Kudagal	
34	Puttadahalli	Doddaballapur
35	Basathihalli	Doddaballapur
36	Gobbargunte	Devanahalli
37	Singahalli	Devanahalli
38	Chickejala	
	Kemarahalli	Devanahalli
39	Dudagere	
	Channarayapatna	Devanahalli
40	Oblapura and Mane	Nelamangala

Mysore University Senate Election results.

Mr. SPEAKER.—The Chair desires to announce that in the election held yesterday to the Senate of the University, the following members are declared elected:—

1. Sm. Lakshmidevi Ramanna
Sriyuts :
2. N. C. Nagaiah Reddy
3. B. Narayanaswamy
4. N. Huchmasthy Gowda
5. K. Prabhakar
6. T. C. Shantappa
7. G. A. Thimmappa Gowda
8. B. Hutche Gowda
9. Mulka Govinda Reddy.

DEMANDS FOR ADDITIONAL AND SUPPLEMENTARY GRANTS FOR 1956-57.

Mr. SPEAKER.—Next item is Voting of Demands for Additional and Supplementary Grants for the year 1956-57. Shall I read all the demands and make use of this time for the general debate ?

Sri M. MADIAH (Nanjangud).—Sir, it is better to allot certain time for each demand.

Mr. SPEAKER.—I would like to fix up time like this :

Land Revenue ...	Half hour
General Administration ..	Half hour
Industries & Supplies ...	Half hour
Famine Relief ...	One hour

(MR. SPEAKER.)

Capital Outlay on Industries ... Half hour.

*Sri J. MOHAMED IMAM (Jagalur).—I seek one information from the Chair. In the list of business yesterday the discussion on the Report of the Mysore Finance Enquiry Committee was included. May I take that it will be taken up next day?

*Sri H. SIDDAVEERAPPA (Minister for Home and Finance).—May I make a suggestion, Sir? If the House agrees that the Madhava Rau Committee Report is to be debated upon, it may be possible if the House co-operates to complete this transaction regarding the supplementary grants by about the tea time and take up the report afterwards.

Sri J. MOHAMED IMAM.—I submit we cannot do full justice in the course of one or two hours. That is a report which demands debate for at least one complete day. If it is not possible to take it up at this session, we can take it up at the next session.

There is a rumour that there is going to be a session at Mysore. I want the Government either to confirm or deny it because some of us want to chalk out our programmes.

Sri H. SIDDAVEERAPPA.—I cannot either confirm or deny it. But, I can tell him this much that he can anticipate such a thing in view of the important measures that are likely to come up. As to when it is, and where it is going to be held, the Leader of the House will announce.

Sri J. MOHAMED IMAM.—That shows the efficiency of the Government. They cannot come to a decision even in this small matter.

Sri H. SIDDAVEERAPPA.—We have come to a decision. It is for the Leader of the House to announce it.

Sri T. MARIAPPA (Mysore City North).—Mr. Speaker, I request that you may kindly allot at least one hour for Demand No. 41 because the Government want to take over the assets and liabilities of the Mysore Silk Filatures at a cost of Rs. 18.70 lakhs.

Mr. SPEAKER.—I shall bear that in mind. We shall begin.

Sri S. SRINIVASA IYENGAR (T.-Narasipur).—I think we have to devote at least 30 minutes for charged items. Under Demand No. 1, you have allotted some time. There is a charged item for which some time must be devoted.

Mr. SPEAKER.—If Land Revenue Demand is finished much earlier, we can take it up.

DEMAND No. 1.—LAND REVENUE

1. LAND REVENUE.

Mr. SPEAKER.—Motion moved:

> "That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Land Revenue'."

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು.)—ಸ್ವಾಮಿ, ಒಂದನೇ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ರೆವೆನ್ಯೂ ಆಫೀಸುಗಳಲ್ಲಿರತಕ್ಕ ಕೆಲವು ತೊಂದರೆಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ನಾವೆಲ್ಲ ತಿಳಿದಿರುವ ಹಾಗೆ ರೆವೆನ್ಯೂ ಆಫೀಸ್ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟು ಕೆಲಸ ಮಾಡುವ ಹಾಗೆ ಕಾಣುತ್ತದೆ. ಇದು ಪ್ರಾರಂಭದ ಕಚೇರಿ ಎಂದು ತಿಳಿಯಬಹುದು. ಅಮಲ್ದಾರರೇ ತಾಲ್ಲೂಕು ಆಫೀಸುಗಳಲ್ಲಿ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟಂತೆ ವ್ಯವಹಾರ ನಡೆಸುತ್ತಿರುವುದು ನಮಗೆ ಅರಿವಾಗುತ್ತದೆ. ರೆವೆನ್ಯೂ ಇಲಾಖೆಯಲ್ಲಿ ಮುಖ್ಯವಾಗಿ ಕಂದಾಯವನ್ನು ವಸೂಲ್ಮಾಡುವುದು, ದರಖಾಸ್ತುಗಳನ್ನು ವಿಲೇವಾರಿ ಮಾಡುವುದು; ಅಕ್ವಿಜಿಷನ್ ಕೇಸುಗಳನ್ನು ತೀರ್ಮಾನ ಮಾಡುವುದು, ಯಾರಾದರೂ ಅಪ್ಪಣೆ ಇಲ್ಲದೆ ಭೂಮಿಯನ್ನು ಆಕ್ರಮಿಸಿಕೊಂಡಿದ್ದರೆ ತಕರಾರು ತಃಖ್ತೆ ಹಾಕುವುದು—ಇಂಥ ಕೆಲಸಗಳು ನಡೆಯುತ್ತವೆ.

Sri S. SRINIVASA IYENGAR.—Sir, he is not dealing with the matter contained in the Demand. It relates to hissa work in Bangalore Villages.

ಅಧ್ಯಕ್ಷರು.—ಎರಡನೇ ಖೋತಾ ಸೂಚನೆಗೆ ಅವಕಾಶ ಕೊಟ್ಟಿದ್ದೇನೆ. ಅದರ ಮೇಲೆ ಮಾತ್ರ ಮಾತನಾಡಬಹುದು.

ಶ್ರೀ ಆರ್. ಮುನಿಸ್ವಾಮಯ್ಯ.—ಬೆಂಗಳೂರು ಜಿಲ್ಲೆಯಲ್ಲಿ ಜಮಿನ್ದಾರಿ ಪದ್ಧತಿ ಹೋಗುವ ಸಂಬಂಧದಲ್ಲಿ ಅವನ್ನು ನೋಡಿಕೊಳ್ಳುವುದಕ್ಕೋಸ್ಕರವಾಗಿ ಡಿಸ್ಟ್ರಿಕ್ಟ್ ಆಫೀಸರನ್ನೂ ತಾಲ್ಲೂಕು ಆಫೀಸರುಗಳನ್ನೂ ನೇಮಿಸಿದ್ದಾರೆ. ಹೀಗೆ ಭೂಮಿಯನ್ನು ಕಳೆದುಕೊಳ್ಳತಕ್ಕ ಮತ್ತು ಕಳೆದುಕೊಂಡಿರತಕ್ಕ ಜಮಿನ್ದಾರರು ಅವರ ಭೂಮಿಗಳನ್ನು ಅಳತೆಮಾಡಿ ಅವುಗಳ ಬೆಲೆ

ಕೊಡತಕ್ಕ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರವಾಗಿ ಕಚೇರಿಗಳಿಗೂ, ಅವರವರ ಊರುಗಳಿಗೂ ಸುಮಾರು 20—30 ಸಲ ಓಡಾಡಿರುವುದನ್ನು ನಾನು ಗಮನಿಸಿದ್ದೇನೆ. ಬೆಂಗಳೂರು ಜಿಲ್ಲೆಯಲ್ಲಿ ಇದಕ್ಕಾಗಿ ನೇಮಿಸಿರತಕ್ಕ ಅಧಿಕಾರಿಗಳು, ಜಮೀನ್ದಾರಿ ರದ್ದಿಯಾತಿ ಪದ್ಧತಿಯಿಂದ ಭೂಮಿಯನ್ನು ಕಳೆದುಕೊಳ್ಳುವವರು ಬಂದು ಈ ಅಧಿಕಾರಿಗಳನ್ನು ವಿಚಾರಿಸಿದಾಗ ಅವರು ಸಾಕಾದಷ್ಟು ರೀತಿಯಲ್ಲಿ ವಿವರಗಳನ್ನು ಕೊಡದೆ, ವಿವರಣೆಗಳನ್ನು ತಿಳಿಸದೆ ತಮಗೆ ಏನೂ ಗೊತ್ತಿಲ್ಲವೆನ್ನುವ ಹಾಗೆ ನಟಿಸಿಕೊಂಡು ಮುಂದೆ ನೋಡೋಣ, ಪರಿಶೀಲನೆ ಮಾಡೋಣವೆಂದು ಹೇಳಿ ಕಳುಹಿಸುತ್ತಿರುವುದು ಬಹಳ ಶೋಚನೀಯವಾಗಿದೆ. ಅದಕ್ಕೋಸ್ಕರವಾಗಿ ಸಂಬಂಧಪಟ್ಟ ಮಂತ್ರಿಗಳು, ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾದ ವಿವರಗಳನ್ನು ಜನರಿಗೆ ಕೊಡುವಂತೆ ತಿಳಿಸಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ.

ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಒಂದನೆ ಡಿಮ್ಯಾಂಡಿನಲ್ಲಿ ಕೇಳಿರುವ ಟೋಕನ್ ಗ್ರಾಂಟ್ ವಿಚಾರದಲ್ಲಿ ಒಂದೆರಡು ವಿಷಯ ಹೇಳಬೇಕೆಂದಿದ್ದೇನೆ. ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಇನಾಂ ಗ್ರಾಮಗಳಿವೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ಬೆಂಗಳೂರು ಜಿಲ್ಲೆಯಲ್ಲಿರುವ ಎಲ್ಲ ಇನಾಂ ಗ್ರಾಮಗಳಲ್ಲಿಯೂ ಹಿಸ್ಸೆ ಕೆಲಸವನ್ನು ಪೂರೈಸಬೇಕಾಗಿದೆ ಎಂದು ಸರ್ಕಾರದವರಿಗೆ ಕಂಡು ಬಂದರೆ ಅವರು ನೇಮಕ ಮಾಡಿಕೊಳ್ಳುವ ಸಿಬ್ಬಂದಿ ಸಾಕಾಗುತ್ತದೆಯೋ? ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಬೇಕು. ಎಲ್ಲ ಗ್ರಾಮಗಳನ್ನೂ ಸರ್ಕಾರದವರು ತೆಗೆದುಕೊಳ್ಳಬೇಕು. ಇದಕ್ಕಾಗಿ ಹಿಸ್ಸೆ ಕೆಲಸ ಮಾಡುತ್ತ ಹೋದರೆ ನಿಖರವಾದ ಲೆಕ್ಕ ಬೇಗ ಸಿಕ್ಕುವುದಿಲ್ಲ. ಆದುದರಿಂದ ಈ ಕಾನೂನನ್ನು ಕೂಡಲೆ ಜಾರಿಗೆ ತರುವ ಉದ್ದೇಶದಿಂದ, ಈಗ ಸರ್ಕಾರದವರು ಕೇಳಿರುವ ಸಿಬ್ಬಂದಿ ಈ ಹಿಸ್ಸೆ ಸರ್ವೆ ಕೆಲಸವನ್ನು ಮಾಡಿ ಮುಗಿಸುತ್ತಾರೆಯೋ, ಇಲ್ಲವೇ ಎಂದು ಗೊತ್ತಾಗುವುದಿಲ್ಲ. ನನಗೆ ತಿಳಿದಮಟ್ಟಿಗೆ ಈ ಹಿಸ್ಸೆ ಸರ್ವೆ ಬಹಳ ನಿಧಾನವಾದ ಕೆಲಸ. ಆದುದರಿಂದ ಈ ಕೆಲಸವನ್ನು ಬೇಗಬೇಗ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟು ಸಿಬ್ಬಂದಿಯನ್ನು ನೇಮಕ ಮಾಡಬೇಕೇ ಹೊರತು ಕಡಿಮೆ ಜನರನ್ನು ನೇಮಿಸಿದರೆ ಬೇಗ ಕೆಲಸವಾಗುವುದಿಲ್ಲ. ಈ ಕೆಲಸಕ್ಕೆ ಎಷ್ಟು ಜನ ಬೇಕು ಎನ್ನುವುದನ್ನು ಇದರಲ್ಲಿ ಕೊಟ್ಟಿಲ್ಲ. ಇನ್ನು ನವೆಂಬರ್ ಒಂದನೆ ತಾರೀಖು ಹೊಸ ಸಂಸ್ಥಾನದ ಉದಯವಾಗುತ್ತದೆ. ಅಷ್ಟರೊಳಗಾಗಿ ಈ ಕಾರ್ಯವನ್ನು ಮುಗಿಸುವುದಕ್ಕಾಗುತ್ತದೆಯೋ? ಹೊಸ ಸಂಸ್ಥಾನವಾದ ಮೇಲೆ ಈ ಸಿಬ್ಬಂದಿ ಮುಂದುವರಿದುಕೊಂಡು ನಿಧಾನವಾಗಿ ಈ ಹಿಸ್ಸೆ ಸರ್ವೆ ಕೆಲಸ ನಡೆಯುತ್ತ ಇರುತದೆಯೋ ಎನ್ನುವುದನ್ನು ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವಿನ್ಯೂ ಮತ್ತು ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ತಾಲ್ಲೂಕು ಆಫೀಸಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಇನಾಂ ರದ್ದಿಯಾತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರಿಯಾದ ತಿಳುವಳಿಕೆಯನ್ನು ರೈತರಿಗೆ ಕೊಡುತ್ತಿಲ್ಲ. ಆ ರೀತಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಶ್ರೀ ಮುನಿಸ್ವಾಮಯ್ಯನವರು ತಿಳಿಸಿದರು. ಸರಿಯಾದ ತಿಳುವಳಿಕೆ ಸಂಬಂಧಪಟ್ಟ ಜನಗಳಿಗೆ ತಿಳಿಯುವಂತೆ ವ್ಯವಸ್ಥೆ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೂ ಮತ್ತು ಮಾನ್ಯ ಸದಸ್ಯರಿಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರು ಸರ್ಕಾರವು ಅಂಥಾ ಸನ್ನಿವೇಶವನ್ನೇನಾದರೂ ತಂದರೆ ಅವಶ್ಯಕವಾಗಿ ಅದನ್ನು ಸರಿಪಡಿಸುವುದಲ್ಲದೆ ಇನಾಂ ರದ್ದಿಯಾತಿಗೆ ಸಂಬಂಧಪಟ್ಟ ವಿಷಯಗಳನ್ನು ಎಷ್ಟು ಪ್ರಮಾಣದಲ್ಲಿ ಯಾವಯಾವ ವಿಷಯಗಳನ್ನು ಜನಗಳಿಗೆ ತಿಳಿಯಪಡಿಸಬೇಕೋ ಅವೆಲ್ಲವನ್ನೂ ತಿಳಿಸುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಬೆಂಗಳೂರು ಜಿಲ್ಲೆಯಲ್ಲಿ ಇನಾಂ ಗ್ರಾಮಗಳೆಷ್ಟಿವೆ, ಹಿಸ್ಸೆ ಕೆಲಸ ಯಾವುದಕ್ಕೆ ಆಗಬೇಕು, ಈಗಿರತಕ್ಕ ಸಿಬ್ಬಂದಿ ಸಾಕಾಗುವುದಿಲ್ಲ, ಆದುದರಿಂದ ಅವಶ್ಯಕ ಪ್ರಮಾಣದಲ್ಲಿ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಳ್ಳಬೇಕೆಂಬ ಸಲಹೆಯನ್ನು ಕೊಟ್ಟರು. ಸರ್ಕಾರದವರ ಆಶಯವಾದರೂ ಅಷ್ಟೆ. ಬೆಂಗಳೂರು ಜಿಲ್ಲೆಯಲ್ಲಿ ಒಟ್ಟು 636 ಇನಾಂ ಗ್ರಾಮಗಳಿವೆ. ಅದರಲ್ಲಿ ಸರ್ವೆ ಆಗಿರತಕ್ಕದ್ದು 161 ಗ್ರಾಮಗಳು. ಸರ್ವೆ ಆಗಿಲ್ಲದೆ ಇರುವುದು 475 ಗ್ರಾಮಗಳು, ಮತ್ತು ಈಗ notify ಮಾಡಿರುವುದು 113 ಗ್ರಾಮಗಳು. ಸರ್ವೆ ಸೆಟಲ್‌ಮೆಂಟ್ ಆಗಿಲ್ಲದೆ ಇರುವ ಗ್ರಾಮಗಳಲ್ಲಿ ಪೋಡಿ ಹಿಸ್ಸೆ ಸಂಬಂಧದಲ್ಲಿ revenue side of the work ಮಾಡುವುದಕ್ಕೆ ಈ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೇವೆ. ಆದಷ್ಟು ಬೇಗ ಉಳಿದ 1650 ಗ್ರಾಮಗಳಲ್ಲಿ ಸರ್ವೆ ಕೆಲಸ ಮಾಡಬೇಕಾಗಿದೆ. ನಾವು ರೆವಿನ್ಯೂ ಸೈಡಿನಲ್ಲಿ ಕೆಲಸ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಬೇಕಾದರೂ ಒದಗಿಸಿಕೊಳ್ಳಬಹುದು. ಅದಕ್ಕೆ trained personnel ಇದೆ. ಆದರೆ ಸರ್ವೆ ಕೆಲಸಕ್ಕೆ ಅಗತ್ಯವಾದ trained personnel ನಮ್ಮಲ್ಲಿಲ್ಲ. ಆದುದರಿಂದ ಇರತಕ್ಕ trained personnelನಿಂದ ಎಷ್ಟು ಸರ್ವೆ ಕೆಲಸ ಮಾಡಬಹುದೋ ಅದಕ್ಕನುಗುಣವಾಗಿ ರೆವೆನ್ಯೂ ಸಿಬ್ಬಂದಿಯನ್ನು ಏರ್ಪಾಡು ಮಾಡಿಕೊಂಡಿದ್ದೇವೆ. ಸಾಧ್ಯವಾದಷ್ಟು ಸರ್ವೆ ಮಾಡಲು ಜನಗಳು ಹೆಚ್ಚಿಗೆ ಸಿಕ್ಕಿದಂತೆಲ್ಲ revenue side work ಅದೇ ಪ್ರಮಾಣದಲ್ಲಿ ನಡೆಯಲು ತಕ್ಕಷ್ಟು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತೇವೆ. ಈಗಿರತಕ್ಕ ರೀತಿಯಲ್ಲಿ ಸರ್ವೆ ಸಾಧಾರಣವಾದ ಲೆಕ್ಕಗಳನ್ನು ನೋಡಿಕೊಳ್ಳಲು ರೆವೆನ್ಯೂ ಸಿಬ್ಬಂದಿಯನ್ನು ಏರ್ಪಾಡುಮಾಡಿಕೊಂಡಿದ್ದೇವೆ. ಈಗಾಗಲೇ ಸುಮಾರು 14-15 ತರಹ ಲೆಕ್ಕಗಳನ್ನು ಸರ್ವೆಯಾಗದ ಗ್ರಾಮಗಳಲ್ಲಿ ಬರೆಯುತ್ತಿದ್ದಾರೆ. ಇದುವರೆಗೆ 183 ಗ್ರಾಮಗಳಲ್ಲಿ ಈ 14-15 ಲೆಕ್ಕಗಳನ್ನು ಬರೆದಾಗಿದೆ. ಐವತ್ತು ಗ್ರಾಮಗಳಲ್ಲಿ ಪೂರೈಕೆಗೆ ಬಂದಿದೆ. ಈ ಕೆಲಸವನ್ನು ಬೇಗ ಮುಗಿಸಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸರ್ವೆ ಮಾಡುವುದಕ್ಕೆ ಯೋಗ್ಯರಾದ ಜನಗಳು ಸಾಕಾದಷ್ಟಿಲ್ಲದೆ ಇರುವುದರಿಂದ ರೆವೆನ್ಯೂ ಅಧಿಕಾರಿಗಳನ್ನು ಹೆಚ್ಚಿಗೆ ತೆಗೆದುಕೊಂಡಿಲ್ಲ. ಇಷ್ಟು ಭರವಸೆಯನ್ನು ಕೊಡುವುದರಿಂದ ಮಾನ್ಯ ಸದಸ್ಯರು ಈ ಡಿಮ್ಯಾಂಡನ್ನು ಮಂಜೂರು ಮಾಡಬೇಕೆಂದು ಕೇಳುತ್ತೇನೆ.

Mr. SPEAKER.—Sri Srinivasa Iyenger wants to speak on charged item.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, Charged item ಬಗ್ಗೆ ಕೆಲವು ವಿಷಯಗಳನ್ನು ತಿಳಿಸಬೇಕಾಗಿದೆ. ರಿಸರ್ವ್ ಬ್ಯಾಂಕಿನವರು ಸ್ವಲ್ಪ ದಿವಸಗಳ ಹಿಂದೆ 15 ಸರ್ಕಾರಗಳಿಗೆ ಸಾಲವೆತ್ತುವ ಒಂದು ಯೋಜನೆಯನ್ನು ಪ್ರಕಟಣೆ ಮಾಡಿದ್ದರು. ಅದರಲ್ಲಿ ಕೆಲವು ಸರ್ಕಾರಗಳಿಗೆ ನೂರು ರೂಪಾಯಿಕೊಟ್ಟರೆ ನೂರು ರೂಪಾಯಿಗಳ ಬಾಂಡು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಕೊಡುತ್ತೇವೆಂದು ನಮೂದುಮಾಡಿದ್ದರು. ನಮ್ಮ ಮೈಸೂರು ಸರ್ಕಾರದ ಸಾಲಕ್ಕೆ ರೂ. 99-8-0 ಕೊಟ್ಟರೆ ನೂರು ರೂಪಾಯಿಗಳ ಬಾಂಡ್ ಕೊಡುತ್ತೇವೆಂದು, ಎಂಟಾಣೆ discount ಮೇಲೆ ಪ್ರಚಾರ ಮಾಡಿದ್ದರು. ಇದರಿಂದ ಏನಾಯಿತೆಂದರೆ ಮೈಸೂರು ಸರ್ಕಾರಕ್ಕೆ ಬಂದಿರತಕ್ಕ 410 ಲಕ್ಷ ರೂಪಾಯಿಗಳ ಸಾಲಕ್ಕೆ ನಮಗೆ ಎಷ್ಟು ನಷ್ಟವಾಗುತ್ತದೆಂದರೆ, ಎರಡು ಲಕ್ಷ ಐದುಸಾವಿರ ರೂಪಾಯಿಗಳು. ಇಷ್ಟು ಹಣವನ್ನು discount ರೂಪದಲ್ಲಿ ನಾವು ಬಿಟ್ಟು ಕೊಡಬೇಕು ಎಂದು ಇದನ್ನು ತಂದಿರುವುದು. ನಾನು ಏನು ಅಭಿಪ್ರಾಯದಿಂದ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ ಹಿಂದೆಯಾದರೆ ಮೈಸೂರು ಸರ್ಕಾರದವರೇ ಸಾಲವನ್ನು ತೆಗೆಯುತ್ತಿದ್ದರು. ಈಗ ರಿಸರ್ವ್ ಬ್ಯಾಂಕ್‌ನವರು ಸಾಲಕ್ಕೆ ಹಣ ತೆಗೆದುಕೊಳ್ಳುತ್ತಾರೆ ಮತ್ತು ಸಾಲ ತೀರಿಸುತ್ತಾರೆ. ಆದುದರಿಂದ discount ಕೊಡುವ ಹಣವನ್ನು charged item ಎಂದು ಭಾವಿಸಬೇಕಾಗುತ್ತದೆ. ಯಾವ ತರಹ ಹೀಗೆ ಎಂಟಾಣೆಯನ್ನು ಕಡಿಮೆ ಕೊಟ್ಟರು; ಯಾವ ದೃಷ್ಟಿಯಿಂದ ಎಂಟಾಣೆ discount ಕೊಟ್ಟರು? ಪಶ್ಚಿಮ ಬಂಗಾಳ ಸರ್ಕಾರದಲ್ಲಿ ಮಾತ್ರ ಜನಗಳಿಗೆ ನಂಬಿಕೆ ಇದೆಯೇ? ಅದಕ್ಕೆಮಾತ್ರ ನೂರಕ್ಕೆ ನೂರು ರೂಪಾಯಿ ಕೊಡಬೇಕೆಂದು ಮಾಡುವುದಕ್ಕೆ ಏನು ಕಾರಣ? ಬೊಂಬಾಯಿ ಸರ್ಕಾರದ ಸಾಲ ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಸಾಲಗಳಿಗೆ ಈ ರೀತಿ discount ಕೊಟ್ಟಿದ್ದಾರೆಯೇ? ಮೈಸೂರು ಸರ್ಕಾರದ ಸಾಲಕ್ಕೆ ಮಾತ್ರ discount ಕೊಡಬೇಕಾಗಿತ್ತೇ? ಈ ವಿಷಯಗಳೆಲ್ಲವನ್ನೂ ತಿಳಿಸಬೇಕು. ಇದಲ್ಲದೆ ಈಗ್ಗೆ ಎರಡು ವರ್ಷಗಳ ಹಿಂದೆಯೂ ಸಹ ಸಾಲವನ್ನೆತ್ತಿದಾಗ ಎಂಟಾಣೆ discount ಕೊಟ್ಟರು. ಮದರಾಸ್ ಸರ್ಕಾರದ ಸಾಲಕ್ಕೆ ಮಾತ್ರ ನಾಲ್ಕಾಣೆ discount ಕೊಟ್ಟಿದ್ದಾರೆ. ಆದುದರಿಂದ ರಿಸರ್ವ್ ಬ್ಯಾಂಕಿನವರಿಗೆ ಈ ಅಭಿಪ್ರಾಯ ಬರುವುದಕ್ಕೆ ಏನು ಕಾರಣ; ಅದನ್ನೇನಾದರೂ ಸರಿಪಡಿಸುವುದಕ್ಕೆ ಸಾಧ್ಯವೇ? ನಮ್ಮ ಸರ್ಕಾರದ ಭದ್ರತೆಯ ವಿಷಯದಲ್ಲಿ ಅವರಿಗೆ ಅನುಮಾನವಿದೆಯೆ? ಯಾವ ಕಾರಣದಿಂದ ಈ ರೀತಿ ಮಾಡುತ್ತಾರೆ? ಸರ್ಕಾರಕ್ಕೆ ತಿಳಿಯಪಡಿಸದೆ, ಸರ್ಕಾರದವರ ಅಭಿಪ್ರಾಯ ತೆಗೆದುಕೊಳ್ಳದೆ ಈರೀತಿಯಾಗಿ ಮಾಡಿದ್ದಾರೆಯೇ? ಎಂಬ ವಿಷಯಗಳನ್ನೆಲ್ಲ ತಿಳಿಯಬೇಕೆಂಬ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಸರ್ಕಾರದವರು ಈ ವಿಚಾರದಲ್ಲಿ ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

1-30 P.M.

*Sri H. SIDDAVEERAPPA (Minister for Home and Finance).—Sir, Hon'ble Member Sri Srinivasa Iyengar is aware that the issue rate is fixed in consultation with the Reserve Bank of India. They have the integrated policy of co-ordinating all the loans that will have to be raised in the country. It does not in any way affect the credit-worthiness of the State at all. While fixing the issue rate, there are various factors to be taken into consideration, that is, the availability of local resources, the time and circumstances under which the loan has been raised. If the Hon'ble Member takes into consideration the various issue rates that have been fixed for various Governments, he will come to know that there is absolutely no discriminatory treatment so far as Mysore Government is concerned. As a matter of fact the credit of Mysore Government is so high that even before the loan was floated 70per cent of it was promised. It is only in Bombay and Bengal it is issued on par. You know most of the capital of this country is locked in the important cities like Bombay and Calcutta. There are big financiers, big business concerns where by a flash they can get all the money. But, here our idea is to get as much as possible from the rural parts.

Sir, in Bombay it is on par and the only other Government which put it on par was Bengal. 15 Governments raised loans simultaneously and except these two Governments no other Government had that privilege. The two important cities of this country are located as the capitals of those Governments where money is easily available. Take the case of Madras; it was issued at Rs. 99-12-0. Andhra, Hyderabad and Mysore it was Rs. 99-8-0. In some States it was Rs. 99-4-0. It all depends on the incentive to pump out money from people who have it. It does not at all affect the credit-worthiness. Therefore, my friend may please correct the impression he has in his mind that because our credit-worthiness is lower it is issued at Rs. 99-8-0.

Sri S. SRINIVASA IYENGAR.—I never said that I doubted the credit-worthiness was low. I want to know how the Reserve Bank viewed it. The issue rate is decided by the Government of Mysore in consultation with the Reserve Bank. I would like to know the data on which they fixed Rs. 99-8-0.

Sri H. SIDDAVEERAPPA.—I am thankful to you for the correction. As I have already said, the Reserve Bank had in view the availability of the local resourees and also various other considerations which the Hon'ble Member is aware of. The idea is, these

loans hereafter will become almost frequent. Therefore, certain incentive is necessary to the affording public.

Sri S. SRINIVASA IYENGAR.—The Minister did not furnish the analysis of this loan subscription. The idea is to draw capital from the rural parts, he said. Have they really realised that hope?

Sri H. SIDDAVEERAPPA.—If the Hon'ble Member puts a short-notice question, I will answer it

Mr. SPEAKER.—The question is:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Land Revenue.'"

The motion was adopted.

DEMAND No. 11—GENERAL ADMINISTRATION

25. GENERAL ADMINISTRATION EXCEPT THE SUB-MAJOR HEADS B AND C

Mr. SPEAKER.—Motion moved:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'General Administration (Except the sub-major heads B and C).'"

Sri Muniswamiah has sent some cut motions.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ಇನಾಮುಗಳನ್ನು ತೆಗೆದುಹಾಕತಕ್ಕ ಸಂಬಂಧದಲ್ಲಿ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸರ್ಕಾರದವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಯಾವ ಯಾವ ಡಿಸ್ಟ್ರಿಕ್ಟುಗಳಲ್ಲಿ ಎಷ್ಟೆಷ್ಟು ಇನಾಂಗ್ರಾಮಗಳನ್ನು ಪಟ್ಟಿಯಲ್ಲಿ ಸೇರಿಸಬೇಕು, ಯಾವ ಯಾವ ಅಧಿಕಾರಿಗಳು ಇನಾಂಗ್ರಾಮಗಳಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿದೆ, ಸರ್ವೇಯರು, ಮೋಜಿನಿದಾರರು, ಅಸೆಸ್ ಮಾಡುವವರು, ರೆವೆನ್ಯೂ ಆಫೀಸರ ಎಷ್ಟು ಮಂದಿ ಬೇಕು ಇವುಗಳನ್ನು ಒಂದು ಕ್ರಮವಾಗಿ ಪಟ್ಟಿ ಮಾಡಿರುವ ಹಾಗೆ ಕಾಣಲಿಲ್ಲ. ಇದಕ್ಕೆ ಕೆಲವು ಅಧಿಕಾರಿಗಳನ್ನು ಇಂಥ ಕಡೆ ನೇಮಕ ಮಾಡಿದ್ದೇವೆ, ಮುಂದಾಲೋಚನೆ ಮಾಡಿರಲಿಲ್ಲ, ಈಗ ನಾವು ಹಣ ಒದಗಿಸಬೇಕಾಗಿದೆ ಎಂದು ಹೇಳುತ್ತಿರುವ ಹಾಗೆ ಕಾಣುತ್ತದೆ. ನೀವು ಹೇಗಾದರೂ ಇನಾಂಗ್ರಾಮಗಳನ್ನು ತೆಗೆದುಹಾಕುವುದು ಖಚಿತವಾಗಿದೆ. ಅದಕ್ಕೆ ಎಷ್ಟು ಹಳ್ಳಿಗಳಲ್ಲಿ ಎಷ್ಟು ಎಕರೆ ಅಳತೆ ಮಾಡಬೇಕು, ಎಷ್ಟು ಅಸೆಸ್ ಮಾಡಬೇಕು, ಸರ್ವೆಯರು ಎಷ್ಟು ಮಂದಿಬೇಕು, ಟ್ರೈನಿಂಗ್ ಆಗಿರುವವರು ಎಷ್ಟಿದ್ದಾರೆ, ರಿಟೈರ್ ಆಗಿ ಗಟ್ಟಿಮುಟ್ಟಾಗಿರುವವರನ್ನು ನೇಮಕ ಮಾಡಿ ಜಾಗ್ರತೆ ಕೆಲಸ ಮುಗಿಸುವುದಕ್ಕೆ ಸಾಧ್ಯವಿದೆಯೆ ಎಂಬುದನ್ನು ಯೋಚಿಸಬೇಕು ಎಂದು ಹೇಳುವುದಕ್ಕಾಗಿ ಖೋತ ಸೂಚನೆಯನ್ನು ಕಳುಹಿಸಿದ್ದೇನೆ. ಇದನ್ನು ತಡ ಮಾಡುತ್ತಾ ತೆಗೆಯುವುದು ಸರಿಯಲ್ಲ, ಇದಕ್ಕೆ ಒಂದು ಸಮಿತಿ ಮಾಡಿ ಜಾಗ್ರತೆ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಏನೇನು ಕ್ರಮಗಳನ್ನು ನಡೆಸಬೇಕೋ ಅವನ್ನು ಮಾಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಪರ್ಸನಲ್ ಅಂಡ್ ಮಿಸಲೇನಿಯಸ್ ಇನಾಂ ಅಬಾಲಿಷನ್ ಆಕ್ಟಿಗೆ ಸಂಬಂಧಪಟ್ಟಂತೆ ಕೆಲವು ಇನಾಂಗ್ರಾಮಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆಂದು ಸರ್ಕಾರದವರು ಗೆಜೆಟ್ಟಿನಲ್ಲಿ ಪ್ರಕಟಣೆ ಮಾಡಿದ್ದಾರೆ, ಕೆಲವನ್ನು ಮಾತ್ರ ಪ್ರಕಟಿಸಿ ಕೆಲವನ್ನು ಬಿಟ್ಟಿರುವುದಕ್ಕೆ ಕಾರಣ ಹೇಳಿದ್ದಾರೆ, ಸರ್ವೆ ಆಗಿರುವ ಗ್ರಾಮಗಳು ಕೆಲವನ್ನು ಮಾತ್ರ ಈ ದಿವಸ ಸರ್ಕಾರದವರು ಇಷ್ಟನೆಯ ತಾರೀಖಿನಿಂದ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಕೆಲವು ಸರ್ವೆ ಆಗದಿರುವ ಗ್ರಾಮಗಳನ್ನು ತೆಗೆದುಕೊಂಡಿಲ್ಲ. ಮೈಸೂರು ಜಿಲ್ಲೆಯ ವಿಷಯವನ್ನು ಹಿಂದೆ ಈ ಸಂಬಂಧವಾದ ಬಿಲ್ಲು ಬಂದಾಗ ಹೇಳಿದ್ದೆ. ಯಳಂದೂರು ಜಹಗೀರಿಯ ಸರ್ವೆ ಸೆಟ್ಲ್‌ಮೆಂಟ್ ಆಗಿದೆ, ಅದಕ್ಕೆ ಯಾವ ವಿಧವಾದ ಸರ್ವೆಯೂ ಬೇಕಾಗಿಲ್ಲ, ಅದನ್ನು ಬೇಗ ತೆಗೆದುಕೊಳ್ಳಬೇಕು. ಸರ್ಕಾರದವರು ಇನ್ನೊಂದು ನೋಟಿಫಿಕೇಷನ್ ಹೊರಡಿಸುವುದಾಗಿ ಹೇಳಿದ್ದಾರೆ. ತಕ್ಷಣ ಹೊರಡಿಸಬೇಕು. ಕಾರಣ ಮೈಸೂರು ಜಿಲ್ಲೆಯಲ್ಲಿ ಈ ವರ್ಷ ಹೆಚ್ಚಿನ ಮಳೆಯ ಅಭಾವದಿಂದ ಯಾವ ವಿಧವಾದ ಕಾಂಗಾರಿಯನ್ನು ಇನಾಂಗ್ರಾಮಗಳಲ್ಲಿ ತೆಗೆದುಕೊಳ್ಳಬೇಕಾದರೂ ಇನಾಂದಾರರ ಒಪ್ಪಿಗೆಯಾಗಬೇಕು, ಸರ್ಕಾರದವರು ಆ ಗ್ರಾಮಗಳನ್ನು ತೆಗೆದುಕೊಳ್ಳುವ ಸಂದರ್ಭವಿರುವುದರಿಂದ ಇನಾಂದಾರರು ಒಪ್ಪಿಗೆ ಕೊಡಲು ಹಿಂದು ಮುಂದೆ ನೋಡುತ್ತಿದ್ದಾರೆ. ಒಟ್ಟಿನಲ್ಲಿ ಅವರಿಗೆ ಮನಸ್ಸಿಲ್ಲ. ಸರ್ಕಾರ ತೆಗೆದುಕೊಂಡ ಮೇಲೆ ಆ ಕೆಲಸ ಕಾರ್ಯ ಮಾಡಲಿ ಎಂಬ ಧೋರಣೆ ತೋರಿಸುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಯಳಂದೂರು ಜಹಗೀರಿಯನ್ನು ಬೇಗ ತೆಗೆದುಕೊಳ್ಳಬೇಕು. ಬೇರೆ ಗ್ರಾಮಗಳಲ್ಲಿ ತಕಾವಿ ಸಾಲ ಅಥವಾ ಬೇರೆ ವಿಧವಾದ ಸಾಲ ರೈತರಿಗೆ ಅಭಾವ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ಕೊಡಬೇಕಾದರೂ ಕೂಡ ಇನಾಂದಾರರ ಅನುಮತಿ ಬೇಕಾಗಿದೆ. ಅದನ್ನು ಕೂಡ ಅವರು ಕೊಡದಿರುವುದರಿಂದ ಈ ವಿಶೇಷ ಪರಿಸ್ಥಿತಿಯಲ್ಲಿ ಸರ್ಕಾರದವರೇನು ಸೌಲಭ್ಯ ಅಭಾವ ಪ್ರದೇಶಗಳಿಗೆ ಒದಗಿಸಿದ್ದಾರೋ ಅದು ಇನಾಂಗ್ರಾಮಗಳಲ್ಲಿ ದೊರೆಯದೆ ಹೆಚ್ಚಿನ ಕಷ್ಟ ಒದಗಿದೆ. ಆ ದೃಷ್ಟಿಯಿಂದ ಇದಕ್ಕೆ ಸಂಬಂಧಪಟ್ಟ ಹಾಗೆ ಹೆಚ್ಚಿನ ಒಂದು ಸಿಬ್ಬಂದಿಯನ್ನು ಸರ್ಕಾರದವರು ಬೇಗ ಏರ್ಪಾಡು ಮಾಡಿ ಸರ್ವೆ ಆಗದಿರುವುದನ್ನೂ ಮತ್ತು ಸರ್ವೆ ಆಗಿರುವುದನ್ನೂ ಮೈಸೂರು ಜಿಲ್ಲೆಯಲ್ಲಿ ಆದಷ್ಟು ತ್ವರಿತವಾಗಿ ತೆಗೆದುಕೊಳ್ಳಬೇ

(ಶ್ರೀ ಬಿ. ರಾಚಯ್ಯ)

ಕೆಂದು ಈ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ ತಿಳಿಸಿ ಈ ಡಿಮ್ಯಾಂಡನ್ನೂ ಅನುಮೋದಿಸುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.- ನರಸೀಪುರ).—ಸ್ವಾಮಿ, 11ನೆಯ ಡಿಮ್ಯಾಂಡಿನಲ್ಲಿ ನೂರು ರೂಪಾಯಿಗಳ ಟೋಕನ್ ಗ್ರ್ಯಾಂಟ್ ಮಾತ್ರ ಕೇಳಿದ್ದಾರೆ. ಅದೇಕೆಂದರೆ ಒಬ್ಬ ಡೆಪ್ಯುಟಿ ಕಮಿಷನರನ್ನು ಹೆಚ್ಚಾಗಿ ನೇಮಕ ಮಾಡಿಕೊಳ್ಳುತ್ತೇವೆ ಮತ್ತು ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ, ತುಮಕೂರು ಜಿಲ್ಲೆ ಈ 3 ಜಿಲ್ಲೆಗಳಿಗೆ ಮೂರು ಅಮಲ್ದಾರರನ್ನು ನೇಮಕ ಮಾಡುತ್ತೇವೆ, ಅದಕ್ಕೆ ಹಣ ಖರ್ಚಾಗುತ್ತದೆ, ಬಡ್ಜೆಟ್ ಮಾಡುವಾಗ ಇದನ್ನು ಸೇರಿಸುವುದಕ್ಕಾಗಲಿಲ್ಲ, ಕಾರಣ ಏಪ್ರಿಲ್ ಕಳೆದ ಮೇಲೆ ಸರ್ಕಾರಿ ಆರ್ಡರ್ ತಲಪಿತು ಎಂದು ಹೇಳಿದ್ದಾರೆ. ಇದಕ್ಕೆ ಎಷ್ಟು ಖರ್ಚಾಗುತ್ತದೆಂದು ಕೇಳಿಲ್ಲ. ಟೋಕನ್ ಗ್ರ್ಯಾಂಟಿಗೆ ಒಪ್ಪಿಗೆ ಕೊಡೋಣ. ಸಿಬ್ಬಂದಿಗೆ ಎಸ್ಟಿಮೇಟ್ ಎಷ್ಟು ನವೆಂಬರ್ 1941ರ ವರೆಗೆ ಎಷ್ಟು ಖರ್ಚಾಗುತ್ತದೆ ಎಂದು ಹೇಳಬೇಕಾಗಿತ್ತು. ಎರಡನೆಯದು ಈ 3 ಜಿಲ್ಲೆಗಳಿಗೆ ಈ ರೀತಿ ಏರ್ಪಾಡು ಮಾಡಿದ್ದಾರೆ; ಉಳಿದ 7 ಜಿಲ್ಲೆಗಳಲ್ಲಿ ಅಲ್ಲಿರುವ ಡೆಪ್ಯುಟಿ ಕಮಿಷನರು, ಅಮಲ್ದಾರರು ಇವರ ಮುಖಾಂತರ ಕೆಲಸ ಮಾಡಿಸಬೇಕು ಎಂಬುದು ಸರ್ಕಾರದ ಅಭಿಪ್ರಾಯವೇ ಎಂಬುದನ್ನು ತಿಳಿಯಬೇಕು. ಮೂರು ಜಿಲ್ಲೆಗಳಲ್ಲಿ ಮಾತ್ರ ಎಂದು ಹೇಳಿರುವುದರಿಂದ ಈ ಪ್ರಶ್ನೆ ಉದ್ಭವವಾಗುತ್ತದೆ, ಕೆಲಸ ಜಾಗ್ರತೆ ಆಗಬೇಕೆಂದು ಹೇಳುತ್ತಾರೆ. ಒಂಬತ್ತು ಜಿಲ್ಲೆಗಳಲ್ಲಿ ಸರ್ವೆ ಆಗಿರುವ ಇನಾಂ ಗ್ರಾಮಗಳನ್ನು ತೆಗೆದುಕೊಳ್ಳುವುದಾಗಿ ನೋಟಿಫಿಕೇಷನ್ ಹೊರಡಿಸಿದ್ದಾರೆ; ಒಂಬತ್ತು ಜಿಲ್ಲೆಗಳ ಹೆಸರುಗಳೂ ನಮೂದಾಗಿವೆ. ಅಕ್ಟೋಬರ್ ಎರಡರಿಂದ ಜಾರಿಗೆ ಬರುತ್ತದೆಂದು ಹೇಳಿ ಒಂಬತ್ತು ಜಿಲ್ಲೆ ಹೆಸರುಗಳನ್ನು ಸೂಚಿಸಿರುವಾಗ ಒಬ್ಬ ಡೆಪ್ಯುಟಿ ಕಮಿಷನರನ್ನು ಮೂರು ಡಿಸ್ಟ್ರಿಕ್ಟುಗಳಿಗಾಗಿ ನೇಮಕ ಮಾಡುತ್ತೇವೆಂದು ಹೇಳುತ್ತಾರೆ. ಅವರ ಸಹಾಯಕ್ಕೆ ಮೂರು ಜನ ಅಮಲ್ದಾರರನ್ನು ತೆಗೆದುಕೊಳ್ಳುತ್ತಾರೆ. ಒಂದೊಂದು ಜಿಲ್ಲೆಗೆ ಒಬ್ಬ ಅಮಲ್ದಾರರು ಬೇಕೆಂದು ಹೇಳಿದ್ದಾರೆ. ಮೂರು ಜಿಲ್ಲೆಗಳ ಅಮಲ್ದಾರರು ಮಾಡುವ ಕೆಲಸವನ್ನು ಒಬ್ಬ ಡೆಪ್ಯುಟಿ ಕಮಿಷನರು ನೋಡಿಕೊಳ್ಳಬೇಕು. ಈಗ ಹಾಲಿ ಇರುವ ಡೆಪ್ಯುಟಿ ಕಮಿಷನರುಗಳಿಗೆ ಆ ಕೆಲಸ ನೋಡಿಕೊಳ್ಳಲು ಸಾಧ್ಯವಿಲ್ಲವೆ, ಹಾಗೆ ಅವರೇ ನೋಡಿಕೊಂಡು ಕಡಮೆ ಖರ್ಚಿನಲ್ಲಿ ಈ ಕೆಲಸ ನಡೆಸಲು ಆಗುವುದಿಲ್ಲವೆ ಎಂಬುದನ್ನು ಪರ್ಯಾಲೋಚಿಸಬೇಕು. ಈಗ ಮೊದಲು ಮೂರು ಜಿಲ್ಲೆಯ ಇನಾಂ ಗ್ರಾಮಗಳನ್ನು ತೆಗೆದುಕೊಂಡು ಕ್ರಮಕ್ರಮವಾಗಿ ಆಮೇಲೆ ಬೇರೆ ಜಿಲ್ಲೆ ಇನಾಂ ಗ್ರಾಮ ತೆಗೆದುಕೊಳ್ಳುವುದಾದರೆ ಕೆಲಸ ನಿಧಾನವಾಗುತ್ತದೆ. ಅಕ್ಟೋಬರ್ ಎರಡರಿಂದ ಜಾರಿಗೆ ಬರಬೇಕಾದರೆ ಎಲ್ಲಾ ಜಿಲ್ಲೆಗಳಲ್ಲೂ ತಕ್ಕ ಏರ್ಪಾಡನ್ನು ಮಾಡಿರಬೇಕು. ಅದನ್ನು ಮಾಡಿದ್ದಾರೆಯೆ ಎಂಬುದು ಗೊತ್ತಾಗುವುದಿಲ್ಲ. ಇದನ್ನೂ ತಿಳಿಸಬೇಕು.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನಾನು ಈ 11ನೆಯ ನಂಬರಿನ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಈಗಾಗಲೆ ಸರ್ಕಾರದಿಂದ ಕೆಲವು ವಿವರಣೆಗಳನ್ನು ಕೇಳಿದ್ದಾರೆ. ಅದರ ಜೊತೆಗೆ ನಾನು ಈ ಸಂದರ್ಭದಲ್ಲಿ ಇನಾಂ ರದ್ದಿಯಾತಿ ಬಗ್ಗೆ ಸರ್ಕಾರದ ಕರ್ತವ್ಯಲೋಪ ಮತ್ತು ಔದಾಸೀನ್ಯ ಮನೋಭಾವ ಇವುಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ನಾವು ಆ ರೈತರುಗಳ ಕುಂದುಕೊರತೆಗಳ ಬಗ್ಗೆ ಇದೇ ಸಭೆಯಲ್ಲಿ ಅನೇಕ ವೇಳೆ ಎಷ್ಟೋ ವಿಚಾರಗಳನ್ನು ತಿಳಿಸಿರುತ್ತೇವೆ. ಈ ದಿವಸ ಮುಖ್ಯವಾಗಿ ಆ ಜಹಗೀರ್‌ದಾರರ ಮತ್ತು ಇನಾಂದಾರರ ಗ್ರಾಮದಲ್ಲಿ ವಾಸಿಸುತ್ತಿರುವ ರೈತರ ಗೋಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆ ರೈತರು ಅಲ್ಲಿ ಯಾವ ಒಂದು ಅಭಿವೃದ್ಧಿ ಕೆಲಸ ಮಾಡುವುದಕ್ಕೂ ಸಾಧ್ಯವಾಗುವುತ್ತಿಲ್ಲ. ಈ ಇನಾಂ ಗ್ರಾಮಗಳೆಲ್ಲಾ ಬಹಳ ಹಿಂದುಳಿದಂಥಾ ಪ್ರದೇಶಗಳಾಗಿರುತ್ತವೆ ಎಂದು ಅನೇಕ ಸಾರ್ತಿ ಎಷ್ಟೋ ಸಬ್‌ಜೆಕ್ಟುಗಳನ್ನು ನಾವೇ ಈ ಸಭೆಯ ಮುಂದೆ ತಂದಿದ್ದೇವೆ. ಅಷ್ಟು ವರ್ಷಗಳ ಕೂಗು ಕೇಳಿದನಂತರ ಸರ್ಕಾರದವರು ಇವರ ತೊಂದರೆಗಳನ್ನು ನಿವಾರಣೆ ಮಾಡುತ್ತೇವೆಂದು ಎರಡು ಬಗೆಯಾದ ಕಾನೂನುಗಳನ್ನು ಸಹ ಮಾಡಿದರು. ಅಪ್ಪೈಕಿ ಒಂದು ದೇವಾದಾಯ ರದ್ದಿಯಾತಿ ಕಾನೂನು ಮತ್ತೊಂದು ವ್ಯಕ್ತಿಸಂಬಂಧವಾದಂಥಾ ಇನಾಂ ರದ್ದಿಯಾತಿ ಕಾನೂನು ಎಂದು ಮಾಡಿದ್ದರು. ಹೀಗೆ ಈಗಾಗಲೇ ಕೆಲವು ಕಾನೂನುಗಳನ್ನು ಈ ಸಂಬಂಧವಾಗಿ ಕಡತಕ್ಕೇರಿಸಲಾಗಿದೆ. ಆದರೆ ಇತ್ತೀಚೆಗೆ ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಎಲ್ಲೋ ಒಂದು ಸಂದರ್ಭದಲ್ಲಿ ಭಾಷಣ ಮಾಡುತ್ತಿದ್ದಾಗ ಈ ಇನಾಂ ರದ್ದಿಯಾತಿ ಕಾನೂನು ದೇಶಾದ್ಯಂತವೂ ಜಾರಿಗೆ ಬರಬೇಕಾಗಿದ್ದರೆ ಇನ್ನೂ 5 ವರ್ಷಗಳ ಮೇಲೆ ಬೇಕಾಗುತ್ತದೆಂದು ಹೇಳಿದ್ದಹಾಗೆ ನನಗೆ ಜ್ಞಾಪಕವಿದೆ. ಅವರ ಭಾಷಣ ಆ ರೀತಿ ಇತ್ತೆಂದು ನಾನು ಎಲ್ಲಿಯೋ ಒಂದಾವರ್ತಿ ಓದಿದ ಜ್ಞಾಪಕವಿದೆ. ಈ ಧೋರಣೆಯನ್ನು ನೋಡಿದರೆ ಸರ್ಕಾರದಲ್ಲೇ ಈ ಇನಾಂದಾರರೂ ಮತ್ತು ಜಹಗೀರ್‌ದಾರರೂ ಇದ್ದಾರೋ ಏನೋ, ಅದರಿಂದ ಸರ್ಕಾರಕ್ಕೆ ಈ ಕಾನೂನನ್ನು ಸ್ವಾಗತಿಸಲು ಇಷ್ಟವಿಲ್ಲವೇನೋ ಅನ್ನುವ ಹಾಗೆ ಕಾಣುತ್ತದೆ. ಆ ಜಹಗೀರ್‌ದಾರರು ಇದೇ ಮಂತ್ರಿಮಂಡಲದಲ್ಲಿದ್ದರೂ ಇರಬಹುದು, ಆದರೆ ಆಬಗ್ಗೆ ಸ್ವಲ್ಪ ಸಂಶಯವಿರುವುದಾದರೂ ಈ ಸಭೆಯಲ್ಲಂತೂ ಇದ್ದೇ ಇದ್ದಾರೆ ಎಂದು ಹೇಳಿದರೆ ಅದೇನೂ ಒಂದು ಆಶ್ಚರ್ಯವಾದ ವಿಚಾರವಲ್ಲ. ಈಬಗ್ಗೆ ಯಾವಾಗ ಒಂದು ಕಾನೂನನ್ನು ರಚಿಸಿದರೋ ಆಗ ಅದನ್ನು ದೇಶಾದ್ಯಂತವೂ ಕೂಡಲೇ ಜಾರಿಗೆ ತರಬೇಕಾದದ್ದು ಅತ್ಯಗತ್ಯ. ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ತಿಳಿಸಿದಂತೆ ಸಾಮಾನ್ಯವಾಗಿ ಒಂಭತ್ತು—ಹತ್ತು ಜಿಲ್ಲೆಗಳಲ್ಲೂ ಇನಾಂತಿಗಳಿರುವ ಗ್ರಾಮಗಳು ಇದ್ದೇ ಇವೆ. ಸರ್ವೆ ಆಗದಿರುವಂಥಾ ಗ್ರಾಮಗಳೂ ಇವೆ. ಹೀಗಿದ್ದಾಗ್ಯೂ ಈಗ ಸರ್ಕಾರದವರು ಸಂಸ್ಥಾನದ ಜಿಲ್ಲೆಗಳ ಪೈಕಿ ಮೈಸೂರು, ಮಂಡ್ಯ ಮತ್ತು ತುಮಕೂರು ಈ ಮೂರು ಜಿಲ್ಲೆಗಳನ್ನು ಆರಿಸಿಕೊಂಡು ಅವುಗಳಿಗೋಸ್ಕರವಾಗಿ ಒಬ್ಬ ಡೆಪ್ಯುಟಿ ಕಮಿಷನರ್ ಮತ್ತು ಮೂರು ಜನ ಅಮಲ್ದಾರರುಗಳನ್ನು ಅಕ್ಟೋಬರ್ ತಿಂಗಳ ಆಖೈರುವರೆಗೆ ನೇಮಿಸತಕ್ಕ ಬಗ್ಗೆ ಆಗತಕ್ಕಂಥ ಖರ್ಚನ್ನು ನಾವು ಈ ಕನ್‌ಸಾಲಿಡೇಟೆಡ್ ಫಂಡಿನಿಂದ ಕೊಟ್ಟುಕೊಂಡು ಹೋಗುತ್ತೇವೆ ಎಂದು ಏನೋ ಒಂದು ರಾಜೀಮನೋಭಾವದಿಂದ ಈ ಮನವಿಯನ್ನು ತಂದಿರುವ ಹಾಗೆ ಹೇಳಿದ್ದಾರೆ. ಆದರೆ ಸರ್ಕಾರದವರು ಕಾನೂನು ಆದ ಮೇಲೆ ಎಷ್ಟೋ ವರ್ಷಗಳು ಕಳೆದ ನಂತರ ಈಗ ಇಷ್ಟನ್ನಾದರೂ ಮಾಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಲೇಬೇಕು. ನಮ್ಮ ಸರ್ಕಾರದವರ ಸ್ವಭಾವ ಆ ಕುಂಭಕರ್ಣನ ಸ್ವಭಾವದಂಥಾದ್ದು. ಇವರನ್ನು ಜಾಗ್ರತಗೊಳಿಸುವುದು ಬಹಳ ಕಷ್ಟ. ಸರ್ಕಾರಕ್ಕೆ ಈ ರೈತರಬಗ್ಗೆ

ಏಕೆ ಇಂಥ ಮನಸ್ಸಿದೆಯೋ ತಿಳಿಯಲಿಲ್ಲ. ಇಷ್ಟಕ್ಕಾಗಿ ಸರ್ಕಾರದವರು ಏಕೆ ಇಂಥ ದೊಡ್ಡದೊಡ್ಡ ಘೋಷಣೆಗಳನ್ನು ಮಾಡಬೇಕಾಗಿತ್ತು? ಬಾಯಲ್ಲಿ ಹೊರಡತಕ್ಕ ಮಾತುಗಳು ಎಷ್ಟರ ಮಟ್ಟಿಗಿರುತ್ತವೆ! ಹೀಗೆ ನೋಡಿದರೆ ಸರ್ಕಾರದವರು ಆಡುವುದೂ, ಮಾಡುವುದೂ ಎಲ್ಲಾ ಒಂದು ನಾಟಕ. ಈ ನಾಟಕವೆಲ್ಲ ಏಕೆ ಬೇಕು? ತಮಗೆ ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಅದನ್ನಾದರೂ ಹೇಳಿಬಿಡಿ. ಆ ಇನಾಂ ಗ್ರಾಮಗಳಲ್ಲಿರುವ ರೈತರ ಕಷ್ಟಗಳು ನಿಮಗೇನೂ ಗೊತ್ತಿಲ್ಲವೆ? ತಮ್ಮ ಕಣ್ಣುಗಳೇನು ಇಂಗಿಹೋಗಿವೆಯೋ! ನಿಮ್ಮ ಕಿವಿಗಳೇನು ಬಿದ್ದುಹೋಗಿವೆಯೋ? ನೀವು ಏಕೆ ಹೀಗೆ ಮಾತಾಡುತ್ತಿದ್ದೀರಿ ಅನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಆದರೆ ಈಗ ನಾನು ಒಂದು ವಿಷಯವನ್ನು ಸರ್ಕಾರದವರಿಂದ ಖಚಿತವಾಗಿ ತಿಳಿದುಕೊಳ್ಳಬೇಕೆಂದು ಆಶಿಸಿದ್ದೇನೆ. ಒಂದು—ಈ ವಿಚಾರದಲ್ಲಿ ಸರ್ಕಾರದವರ ನಿಜವಾದ ಅಭಿಮತವೇನು ಎನ್ನುವುದು ಇನ್ನೂ ನನಗೆ ಗೊತ್ತಾಗಿರುವುದಿಲ್ಲ. ಈ ವಿಚಾರದಲ್ಲಿ ಹೀಗೆ ಏನೋ ಒಂದು ಹೇಳುತ್ತಾ ಇವರ ಕಣ್ಣುಗಳನ್ನು ಒರೆಸಿಬಿಟ್ಟರಾಯಿತು ಎನ್ನುವ ಉದ್ದೇಶವೇ ಇವರದು? ಅಥವಾ ಏನಾದರೂ ಮಾಡಿ ತಮ್ಮ ಕರ್ತವ್ಯವ ನಿರ್ವಹಿಸಲೇಬೇಕು ಎನ್ನುವ ಉದ್ದೇಶ ಇವರಿಗಿದೆಯೋ? ಈ ವಿಚಾರಗಳ ಬಗ್ಗೆ ಇವರ ಮನೋಭಿಪ್ರಾಯ ಯಾವ ರೀತಿಯಾಗಿದೆ ಎನ್ನುವುದನ್ನು ಅವರು ತಿಳಿಸಬೇಕೆಂಬುದಾಗಿ ನಾನು ಈ ಸಂದರ್ಭದಲ್ಲಿ ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪಾಪಣ್ಣ (ಚಿಕ್ಕಬಳ್ಳಾಪುರ-ಶಿಡ್ಲಘಟ್ಟ).—ಮಾನ್ಯ ಅಧ್ಯಕ್ಷರೇ, ಈ ಮಸೂದೆ ನಮ್ಮ ಶಾಸನ ಸಭೆಯಲ್ಲೇ ಚರ್ಚೆ ಆಗಿ ಇದು ಇಲ್ಲೇ ಪಾಸಾಗಿ ಆಕ್ಟಾಗಿದ್ದರೂ ಸಹ ಇದನ್ನು ಇಲ್ಲಿಯವರೆಗೂ ದೇಶದಲ್ಲಿ ಜಾರಿಗೆ ತಾರದಿರುವುದರಿಂದ ಇನಾಂ ಗ್ರಾಮಗಳಲ್ಲಿರತಕ್ಕ ರೈತರ ತೊಂದರೆ ಇಷ್ಟೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ದಿವಸ ಅನೇಕ ಜೋಡೀದಾರರು ಜೋಡೀ ಗ್ರಾಮಗಳಲ್ಲಿ ಜಮೀನುಗಳನ್ನು ಮಾರಾಟ ಮಾಡುತ್ತಿದ್ದಾರೆ. ಅವುಗಳನ್ನು ಜಮೀನಿರುವ ಮತ್ತು ಜಮೀನು ಇಲ್ಲದ ರೈತರುಗಳು ಕೊಂಡುಕೊಳ್ಳುತ್ತಿದ್ದಾರೆ. ಡೆಪ್ಯುಟೀ ಕಮೀಷನರ ಅನುಮತಿಯನ್ನು ಪಡೆಯದೆ ಗೋಮಾಳ ಇತ್ಯಾದಿ ಜಮೀನುಗಳನ್ನು ಸಹ ಜೋಡೀದಾರರು ಮಾರಾಟ ಮಾಡಿ ಹೋಗುತ್ತಿದ್ದಾರೆ. ಇಂಥಾ ಗ್ರಾಮಗಳನ್ನು ನಾಳೆ ಸರ್ಕಾರ ತನ್ನ ವಶಕ್ಕೆ ತೆಗೆದು ಕೊಂಡಾಗ ದನಕರುಗಳಿಗೆ ಮೇಯಲು ಸ್ಥಳ ಕೊಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಆದರೆ ಸರ್ಕಾರದವರು ಹೇಳಬಹುದು. ನಾವು ಒಂದು ಕಾನೂನನ್ನೂ ಮಾಡಿದ್ದೇವೆ. ಅದಕ್ಕನುಸಾರವಾಗಿ ಜಿಲ್ಲಾಧಿಕಾರಿಗಳ ಅನುಮತಿ ಪಡೆಯದೆ ಜಮೀನುಗಳನ್ನು ಯಾರೂ ಮಾರಬಾರದು ಯಾರೂ ಕೊಳ್ಳಲೂ ಬಾರದು ಎಂಬುದಾಗಿ ಕಾನೂನು ಮಾಡಿದ್ದೇವೆ ಎಂದು. ಜಮೀನನ್ನು ಸಂಪಾದನೆ ಮಾಡಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಈ ಬಗ್ಗೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಒಂದು ದಾಖಲೆಯಿದ್ದರೆ ಸಾಕು ಮುಂದೆ ನೋಡಿಕೊಳ್ಳೋಣ ಎಂದು ಜನರು ಧಾರಾಳವಾಗಿ ದುಡ್ಡು ಕೊಟ್ಟು ಜಮೀನುಗಳನ್ನು ಆ ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೇನೇ ಕೊಂಡುಕೊಳ್ಳುತ್ತಿದ್ದಾರೆ. ಜಮೀನನ್ನು ಒಂದು ಸಾವಿರ ರೂಪಾಯಿಗಳಿಗೆ ಮಾರಿದಾಗ್ಯೂ ಕ್ರಯ ಪತ್ರದಲ್ಲಿ ಕೇವಲ ನೂರು ರೂಪಾಯಿಗಳನ್ನು ಮಾತ್ರ ನಮೂದಿಸುತ್ತಿದ್ದಾರೆ. ಹೀಗೆ ರೈತರನ್ನು ಜೋಡೀದಾರರು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ನಾಳೆ ದಿವಸ ಸರ್ಕಾರದವರು ಈ ಗ್ರಾಮಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಾಗ ಅವರಿಗೆ ಸರಿಯಾದ ಪರಿಹಾರ ಸಹ ಸಿಕ್ಕುವುದಿಲ್ಲ. ಇತ್ತಲಾಗಿ ಸರ್ಕಾರಕ್ಕೆ ಸರಿಯಾಗಿ ಸ್ಟ್ಯಾಂಪ್ ಫೀಜೂ ಸಹ ಬರುತ್ತಿಲ್ಲ. ಏನಾದರೂ ಆಗಲಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲೆಯಿದ್ದರೆ ಸಾಕೆಂದು ಅನೇಕರು ಜಮೀನುಗಳನ್ನು ಕ್ರಯಕ್ಕೆ ಕೊಂಡಿರುತ್ತಾರೆ. ಈ ಬಗ್ಗೆ ತಮಗೆ ಸತ್ಯಾಂಶ ಬೇಕಾಗಿದ್ದರೆ ಸಬ್‌ರಿಜಿಸ್ಟ್ರಾರ್ ಆಫೀಸುಗಳಿಂದ ಅಂಕೀ ಅಂಶಗಳನ್ನು ತರಿಸಿಕೊಂಡರೆ ಆಗ ತಮಗೇ ಇದೆಲ್ಲವೂ ವೇದ್ಯವಾಗುತ್ತದೆ. ಹೀಗೆ ಮಾರಾಟ ಮಾಡುವುದನ್ನಾದರೂ ತಾವು ಕೂಡಲೇ ಕಡೆಗಟ್ಟಬೇಕು.

ಮತ್ತೊಂದು ತೊಂದರೆ ಏನೆಂದರೆ, ಜೋಡೀ ಗ್ರಾಮದಲ್ಲಿರತಕ್ಕ ರೈತರಿಗೆ ಸರ್ಕಾರದಿಂದ ಸಾಲ ವಗೈರೆ ಏನೂ ದೊರೆಯುವ ಹಾಗಿಲ್ಲ. ಈ ಹಿಂದೆ ಮಂತ್ರಿಗಳು ಅವರಿಗೂ ಸಹ ಈ ರಿಯಾಯಿತಿಗಳು ದೊರೆಯುವಂತೆ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಅದನ್ನು ಇನ್ನೂ ಈಡೇರಿಸಿಲ್ಲ. ಹೀಗೆ ಸರ್ಕಾರ ಅವರಿಗೆ ನೆರವನ್ನೂ ನೀಡದೆ ಅತ್ತ ಆ ಗ್ರಾಮಗಳನ್ನೂ ತೆಗೆದುಕೊಳ್ಳದೆ ಹೀಗೆ ನಿಧಾನ ಮಾಡುತ್ತಾ ಹೋದರೆ ಆ ರೈತರ ಗತಿ ಏನಾಗಬೇಕು? ಆದಕಾರಣ ಆ ರೈತರ ಹಿತ ದೃಷ್ಟಿಯಿಂದ ತಾವು ಕೂಡಲೇ ಅವರಿಗೆ ಸರ್ಕಾರಿ ಗ್ರಾಮಗಳಲ್ಲಿರತಕ್ಕ ರೈತರುಗಳಿಗೆ ನೀಡುತ್ತಿರುವಂಥ ಎಲ್ಲ ಸೌಕರ್ಯಗಳನ್ನೂ ನೀಡಬೇಕೆಂದೂ—ಜಾಗ್ರತೆ ಇವುಗಳನ್ನೆಲ್ಲ ಸರ್ಕಾರ ತಮ್ಮ ಕೈಗೆ ತೆಗೆದು ಕೊಳ್ಳಬೇಕೆಂದೂ ಮನವಿ ಮಾಡಿಕೊಳ್ಳುತ್ತೇನೆ.

Sri H. C. LINGA REDDY (Malur).—Sir, it was only very recently we heard that the Government would be implementing the Inams Abolition Act in the surveyed and settled villages. But I consider the implementation of the Inams Abolition Act is more urgently needed in other villages which are not surveyed and settled because it is in these unsurveyed and unsettled villages that the relationship between the landlord and tenants is more strained. It is here that we find a good deal of litigation between the tenants and landlords and rights of both the landlords and tenants are indefinite and unsettled. In spite of it we hear the Government taking action only in the settled and surveyed villages and not in the unsettled and unsurveyed villages.

Again, Sir, this demand confines itself to only three districts, Myosre, Mandya and Tumkur. I do not know what the Government propose to do with regard to Kolar and many other districts where this problem is more acute than in Bangalore, Mysore or Mandya District. The remedy is to be given to those

(SRI H. C. LINGA REDDY.)

places where there is disease. I do not mean to say that this should not be extended to these three districts but at the same time we have to see that the Inams Abolition Act is implemented not only in surveyed and settled villages but also in other villages very early. In fact the Inams Abolition Act was passed two years ago and it got stuck up in the Government of India for those two years and during this long period I do not know why the Government have not been sufficiently alive to the urgency and have not introduced the measure. Therefore I strongly urge that the Inams Abolition Act has to be introduced not merely in these three districts but to other districts also where survey and settlement has not been introduced. We have now about 2100 jodi villages in the State and out of this 700 have been surveyed and settled 1,400 still remain to be surveyed and settled. Now if the Act were to be introduced only in these 700 villages, the remaining 1,400 villages will not have the benefit of this Act. Now what is happening in these 1,400 villages is, landlords have been alienating the lands and have been evicting the tenants and if you were to introduce this Inams Abolition Act in these villages very late after all the havocs have been done by the inamdars to the tenants, I am afraid the very object of the Inams Abolition Act will be frustrated and it will be something like closing the stable after the horse is stolen. Therefore, I urge the Government to see that urgent action is taken and relief given to the tenants.

ಶ್ರೀ ಟಿ. ಎಸ್. ಮಡಲಗಿರಿಗೌಡ (ಕುಣಿಗಲು).—ಸ್ವಾಮಿ, ನಾನು ಎಲ್ಲರೂ ಹೇಳಿದ್ದನ್ನೇ ಹೇಳುವುದಕ್ಕೆ ಹೋಗುವುದಿಲ್ಲ, ಈಗ ಸರ್ಕಾರದವರು ಯಾವ ಯಾವ ಜಿಲ್ಲೆಯಲ್ಲಿ ಸರ್ವೆ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೋ ಅಂಥ ಕಡೆಗಳಲ್ಲಿ ಆ ಸರ್ವೆ ಕೆಲಸ ಯಾವರೀತಿ ನಡೆಯುತ್ತಿದೆ, ಅಲ್ಲಿ ಸರ್ವೆ ಕೆಲಸಕ್ಕೆ ಏನು ಏರ್ಪಾಡಾಗಿದೆ ಎನ್ನುವುದನ್ನು ಈಗ ನಾನು ಈ ಸಭೆಯ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಎರಡು ಮಾತನ್ನು ಆಡಲಿಚ್ಛಿಸುತ್ತೇನೆ: ಸರ್ವೆ ಕೆಲಸಕ್ಕೆ ಹೋಗತಕ್ಕಂಥ ಅಧಿಕಾರಿಗಳು ಈ ಹೊತ್ತು ಸಂಪೂರ್ಣವಾಗಿ ಇನಾಂದಾರರ ಕೈವಾಡಕ್ಕೆ ಸಿಕ್ಕಿ ಬಿದ್ದಿದ್ದಾರೆ. ಈ ದಿವಸ ನಮ್ಮ ತಾಲ್ಲೂಕಿನಲ್ಲಿ ಸರ್ವೆ ಕೆಲಸ ನಡೆಯುತ್ತಿದೆ, ನಮ್ಮ ಕುಣಿಗಲ್ ತಾಲ್ಲೂಕು ಜೋಡಿ ಚನ್ನಾಪುರ ಎಂಬ ಗ್ರಾಮದಲ್ಲಿ ಈ ಸರ್ವೆ ಕೆಲಸ ಎಷ್ಟರಮಟ್ಟಿಗೆ ನಡೆಯುತ್ತಿದೆ; ಆ ಗ್ರಾಮದ ರೈತರಿಗೆ ಈ ಸರ್ಕಾರದವರಿಂದ ರಕ್ಷಣೆ ಎಷ್ಟರಮಟ್ಟಿಗೆ ಸಿಕ್ಕುತ್ತಿದೆ ಎನ್ನುವ ಬಗ್ಗೆ ಕೆಲವು ಅಂಶಗಳನ್ನು ಈಗ ತಿಳಿಸಬೇಕೆಂದಿರುತ್ತೇನೆ. ಈ ದಿವಸ ಸರ್ವೆ ಪರಿಣಾಮದಿಂದ ಸುಮಾರು ಒಂದು ಸಾವಿರ ಜನರು ತಮ್ಮ ಜಮೀನನ್ನು ಕಳೆದುಕೊಂಡು ಬೀದಿಯ ಭಿಕಾರಿಗಳಾಗಿದ್ದಾರೆ. ಅಂಥಾ ಜನರನ್ನೆಲ್ಲಾ ಈ ದಿವಸ ಆ ಊರಿನಿಂದಲೇ ಆಚೆಗೆ ಓಡಿಸಿಬಿಡಬೇಕೆಂಬ ಪ್ರಯತ್ನಗಳನ್ನು ಕೂಡ ನಡೆಸುತ್ತಿದ್ದಾರೆ. ಇದಕ್ಕೆಲ್ಲಾ ಸಹಾಯಗಳನ್ನು ಸರ್ವೆ ಇಲಾಖೆಯವರು ಇನಾಂದಾರರಿಗೆ ಒದಗಿಸುತ್ತಿದ್ದಾರೆ. ರೈತರು ತಮ್ಮ ಹಕ್ಕುಬಾಧ್ಯತೆಗಳನ್ನು ದೃಢಪಡಿಸಿಕೊಳ್ಳಲು ಎಷ್ಟೇ ಪ್ರಯತ್ನ ಮಾಡಿದಾಗ್ಯೂ ಈ ಸರ್ವೆ ಇಲಾಖೆಯವರು ಅದನ್ನು ತಳ್ಳಿಹಾಕಿರುವ ನಿದರ್ಶನಗಳನ್ನು ನಾವು ಕಣ್ಣಾರೆ ನೋಡಿದ್ದೇವೆ. ಈ ದಿವಸ ಸರ್ಕಾರ ಅನ್ನುವುದೊಂದು ಇದೆಯೋ ಇಲ್ಲವೋ ಎಂಬ ಅನುಮಾನ ಉಂಟಾಗತಕ್ಕ ರೀತಿಯಲ್ಲಿ ಅವರು ವರ್ತಿಸುತ್ತಿದ್ದಾರೆ. ಇಂಥಾ ರೀತಿಯ ಸರ್ವೆ ಆಗುವುದಾದರೆ ಅದರಿಂದ ಏನೂ ಪ್ರಯೋಜನವಿಲ್ಲ.

2 P.M.

ಈ ರೀತಿಯಾಗಿ ಸರ್ವೆ ಇಲಾಖೆಯವರು ಸರಿಯಾಗಿ ಕೆಲಸ ಮಾಡದೆ ರೈತಾಪಿ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಆದುದರಿಂದ ಇವರು ಸರಿಯಾದ ರೀತಿಯಲ್ಲಿ ಅವರ ಸ್ಪಷ್ಟವಾದ ಕೆಲಸವೇನಿದೆಯೋ ಆ ರೀತಿಯಾಗಿ ಮಾಡದೆ ಹೋದರೆ ಏನೂ ಪ್ರಯೋಜನವಿಲ್ಲ. ಅವರುಗಳು ಸರಿಯಾಗಿ ಕೆಲಸ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಇನಾಂ ಗ್ರಾಮಗಳಲ್ಲಿ ಸರ್ವೆಮಾಡುವ ಸಂದರ್ಭದಲ್ಲಿ ಸರ್ವೆ ಇಲಾಖೆಯವರು ಯಾವ ಕ್ರಮವನ್ನನುಸರಿಸುತ್ತಾರೆನ್ನುವ ವಿಚಾರದಲ್ಲಿ ಹೇಳುವುದಾದರೆ, ಗ್ರಾಮಾಧಿಕಾರಿಗಳು ಬರೆದಿರತಕ್ಕ ಭೂಮಿ ಮಾಲೀಕತೆಯ ರಿಜಿಸ್ಟರ್‌ಗಳಂತೆ ಪೋಡು ಮಾಡುವ ರೂಢಿ ಇರುತ್ತದೆ. ಅದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ವಿಚಾರ. ಸರ್ವೆ ಇಲಾಖೆಯವರು ಇದರಲ್ಲಿರುವ ಅಂಶಗಳನ್ನು ತಾವು ಜಮೀನು ಅಳೆಯುವುದಕ್ಕೆ ಬಂದಾಗ ತಾವು ಬರೆದುಕೊಳ್ಳುವುದಕ್ಕೆ ಮಾತ್ರ ಉಪಯೋಗಿಸುತ್ತಾರೆ. ಜಮೀನು ಯಾರದು, ಯಾರ ಹೆಸರಿನಲ್ಲಿದೆ, ಯಾರ ಜಮೀನು ಯಾರ ಹೆಸರಿಗೆ ಬರೆದಿರುತ್ತಾರೆ ಎಂಬುದನ್ನು ಅವರು ನೋಡುವುದಿಲ್ಲ. ಅವರು ಬರೆದಿರುವ ಪುಸ್ತಕದಿಂದ ತಮಗೆ ಬೇಕಾದ ವಿಷಯಗಳನ್ನು ಬರೆದುಕೊಂಡು, ಸರ್ವೆ ಕೆಲಸ ಮುಗಿಸಿಕೊಂಡು ಬರುತ್ತಾರೆ. ಈ ಸಂಬಂಧದಲ್ಲಿ ನನ್ನ ಮನಸ್ಸಿನಲ್ಲಿರುವ ಒಂದು ವಿಚಾರವೇನೆಂದರೆ ಸರ್ವೆಮಾಡುವಾಗ ಗ್ರಾಮಗಳಿಗೆ ಹೋಗುವುದಕ್ಕೆ ಮುನ್ನ ರೆವಿನ್ಯೂ ಆಫೀಸಿಗೆ ಹೋಗಿ, ಅಮಲ್ದಾರರಗಳನ್ನು ಮುಖ್ಯವಾಗಿ ಕರೆದುಕೊಂಡು ಹೋಗಿ, ಇಂಥಿಂಥ ಜಮೀನುಗಳು ಇಂಥಿಂಥವರ ಹೆಸರಿಗೆ ಬರೆದಿದ್ದಾರೆ, ಯಾವರೀತಿ ಬರೆದಿದ್ದಾರೆ ಎಂಬ ಲೆಕ್ಕಾಚಾರವನ್ನೆಲ್ಲ, ರೈತರ ಸಭೆಯನ್ನು ಸೇರಿಸಿ, ಆ ಸಭೆಯಲ್ಲಿ ಓದಿ ತಿಳಿಸಿ, ಅವರ ತೊಡಕುಗಳೇನಾದರು ಇದ್ದರೆ ಅವುಗಳನ್ನು ಕೇಳಿ ಸರಿಮಾಡುವುದಿಲ್ಲ. ಅದಕ್ಕೆ ಬದಲಾಗಿ ಇವರುಗಳು ಹಳ್ಳಿಗೆ ಹೋದಾಗ ನಾನಾಗಲೇ ಹೇಳಿದಂತೆ ಮಾಡುವುದರಿಂದ ಹಳ್ಳಿಯವರ ಅನೇಕ ತೊಡಕುಗಳು ಸ್ಥಳದಲ್ಲಿಯೇ ಪರಿಹಾರವಾಗಿ, ಆಮೇಲೆ ರೈತರು ಕೋರ್ಟಿಗೆ ಹೋಗುವುದು ತಪ್ಪುತ್ತದೆ. ನೆಲಮಂಗಲ ತಾಲ್ಲೂಕು ಜೋಡಿ ಬಾಣಸವಾಡಿ

ಗ್ರಾಮದಲ್ಲಿ ಒರಿಜಿನಲ್ ಸರ್ವೆ ಕಾಲದಲ್ಲಿ ಸರ್ವೆ ಕೆಲಸ ನಡೆದಾಗ ನಾಲ್ಕಾರು ಜನರ ಹಕ್ಕನ್ನು ತಪ್ಪಿಸಿ ಒಬ್ಬ ಜೋಡಿದಾರರು ಒಬ್ಬ ರೈತನಿಗೆ ಬರೆದರು. ಹೀಗೆ ಮಾಡುವಾಗ ಅಣ್ಣ ತಮ್ಮಂದಿರಲ್ಲಿಯೇ ಭಿನ್ನಾಭಿಪ್ರಾಯಗಳು ಹುಟ್ಟುವಂತೆ ಮಾಡಿ, ಅವರಿಬ್ಬರೂ ಜಗಳವಾಡುತ್ತಿದ್ದರೆ ತಾವು ಸುಸೂತ್ರವಾಗಿ ರೂಢಿಸಿಕೊಳ್ಳಬಹುದೆಂಬ ಮನೋಧರ್ಮವುಳ್ಳವರಾಗಿರುತ್ತಾರೆ. ಸರ್ವೆ ಇಲಾಖೆಯವರು ಮುಂಚಿತವಾಗಿ ರೈತರಿಗೆ ತಿಳಿಸಿ ಸರ್ವೆಮಾಡುವಾಗ ಯಾರ ಹಕ್ಕಿಗೆ ಧಕ್ಕೆ ಬಂದಿದೆ ಎಂದು ನೋಡಿ ಮಾಡಿಲ್ಲವೆಂದು ನನಗನ್ನಿಸುತ್ತದೆ. ಮಾಗಡಿ ತಾಲ್ಲೂಕು ತಿರುಮಳಾಪುರ ಗ್ರಾಮದಲ್ಲಿ ವೃತ್ತಿಗಳನ್ನು ಮಾರಿ ರೈತರಿಗೆ ತೊಡಕನ್ನು ತಂದು ಹಾಕಿದ್ದಾರೆ. ಸರ್ವೆ ಮಾಡುವ ಕಾಲದಲ್ಲಿ ಅವರವರ ಹಕ್ಕನ್ನು ಬರೆದುಕೊಂಡು ಆದಷ್ಟು ಜಾಗ್ರತೆ ಪರಿಶೀಲನೆಮಾಡಿ ಸರ್ವೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಅವರು ಹಾಗೆ ಮಾಡದೆ ತಮಗೆ ತೋಚಿದ ರೀತಿಯಲ್ಲಿ ಬರೆದುಕೊಂಡು ಹೋಗಿ, ಬೇಕಾದರೆ ನೀವು ಕೋರ್ಟಿಗೆ ಹೋಗಿ ಎಂದು ಅನೇಕ ಜನರನ್ನು ಅನಾವಶ್ಯಕವಾಗಿ ಕೋರ್ಟಿಗೆ ಕಳುಹಿಸುತ್ತಾರೆ. ಇದನ್ನು ಕೂಡಲೇ ತಪ್ಪಿಸಬೇಕು.

ಅಲ್ಲದೆ ಇನಾಂ ಗ್ರಾಮಗಳಲ್ಲಿ ಜಮೀನು ಮಾರಾಟ ಮಾಡಬೇಕಾದರೆ ಡೆಪ್ಯುಟಿ ಕಮಿಷನರ ಗಮನಕ್ಕೆ ತಂದು ಅವರಿಂದ ಅಪ್ಪಣೆಯನ್ನು ಪಡೆಯಬೇಕಾಗಿದೆ. ಆದರೆ ಕೆಲವು ಕಡೆಗಳಲ್ಲಿ ಈ ರೀತಿ ಡೆಪ್ಯೂಟಿ ಕಮಿಷನರ ಅಪ್ಪಣೆ ಪಡೆಯದೆಯೇ ಜಮೀನುಗಳು ವಿಲೇವಾರಿಯಾಗಿವೆ. ಈ ರೀತಿಯಾಗಿ ಎಲ್ಲೆಲ್ಲೂ ನಡೆಯುತ್ತಿದೆ ಎಂದು ತಿಳಿದುಬಂದಿದೆ, ಇದು ಬಹಳ ಅಕ್ರಮವಾದದ್ದು. ಇಂಥ ವ್ಯಾಪಾರಗಳನ್ನು ಕೂಡಲೇ ಸರ್ಕಾರದವರು ನಿಲ್ಲಿಸಬೇಕು. ಬೆಂಗಳೂರು ಜಿಲ್ಲೆಯಲ್ಲಿ ನಡೆದ ಒಂದು ಸಂಗತಿಯನ್ನು ತಿಳಿಸುತ್ತೇನೆ. ನೆಲಮಂಗಲ ತಾಲ್ಲೂಕು ಭೂಸಂದ್ರ ಗ್ರಾಮದಲ್ಲಿ ಒಂದು ಜಮೀನನ್ನು ಮಾರುವುದಕ್ಕೆ ಡೆಪ್ಯುಟಿ ಕಮಿಷನರ ಹತ್ತಿರ ಅಪ್ಪಣೆಯನ್ನು ತೆಗೆದುಕೊಂಡು 200-300 ವರ್ಷಗಳಿಂದಲೂ ಒಬ್ಬನು ಅನುಭವಿಸುತ್ತಿದ್ದ ಜಮೀನನ್ನು ಬೇರೆಯೊಬ್ಬರಿಗೆ ಮಾರಿದ್ದಾರೆಂದು ತಿಳಿದು ಬಂತು. ಇಂಥಾದ್ದು ಘೋರ ಅನ್ಯಾಯ. ಹೀಗೆಲ್ಲ ನಡೆಯಬಾರದು. ಆದುದರಿಂದ ಇಂಥ ಅನ್ಯಾಯಗಳೆಲ್ಲ ತಪ್ಪಬೇಕಾದರೆ ಎಲ್ಲ ಜೋಡಿ ಗ್ರಾಮಗಳನ್ನೂ ಏಕಕಾಲದಲ್ಲಿ ಸರ್ವೆ ಮಾಡುವುದಕ್ಕೆ ತೆಗೆದುಕೊಂಡು, ಒಂದು ವ್ಯವಸ್ಥಿತ ರೂಪದಲ್ಲಿ ಸರ್ವೆ ಮಾಡಿಸಬೇಕು. Batch by batch ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಸರ್ವೆಮಾಡಿಸಿದರೆ ಸರ್ವೆ ಕೆಲಸವೇನೋ ಆಗುತ್ತದೆ. ನಾನಾಗಲೇ ಹೇಳಿದಂತೆ ಸರ್ವೇಯರ್ ಅವರ ಒಂದು ಕಾರ್ಯಕ್ರಮ ಈಗ touring talkies ನಂತೆ ಇದೆ. ಬೇಗ ಮುಗಿಯುವುದಿಲ್ಲ, ತಮ್ಮ ಪ್ರೋಗ್ರಾಂ ಪ್ರಕಾರ ಪ್ರತಿ ಸ್ಥಳದಲ್ಲಿಯೂ ತಂಗಿ ಆಯಾ ಗ್ರಾಮಗಳಲ್ಲಿ ಜಮೀನುಗಳ ಬಗ್ಗೆ ತಕರಾರುಗಳೇನಾದರೂ ಇದ್ದರೆ ಅವುಗಳನ್ನು ಅಮಲ್ದಾರರ ಗಮನಕ್ಕೆ ತಂದು ಆಯಾ ಸ್ಥಳಗಳಲ್ಲಿಯೇ ಪರಿಹಾರಮಾಡುವ ಏರ್ಪಾಡನ್ನು ಮಾಡಿದರೆ ರೈತರಿಗೆ ಉಪಯೋಗವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ).—ಸ್ವಾಮಿ, ಇನಾಂ ರದ್ದಿಯಾತಿ ಬಿಲ್ಲನ್ನು ಜಾರಿಗೆ ತರಲು ನಿಧಾನ ಮಾಡುವುದರಿಂದ ಎಷ್ಟು ತೊಂದರೆಗಳಿವೆ ಎಂಬುದನ್ನು ಸರ್ಕಾರದವರ ಗಮನಕ್ಕೆ ತರಲು ಒಂದೆರಡು ಮಾತುಗಳನ್ನಾಡುತ್ತೇನೆ. ಇನಾಂ ಗ್ರಾಮಗಳ ಕೆರೆ ಕಟ್ಟೆಗಳು ಒಡೆದು ಹತ್ತಾರು ವರ್ಷಗಳಾಗಿ ಬಹಳ ನೀರು ಫಲವತ್ತಾದ ಅಚ್ಚುಕಟ್ಟಿನ ಮೇಲೆ ಹರಿದು, ಆ ಜಮೀನೆಲ್ಲ ಕೊರೆದುಕೊಂಡು ಹೋಗಿ ದೊಡ್ಡ ಹಳ್ಳಗಳಾಗಿ ರೈತರಿಗೆ ಭಾರಿ ನಷ್ಟವಾಗಿದೆ. ಈ ಕೆರೆಗಳನ್ನು ರಿಪೇರಿಮಾಡಿಕೊಡುವ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಕೆಲವು ಸಂದರ್ಭಗಳಲ್ಲಿ ಜೋಡಿ ರೂಲ್ಸ್ ವಗೈರೆ ಏನೂ ನೋಡದೆ, ಕೆಲವು ಜೋಡಿ ಗ್ರಾಮಗಳಿಗೆ ಸೇರಿದ ಕೆರೆ ಕಟ್ಟೆಗಳನ್ನು ಮಾತ್ರ ದುರಸ್ತು ಮಾಡಿಸಿದ್ದಾರೆ; ಇನ್ನು ಕೆಲವು ಸಂದರ್ಭಗಳಲ್ಲಿ, ಕೆಲವು ಜೋಡಿಗ್ರಾಮಗಳ ಕೆರೆ ಕಟ್ಟೆಗಳನ್ನು ದುರಸ್ತು ಮಾಡಿಕೊಡಬೇಕೆಂದು ಕೇಳಿದಾಗ ಅವರ ವಿಷಯದಲ್ಲಿ ಮಾತ್ರ ಈ ಜೋಡಿ ರೂಲ್ಸ್ ಏನಿವೆಯೋ ಅವುಗಳನ್ನು ಬಲವಾಗಿ ಹಿಡಿದುಕೊಂಡು, ಜೋಡಿ ಗ್ರಾಮದ ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳ ತೊಂದರೆಗಳಾಗಿವೆ. ಉದಾಹರಣೆಗೆ ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ಮೇಡಿಹಾಳ ಎಂಬ ಗ್ರಾಮಕ್ಕೆ ಸೇರಿದ ಕೆರೆಯು ಒಡೆದುಹೋಗಿ 20 ವರ್ಷಗಳಾಗಿವೆ. ಡೆಪ್ಯುಟಿಕಮಿಷನರ್ ಅವರು ಸರ್ವೆ ಮಾಡುವುದಕ್ಕಾಗಿ 50 ರೂಪಾಯಿಗಳನ್ನು ಕೂಡ ಖಜಾನೆಗೆ ಕಟ್ಟಿಸಿಕೊಂಡರೆ, ಅದನ್ನು ಸರ್ವೆಮಾಡಿಸಿ, ಮಂಜೂರಾತಿಗೆ ಕಳುಹಿಸಿಕೊಟ್ಟರು. ರೆವಿನ್ಯೂ ಕಮಿಷನರ್ ಅವರು ಸರ್ವೇ ಸೆಟಲ್‌ಮೆಂಟ್ ಆಗುವ ವರೆಗೂ ಅದನ್ನು ಮಾಡಕೂಡದೆಂದು ಆಜ್ಞೆ ಮಾಡಿದ್ದಾರೆ. ಇಂಥ ಅನೇಕ ತೊಂದರೆಗಳಾಗುತ್ತಿವೆ. ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ತರಲು ನಿಧಾನ ಮಾಡುವುದರಿಂದ ಇನಾಂ ಗ್ರಾಮಗಳ ರೈತರಿಗೆ ಬಹಳ ತೊಂದರೆಗಳುಂಟಾಗುತ್ತಿವೆ. ಆದುದರಿಂದ ಇದನ್ನು ತಕ್ಷಣ ಜಾರಿಗೆ ಮಾಡುವುದು ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ರೆವೆನ್ಯೂ ಮತ್ತು ವ್ಯವಸಾಯ ಶಾಖಾ ಮಂತ್ರಿಗಳು).—ಸ್ವಾಮಿ, ಈ ಡಿಮ್ಯಾಂಡಿನಲ್ಲಿ ಇನಾಂ ರದ್ದಿಯಾತಿ ಕಾನೂನನ್ನು ಜಾರಿಗೆ ಕೊಡಲಿಕ್ಕೆ ಅವಶ್ಯಕವಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ತಗಲತಕ್ಕ ಖರ್ಚಿನ ಬಗ್ಗೆ ತಮ್ಮ ಅಂಗೀಕಾರವನ್ನು ಕೊಡಬೇಕೆಂದು ಕೇಳಿದ್ದೇವೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರವರು ಹೇಳಿದಂತೆ ಈ ಪ್ರಪೋಸಲ್ ಬಡ್ಜೆಟ್ ತಯಾರಾದ ಮೇಲೆ ಮಂಜೂರಾತಿಯನ್ನು ಪಡೆದದ್ದರಿಂದ ಈ ಸಭೆಯ ಮುಂದೆ ಬರಬೇಕಾಗಿ ಬಂತು. ನಾವು ನೂರು ರೂಪಾಯಿಗಳನ್ನು ಕೇಳಿರುವುದು ಒಂದು ಸಾಂಕೇತಿಕ ಗ್ರಾಂಟ್ ಮಾತ್ರ. ಇದಕ್ಕೆ ಸಂಬಂಧಪಟ್ಟ ಖರ್ಚನ್ನು ಆ ಇಲಾಖೆಗೆ ಒದಗಿಸಿರತಕ್ಕ ಹಣದಲ್ಲಿ ಒದಗಿಸಲು ಸಾಧ್ಯವಾಗಿರುವುದರಿಂದ ಎಷ್ಟು ಖರ್ಚಾಗುತ್ತದೆಂಬುದು ಸಂಪೂರ್ಣವಾಗಿ ಇಲ್ಲಿ ನಮೂದಾಗಿಲ್ಲ.

ಶ್ರೀಮಾನ್ ಮುನಿಸ್ವಾಮಯ್ಯನವರು ಒಟ್ಟು ಎಷ್ಟು ಖರ್ಚಾಗುತ್ತದೆ, ಎಷ್ಟು ಸಿಬ್ಬಂದಿಬೇಕು, ಎಲ್ಲ ಗ್ರಾಮಗಳನ್ನೂ ತೆಗೆದುಕೊಳ್ಳಬೇಕಾದರೆ, ಎಲ್ಲ ಗ್ರಾಮಗಳಲ್ಲಿಯೂ ಕೂಡ ಈ ಕಾನೂನನ್ನು ಜಾರಿಗೆ ಕೊಡಬೇಕಾದರೆ ಎಷ್ಟು ಖರ್ಚಾಗುತ್ತದೆ, ಮತ್ತು ಇದಕ್ಕೆ ಬೇಕಾದ ಸಿಬ್ಬಂದಿಯನ್ನೆಲ್ಲ ಏಕ ಕಾಲದಲ್ಲಿ ನೇಮಕ ಮಾಡಿಕೊಂಡು ಕೆಲಸಮಾಡಬೇಕೆಂದು ಸಲಹೆಮಾಡಿದರು. ಶ್ರೀಮಾನ್ ರಾಚಯ್ಯನವರು ಮೈಸೂರು ಜಿಲ್ಲೆಯಲ್ಲಿರುವ ಯಳಂದೂರು ಜಹಗೀರನ್ನು ಇದರಲ್ಲಿ ಸೇರಿಸಿಲ್ಲ, ಆದರಿಂದ ಬಹಳ ತೊಂದರೆಗಳಿವೆ, ಅವುಗಳನ್ನು ಸರಿಪಡಿಸುವುದು ಬಹಳ ಅವಶ್ಯಕವೆಂದು ಹೇಳಿದರು. ನಾವು ಇನಾಂ ಗ್ರಾಮಗಳಿಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಸಂಬಂಧಪಟ್ಟ ಅಂಕಿ ಅಂಶಗಳನ್ನು ನೋಡುವುದಾದರೆ, ಸಂಸ್ಥಾನದಲ್ಲಿ ಒಟ್ಟು 2106 ಇನಾಂ ಗ್ರಾಮಗಳಿವೆ, ಇವುಗಳಪೈಕಿ 1347 ಗ್ರಾಮಗಳ ಸರ್ವೆ ಆಗಿಲ್ಲ; 759 ಗ್ರಾಮಗಳ ಸರ್ವೆ ಆಗಿದೆ. ಅವುಗಳಪೈಕಿ ಜಿಲ್ಲಾ ವಾರು ಸಂಖ್ಯೆ ಈ ರೀತಿಯಿದೆ. ಬೆಂಗಳೂರು ಜಿಲ್ಲೆಯಲ್ಲಿರುವ 636 ಗ್ರಾಮಗಳ ಪೈಕಿ 475 ಸರ್ವೆ ಆಗಿಲ್ಲ; 161 ಸರ್ವೆ ಆಗಿ, 113 ಗ್ರಾಮಗಳು ನೋಟಿಫೈ ಆಗಿವೆ. ಕೋಲಾರ ಜಿಲ್ಲೆಯ 590 ಗ್ರಾಮಗಳಪೈಕಿ 523 ಸರ್ವೆ ಆಗಿಲ್ಲ; 67 ಸರ್ವೆ ಆಗಿ, 31 ಗ್ರಾಮಗಳು ನೋಟಿಫೈ ಆಗಿವೆ. ತುಮಕೂರು ಜಿಲ್ಲೆಯ 193 ಗ್ರಾಮಗಳ ಪೈಕಿ 125 ಸರ್ವೆ ಆಗಿಲ್ಲ, 68 ಸರ್ವೆ ಆಗಿ 34 ಗ್ರಾಮಗಳು ನೋಟಿಫೈ ಆಗಿವೆ. ಮೈಸೂರು ಜಿಲ್ಲೆಯ 200 ಗ್ರಾಮಗಳಲ್ಲಿ 36 ಸರ್ವೆ ಆಗಿಲ್ಲ, 164 ಸರ್ವೆ ಆಗಿವೆ, ಇದರಲ್ಲಿ ಮೊದಲನೆಯ ಸಲ 111 ಗ್ರಾಮಗಳು ನೋಟಿಫೈ ಆಗಿವೆ. ಇನ್ನೂ 27 ಗ್ರಾಮಗಳನ್ನು ಸಹ ನೋಟಿಫೈ ಮಾಡುವುದಕ್ಕೆ ಆಜ್ಞೆಯಾಗಿದೆ. ಬಹುಶಃ ನೋಟಿಫಿಕೇಷನ್ ಇಷ್ಟು ಆಗಿರಬೇಕು; ಅಥವಾ ಇಷ್ಟರಲ್ಲಿಯೇ ಆಗುತ್ತದೆ. ಮಂಡ್ಯ ಜಿಲ್ಲೆಯ 139 ಗ್ರಾಮಗಳಪೈಕಿ 29 ಸರ್ವೆಯಾಗಿಲ್ಲ, 110 ಸರ್ವೆ ಆಗಿ 71 ಗ್ರಾಮಗಳು ನೋಟಿಫೈ ಆಗಿವೆ. ಹಾಸನ ಜಿಲ್ಲೆಯ 178 ಗ್ರಾಮಗಳಪೈಕಿ 86 ಗ್ರಾಮಗಳ ಸರ್ವೆ ಆಗಿಲ್ಲ, 92 ಸರ್ವೆಯಾಗಿ 43 ಗ್ರಾಮಗಳು ನೋಟಿಫೈ ಆಗಿವೆ. ಶಿವಮೊಗ್ಗ ಜಿಲ್ಲೆಯ 75 ಗ್ರಾಮಗಳ ಪೈಕಿ 35 ಸರ್ವೆ ಆಗಿಲ್ಲ, 40 ಸರ್ವೆಆಗಿ 6 ಗ್ರಾಮಗಳು ನೋಟಿಫೈ ಆಗಿವೆ. ಚಿತ್ರದುರ್ಗ ಜಿಲ್ಲೆಯ 36 ಗ್ರಾಮಗಳ ಪೈಕಿ 20 ಸರ್ವೆ ಆಗಿಲ್ಲ, 16 ಸರ್ವೆ ಆಗಿ 11 ಗ್ರಾಮಗಳು ನೋಟಿಫೈ ಆಗಿವೆ. ಚಿಕ್ಕಮಗಳೂರು ಜಿಲ್ಲೆಯ 59 ಗ್ರಾಮಗಳಪೈಕಿ 18 ಸರ್ವೆ ಆಗಿಲ್ಲ, 41 ಸರ್ವೆ ಆಗಿ 3 ಗ್ರಾಮಗಳು ನೋಟಿಫೈ ಆಗಿವೆ. ಒಟ್ಟು ಸರ್ವೆ ಆಗಿರುವ 759 ಗ್ರಾಮಗಳಪೈಕಿ 450 ಗ್ರಾಮಗಳನ್ನು ನೋಟಿಫೈ ಮಾಡಲಾಗಿದೆ. ಇನ್ನೂ 310 ಗ್ರಾಮಗಳನ್ನು ಮಾಡಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸರ್ವೆ ಆಗಿ ಸೆಟಲ್‌ಮೆಂಟ್ ಆಗದೆ ಬಾಕಿ ಇರುವ ಗ್ರಾಮಗಳೆಷ್ಟಿವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ವೆ ಅಂಡ್ ಸೆಟ್ಲ್‌ಮೆಂಟ್ ಎಲ್ಲ ಪೂರ್ತಿಯಾಗಿರುವ ಗ್ರಾಮಗಳ ಸಂಖ್ಯೆಯನ್ನು ಮಾತ್ರ ನಾನು ಹೇಳಿದ್ದೇನೆ. ಬಾಕಿ ವಿವರಗಳು ಈಗ ನನ್ನಮುಂದೆ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಕೊಡುತ್ತೇನೆ. ಸರ್ವೆ ಸೆಟಲ್‌ಮೆಂಟ್ ಆಗಿರುವ 759 ಗ್ರಾಮಗಳಲ್ಲಿ ಕೇವಲ 450 ಗ್ರಾಮಗಳನ್ನು ನೋಟಿಫೈ ಮಾಡಿದ್ದೀರಿ. ಉಳಿದ ಗ್ರಾಮಗಳನ್ನು ಯಾತಕ್ಕೋಸ್ಕರ ನೋಟಿಫೈ ಮಾಡಿಲ್ಲವೆಂದು ಕೆಲವರು ಕೇಳಿದರು. ಇದರಲ್ಲಿ ನಮಗಿರುವ ತೊಂದರೆ ಏನೆಂದರೆ mixed inams, ಸಮಾಸೃಷ್ಟಿ, ದೇವದಾಯ ಇತ್ಯಾದಿ ಮಿಶ್ರಣವಾಗಿರುವುದರಿಂದ ಸ್ವಲ್ಪ ಪರಿಶೀಲನೆಮಾಡಿ ನೋಟಿಫೈ ಮಾಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದೇವೆ. ಆದ್ದರಿಂದ ಇವುಗಳನ್ನು ಸಾಧ್ಯವಾದಷ್ಟು ಬೇಗ ನೋಟಿಫೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆ ಮೇಲೆ ಈಗ ಕೇಳಿರುವ ಸಿಬ್ಬಂದಿ 450 ಗ್ರಾಮಗಳಿಗೂ ಕೂಡ ಸಾಕಾಗುತ್ತದೆಯೇ! ಇನ್ನೂ ಒಬ್ಬ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿಕೊಂಡು ಬೇರೆ ಹೆಡ್‌ಕ್ವಾರ್ಟರ್ಸ್ ಮಾಡಿಕೊಂಡು ಯಾಕೆ ಕೆಲಸವನ್ನು ಮಾಡಬಾರದೆಂದು ಹೇಳಿದರು. ಈಗ ವ್ಯವಸ್ಥೆಮಾಡಿರುವ ಪ್ರಕಾರ ಪ್ರತಿ 50 ಗ್ರಾಮಗಳಿಗೂ ಒಬ್ಬ ಅಮಲ್ದಾರ್ ಬೇಕು. ಒಬ್ಬ ಅಮಲ್ದಾರರಿಗೆ ಇಬ್ಬರು ರೆವೆನ್ಯೂ ಇನ್ಸ್‌ಪೆಕ್ಟರುಗಳೂ, ಒಬ್ಬ ಮೊದಲನೆ ದರ್ಜೆ ಗುಮಾಸ್ತೆ, ಇಬ್ಬರು ಎರಡನೆ ದರ್ಜೆ ಗುಮಾಸ್ತರು, ಒಬ್ಬ ಅಟೆಂಡರ್ ಮತ್ತು ಮೂರುಜನ ಜವಾನರು ಬೇಕು ಎಂದು ನಿರ್ಧರಮಾಡಿದ್ದೇವೆ. ಒಬ್ಬ ಜಿಲ್ಲಾಧಿಕಾರಿಗಳನ್ನು ಮಾರ್ಚಿ ತಿಂಗಳು 17ನೇ ತಾರೀಖು ನೇಮಕ ಮಾಡಲಾಯಿತು. ಒಬ್ಬ ಅಮಲ್ದಾರರನ್ನೂಸಹ ಆವಾಗ ನೇಮಕ ಮಾಡಲಾಯಿತು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಾರ್ಚಿ 17ರಲ್ಲಿ ಸರ್ಕಾರಿ ಹುಕುಂ ಆದಮೇಲೆ ತಾನೆ ಜಿಲ್ಲಾಧಿಕಾರಿಗಳನ್ನು ನೇಮಕವಾಡುವುದು? ಹಾಗಿರುವಾಗ ಮಾರ್ಚಿ ತಿಂಗಳಲ್ಲೇ ಏಕೆ ಬಡ್ಜೆಟ್ಟಿನಲ್ಲಿ ಈ ಸಂಬಂಧವಾದ ಖರ್ಚನ್ನು ಸೇರಿಸಲಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರಣ ಇಷ್ಟೆ: ಬಡ್ಜೆಟ್ಟೆಲ್ಲಾ ಫೆಬ್ರವರಿ ಆಖೈರಿನಲ್ಲಿ ಫೈನಲೈಸ್ ಆಗುತ್ತದೆ. ಆದ್ದರಿಂದ ಮಾರ್ಚಿ 17ರಲ್ಲಿ ಆರ್ಡರಾದುದನ್ನು ಬಡ್ಜೆಟ್ಟಿನಲ್ಲಿ ಸೇರಿಸಲು ಸಾಧ್ಯವಾಗಲಿಲ್ಲ. 450 ಗ್ರಾಮಗಳಿಗೆ ಅನ್ವಯವಾಗುವಂತೆ ಒಂಭತ್ತು ಜನ ಅಮಲ್ದಾರರುಗಳನ್ನು ನೇಮಕಮಾಡುತ್ತೇವೆ ಮತ್ತು ಅವರಿಗೆ ತಕ್ಕ ಸಿಬ್ಬಂದಿ ಸಹ ನೇಮಕ ಮಾಡುತ್ತೇವೆ. ಈಗ ಒಬ್ಬ ಜಿಲ್ಲಾಧಿಕಾರಿಯನ್ನು ನೇಮಕವಾಡಿದ್ದೇವೆ. ಅವರನ್ನು ಕೋಲಾರ ಮತ್ತು ಬೆಂಗಳೂರು ಈ ಎರಡು ಜಿಲ್ಲೆಗಳಿಗೆ ನೇಮಕವಾಡಿದ್ದೇವೆ. ಈಗ 450 ಗ್ರಾಮಗಳನ್ನು ನೋಟಿಫೈ ಮಾಡಿದೆ. ಬಾಕಿ ಎಲ್ಲಾ ಇನಾಂ ಗ್ರಾಮಗಳೇನು ನೋಟಿಫೈ ಮಾಡಲ್ಪಟ್ಟಿವೆಯೋ ಅಲ್ಲಿ ಇರತಕ್ಕ ಜಿಲ್ಲಾಧಿಕಾರಿಗಳೇ ಕೆಲಸಮಾಡಲು ಸಾಧ್ಯವಿದೆ. ಹೇರಳವಾದ ಸ್ಕೇಲ್‌ನಲ್ಲಿ ನೋಟಿಫೈ ಮಾಡಿರುವ ಕಡೆ ವಿಶೇಷ ಸಿಬ್ಬಂದಿ ಬೇಕು. ಈಗ ಇರುವ ಕಾರ್ಯಕ್ರಮದ ಬಗ್ಗೆ ನೇಮಕ ಮಾಡಿರುವ ಸಿಬ್ಬಂದಿ ಖರ್ಚುಬಗ್ಗೆ ಮಾತ್ರ ಡಿಮ್ಯಾಂಡ್ ಬಂದಿದೆ. ಇನ್ನು ಮುಂದೆ ನೋಟಿಫೈಮಾಡಿರುವ 450 ಗ್ರಾಮಗಳಿಗನುಗುಣವಾಗಿ ಸಿಬ್ಬಂದಿ ಏರ್ಪಾಡು ಮಾಡುತ್ತೇವೆ. ಸಾಧ್ಯವಾದಷ್ಟು ಶೀಘ್ರವಾಗಿ ಈ ಕೆಲಸ ನಡೆಯುವಂತೆ ವ್ಯವಸ್ಥೆಮಾಡುತ್ತೇವೆ.

Sri M. LINGANNA (Nanjangud).—Could not the same work got done by the Deputy Commissioners and the present Revenue Officers?

Sri H. M. CHANNABASAPPA.—I hope this House is anxious to get the work done expeditiously. If the opinion is to get the work done from the same Amildars and the same Revenue Inspectors, yon can well imagine with what speed the work could be got done.

ಈ ವಿಷಯದ ಬಗ್ಗೆ ತಾತ್ಸಾರವಾದ ಮನೋಭಾವನೆಯಿದೆಯೆಂಬ ಮನೋಭಾವನೆ ಮಾನ್ಯ ಸದಸ್ಯರಿಗಿರಬೇಕಾದ್ದು ಅನಾವಶ್ಯಕ. ಶ್ರೀ ಲಿಂಗಾರೆಡ್ಡಿಯವರು ಸರ್ವೆಯಾಗಿಲ್ಲದಿರುವ ಗ್ರಾಮಗಳನ್ನೇಕೆ ನೋಟಿಫೈ ಮಾಡಬಾರದೆಂದು ಕೇಳಿದರು. ಹಾಗೆ ಮಾಡಿದರೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಅಂಕಿ ಅಂಶಬೇಕು. ಸರ್ವೆ ಸೆಟ್ಲ್‌ಮೆಂಟ್ ಮಾಡದೆ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ಮೊದಲನೆಯ ಸ್ಟೇಜಿನಲ್ಲಿ ಬಹಳ ಖರ್ಚಾಗುತ್ತದೆ. ಆದ್ದರಿಂದ ಸರ್ವೆ

ಸೆಟ್ಲ್‌ಮೆಂಟ್ ಆಗಿರುವ ಗ್ರಾಮಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವ ಬಗ್ಗೆ ಕಾರ್ಯಕ್ರಮ ಕೈಕೊಂಡಿದೆ.

Sri H. C. LINGA REDDY.—The action taken is so belated. You should have taken this action much earlier.

Sri H. M. CHANNABASAPPA.— I would like to make it very clear that Government is as anxious as the Hon'ble members are to implement the Act.

ಸರ್ವೆ ಆಗಿಲ್ಲದಿರುವ ಗ್ರಾಮಗಳಬಗ್ಗೆ ಸಹ ಏಕ ಕಾಲದಲ್ಲೇಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದರು. ಅದಕ್ಕೆ ಉತ್ತರ ಒಂದನೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳಿದೆ; ಕಷ್ಟವೇನೆಂದರೆ ಸರ್ವೆ ಮಾಡುವ ಸಿಬ್ಬಂದಿ ಸಾಕಾದಷ್ಟು ಪ್ರಮಾಣ ದಲ್ಲಿಲ್ಲದಿರುವುದರಿಂದ ಏಕಕಾಲದಲ್ಲಿ ಸರ್ವೆ ಆಗಿಲ್ಲದಿರುವ 1,237 ಗ್ರಾಮಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಪ್ರಾಕ್ಟಿಕಲ್ ಡಿಫಿಕಲ್ಟಿ. ಆದಕಾರಣ ಇರುವ ಸಿಬ್ಬಂದಿ ಕೆಲಸ ಮಾಡುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟಕ್ಕೆ ಸೂಕ್ತ ಕಾರ್ಯಕ್ರಮ ವಿದೆಯೇ ವಿನಾ ಅನ್ಯಥಾ ಇಲ್ಲ. ಶ್ರೀ ಮೂಡ್ಲಗಿರಿಗೌಡರು ಜೋಡಿ ಚನ್ನಾಪುರದ ವಿದ್ಯಮಾನ ಹೇಳಿದರು. . . .

*Sri K. PATTABHIRAMAN (Kolar).—Just a clarification from the Hon'ble Minister. So far as the unsurveyed and unsettled villages are concerned, survey and settlement operations must come before this notification is issued in respect of them. Will he consider the suggestion of the Finance Enquiry Committee where they have considered this question and made a concrete suggestion where the survey and settlement would be very difficult? They have made very concrete alternative proposals. Will the Government consider them ?

Sri H. M. CHANNABASAPPA.—We have absolutely no difference of opinion with respect to the implementation of the Act as expeditiously as possible. Immediately after notifying all the villages, the question of how best the unsurveyed villages are to be tackled will be taken up in all seriousness.

ಮಾಗಡಿ ತಾಲ್ಲೂಕಿನಲ್ಲಿ ಕೆಲವು ಅನರ್ಥಗಳು ನಡೆದಂತೆ ಚೆನ್ನಾಪುರ ಗ್ರಾಮದಲ್ಲೂ ಕೂಡ ನಡೆದಿವೆಯೆಂದು ಶ್ರೀ ಮೂಡಲಗಿರಿಗೌಡರು ಮತ್ತು ಶ್ರೀ ಪ್ರಭಾಕರ್‌ಅವರು ಗಮನಕ್ಕೆ ತಂದರು. ಕುಣಿಗಲ್ ಕಡೆ ಹೋಗಿದ್ದಾಗ ಚನ್ನಾಪುರದ ಗ್ರಾಮಸ್ಥರು ಕೆಲವರು ಬಂದಿದ್ದರು. ಈಬಗ್ಗೆ ಅವರು ಸರಿಯಾದ ವಿಷಯ ಹೇಳಲಿಲ್ಲ; ತೊಂದರೆ ಕೊಡುತ್ತಿದ್ದಾರೆಂದು ಹೇಳಿದರು; ವಿಶದವಾಗಿ ತಿಳಿಸಲಿಲ್ಲ; ತಿಳಿಸಿದ್ದರೆ ಒಂದು ದಿವಸ ನಿಧಾನವಾದರೂ ಅಲ್ಲೇ ಇದ್ದು ಪರಿಶೀಲನೆ ಮಾಡಿಕೊಂಡು ಬರುತ್ತಿದ್ದೆ. ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದೆ. ಈ ವಿಷಯದಲ್ಲಿ ಸತ್ಯ ಧರ್ಮಗಳಿಗನುಗುಣವಾಗಿ ಕೆಲಸ ನಡೆಯಬೇಕಾದರೆ ಮಾನ್ಯ ಸದಸ್ಯರೆಲ್ಲರೂ ಸಹಕರಿಸಿ ಕೆಲಸ ಮಾಡಬೇಕಾಗಿದೆ. ತೆರೆಮರೆಯಲ್ಲಿ ನಡೆಯುವ ಕೆಲಸ ಕಾರ್ಯವನ್ನು ಬಹಿರಂಗಕ್ಕೆ ತಂದು ಅದರ ಬಗ್ಗೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದೊಡನೆ ಸಹಕಾರಮಾಡಿ ಎಲ್ಲ ಜನರೂ ಮತ್ತು ಸದಸ್ಯರೂ ಸಹಾಯ ಮಾಡಬೇಕಾದದ್ದೂ ಅವರ ಕರ್ತವ್ಯ. ಇಂಥ ಸಂದರ್ಭಗಳಲ್ಲಿ ಎಲ್ಲಿ ಏನು ನಡೆಯುತ್ತದೆಂಬುದನ್ನು ನಮ್ಮ ಗಮನಕ್ಕೆ ತಂದು ಉಪಕಾರ ಮಾಡಬೇಕು. ಸಾಧ್ಯವಾದಷ್ಟು ಪ್ರಯತ್ನಮಾಡಿ ಸರ್ಕಾರಕೂಡ ಈ ಬಗ್ಗೆ ಕಾನೂನುರೀತ್ಯಾ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತದೆ. ಬಹುಶಃ ಮಾನ್ಯ ಸದಸ್ಯರು ಎತ್ತಿದ ಎಲ್ಲ ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇದು ಅತಿ ಜರೂರಾಗಿ ಆಗಬೇಕಾದ್ದೂ ಮತ್ತು ಮಾನ್ಯ ಸದಸ್ಯರು ಮತ್ತೊಂದು ಸಿಬ್ಬಂದಿ ಏರ್ಪಾಡುಮಾಡಿ ಬೇಗ ಕೆಲಸ ಮಾಡಬೇಕೆಂದು ಇಚ್ಛೆಪಟ್ಟಿದ್ದಾರೆ. ಆದ್ದರಿಂದ ಈ ಡಿಮ್ಯಾಂಡನ್ನು ಅಂಗೀಕಾರ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಭಾವಿಸಿದ್ದೇನೆ.

Mr. SPEAKER.—The question is :

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'General Administration (Except the sub-major heads B and C')."

The motion was adopted.

DEMAND No. 26—INDUSTRIES AND SUPPLIES INCLUDING SERICULTURE.

43. INDUSTRIES AND SUPPLIES.

Mr. SPEAKER.—Motion moved;

"That a further sum not exceeding Rs. 400 be granted to the Government to defray the charges which will come in course of payment during the period ending 31st day October 1956, in respect of 'Industries and Supplies'."

Sri T. MARIAPPA (Mysore City North).—Demands 26 and 41 may be taken up together.

Mr. SPEAKER.—They may be taken up for discussion together but vote would be taken separately.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಹಳ್ಳಿಗಳಕಡೆ ಕೈಗಾರಿಕಾ ಇಲಾಖೆಯವರು ಸಾಲಗಳನ್ನು ಕೊಟ್ಟು ಕೆಲವು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಮರಗೆಲಸ, ಕಬ್ಬಿಣದಕೆಲಸ ಮೊದಲಾದ ಕೆಲಸಗಳನ್ನು ಕೈಗಾರಿಕಾ ಪಟ್ಟಿಯಲ್ಲಿ ಸೇರಿಸಿಕೊಂಡು ಅವುಗಳನ್ನೆಲ್ಲಾ ಗ್ರಾಮಾಂತರ ಕೈಗಾರಿಕೆಗಳೆಂದು ಕರೆದು ಅದಕ್ಕೇ ಒಂದು ಇಲಾಖೆ ನೇಮಕಮಾಡಿ ದೊಡ್ಡ ಸಿಬ್ಬಂದಿ ಏರ್ಪಾಡುಮಾಡಿದ್ದಾರೆ. ಬದನವಾಳದಲ್ಲಿ ಬಹಳ ವರ್ಷಗಳಿಂದ ಖಾದಿಯನ್ನು ತಯಾರುಮಾಡುತ್ತಿದ್ದಾರೆ. ಸರ್ಕಾರದವರೂ ಸಹ ಅಲ್ಲಿ ಖಾದಿ ತಯಾರಿಸಲು ಒಂದು ಇಲಾಖೆಯನ್ನು ನೇಮಿಸಿ ಬಹಳ ಶ್ರೇಷ್ಠವಾದ ಖಾದಿಯನ್ನು ತಯಾರಿಸಿ ಬೆಂಗಳೂರು ಮತ್ತು ಇತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೆಲಸಕ್ಕೆ ಸೇರಿರುವ ಕೆಲಸಗಾರರು, ನೆಯ್ಗೆಯವರು ಮತ್ತು ಮಾರಾಟದಲ್ಲಿ ನಿರತರಾಗಿರುವವರು ತಮಗೆ ಕೊಡತಕ್ಕ ಸಂಬಳಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆಮಾಡಿಲ್ಲವೆಂದು ನಿರುತ್ಸಾಹದಿಂದ ಕೈಗಾರಿಕೆಯಲ್ಲಿ ಸಾಕಾದಷ್ಟು ಉತ್ಸಾಹವನ್ನು ತೋರಿಸುತ್ತಿಲ್ಲ. ಕೈಗಾರಿಕೆಯನ್ನು ಎಷ್ಟು ಉತ್ತಮಪಡಿಸಬಹುದೋ ಅಷ್ಟು ಉತ್ತಮಪಡಿಸುತ್ತಿಲ್ಲ. ಆಮೇಲೆ ಅಲ್ಲಿರುವ ಕೆಲಸಗಾರರು 10, 11, 14 ಎಂದು ನಂಬರಿರುವ ನೂಲುಗಳನ್ನು ವಿಂಗಡಿಸುವಾಗ ಸರಿಯಾಗಿ ನಿಗಾಕೊಡದೆ ಅನೇಕ ವೇಳೆ ನಂಬರನ್ನು ಎಣಿಸದೆ ಒಟ್ಟಾಗಿ ಸೇರಿಸಿ ಮೋಸಮಾಡುವ ಹಾಗೆ ಕಾಣುತ್ತದೆ. ಸರ್ಕಾರದಿಂದ ನಡೆಸುವ ಕೈಗಾರಿಕೆಗಳನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಂಡು ಅಲ್ಲಿರುವ ಸಿಬ್ಬಂದಿಗೆ ತೊಂದರೆ ಕೊಡದಹಾಗೆ ನೂಲು ಮಾಡಿಕೊಂಡು ಬರುವವರಿಗೆ ಎಷ್ಟನೆಯ ನಂಬರು ನೂಲನ್ನು ಮಾಡುತ್ತಾರೋ ಅದನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿ ತರುವಂತೆ ವ್ಯವಸ್ಥೆಮಾಡಿ, ಮಿಶ್ರವಾಗುವುದಕ್ಕೆ ಅವಕಾಶವಿಲ್ಲದಂತೆ ಏರ್ಪಡಿಸಿ ಕೆಲಸಗಾರರಿಗೆ ಸರಿಯಾದ ವೇತನ ಕೊಡುವಂತೆ ವ್ಯವಸ್ಥೆ ಮಾಡಬೇಕು.

*ಶ್ರೀ ಎಂ. ಮಾದಯ್ಯ. (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ಖೋತಾ ಸೂಚನೆ ಮುದ್ರಣವಾಗಿರುವುದರಲ್ಲಿ 'expending' ಎಂದು ತಪ್ಪಾಗಿ ಮುದ್ರಣವಾಗಿದೆ, ಅದು 'expanding' ಎಂಬುದಾಗಿರಬೇಕು. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಮುನಿಸ್ವಾಮಯ್ಯನವರು ಹೇಳಿದ್ದನ್ನು ಕೇಳಿ ತುಂಬ ವ್ಯಸನವಾಗುತ್ತಿದೆ. ಏಕೆಂದರೆ ಖಾದಿ ಕೆಲಸ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ, ಸಿಬ್ಬಂದಿ ಮುತವರ್ಜಿ ವಹಿಸುತ್ತಿಲ್ಲ, ನಿರೀಕ್ಷಿಸಿದಷ್ಟು ನೂಲಿನ ಉತ್ಪತ್ತಿಯಿಲ್ಲ ಎಂದು ಹೇಳಿದಂತೆ ಕಂಡು ಬಂತು.

2-30 P.M.

ಸ್ವಾಮಿ, ನಾನು ಬದನವಾಳ ಖಾದಿ ಕೇಂದ್ರಕ್ಕೆ ಕೇವಲ ಮೂರು ಮೈಲಿ ಫಾಸಲೆಯಲ್ಲಿ ವಾಸ ಮಾಡತಕ್ಕ ಮನುಷ್ಯ. ಕಳೆದ ಸಾಲನಲ್ಲಿ ಇದಕ್ಕೆ ಒಂದು ಲಕ್ಷ 75 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಮೊಬಲಗೂ ಸಹ ಸಾಲದೆ ಹೋಯಿತು. ಡಿಪ್ರಿಸಿಯೇಷನ್, ವೇಜಸ್ ಇತ್ಯಾದಿಗಳನ್ನೆಲ್ಲಾ ಕೊಟ್ಟಿದ್ದರಿಂದ ಆ 1 ಲಕ್ಷ 75 ಸಾವಿರ ರೂಪಾಯಿಗಳು ಖರ್ಚಾಗಿ ಹೋದವು. ಈ ಮೊಬಲಗನ್ನು ಸಾಲವಾಗಿ ಕೊಡಲಾಗಿತ್ತು. ಈ ಸಾಲಕ್ಕೆ ಲಾಭವನ್ನೂ ಸಹ ಕೊಡಲಾಗಿದೆ. ಪ್ರತಿವರ್ಷವೂ ಈ ಕೇಂದ್ರದ ವೆಚ್ಚ ಬೆಳೆಯುತ್ತಲೇ ಬರುತ್ತಿದೆ. ಕಳೆದ 5 ವರ್ಷಗಳ ಬಡ್ಜೆಟ್ ಸರಾಸರಿ ಲೆಕ್ಕವನ್ನು ತಾವು ನೋಡಿದರೆ ಸರ್ಕಾರ ಎಷ್ಟೆಷ್ಟು ಹಣವನು ಇದಕ್ಕಾಗಿ ಹೆಚ್ಚಿಗೆ ಅಪ್ರೋಪ್ರಿಯೇಟ್ ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ಕಾರಣ ಸಾರ್ವಜನಿಕರು ಈಗ ಅಷ್ಟು ಹೆಚ್ಚು ಹೆಚ್ಚಾಗಿ ಈ ಮಾಲನ್ನು ಕೊಂಡುಕೊಳ್ಳಲು ಮುಂದೆ ಬರುತ್ತಿರುವುದೇ ಇದರ ಅಭಿವೃದ್ಧಿಗೆ ಒಂದು ದೊಡ್ಡ ನಿದರ್ಶನವೆಂದು ಹೇಳಬಹುದಾಗಿದೆ. 1955ರಲ್ಲಿ ಕೊಡಲಾಗಿದ್ದ 1ಲಕ್ಷ 75ಸಾವಿರ ರೂಪಾಗಳು ಕಚ್ಚಾ ಮಾಲನ್ನು ಕೊಳ್ಳಲು ಕೇವಲ 5 ತಿಂಗಳಿಗೆ ಮಾತ್ರ ಅವಕಾಶವಿದ್ದಿತು. ಆಗ ಈ ಉದ್ಯಮಕ್ಕೆ ಇನ್ನೂ 5 ಲಕ್ಷ ರೂಪಾಯಿಗಳು ಹೆಚ್ಚಿಗೆ ಬೇಕಾಗುತ್ತದೆಂಬ ಅಂದಾಜ ಹೊಳೆಯಿತು. On the advice of the Government the Head of the Department spent the entire Budget allotment. ನಮ್ಮಲ್ಲಿ ಈ ದಿವಸ ಈ ಖಾದಿ ಸೆಂಟರುಗಳು ಒಂಭತ್ತಿರುತ್ತವೆ. ಹತ್ತು ಸಾವಿರ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಕ್ಷಾಮ ಬಂದ ಮೇಲಂತೂ ವ್ಯವಸಾಯಗಾರರಿಗೆ ಕೆಲಸವಿಲ್ಲದಂತಾಯಿತು. ಹೀಗಾಗಿ ಈ ದಿವಸ ಪ್ರತಿಯೊಂದು ಮನೆಯಲ್ಲೂ ಈ ನೂಲುವ ಕೆಲಸಗಾರರ ಸಂಖ್ಯೆ ಹೆಚ್ಚುತ್ತಾ ಇದೆ. ಅದಕ್ಕೆ ಸರಿಯಾಗಿ ತಯಾರಾದ ವಸ್ತುಗಳಿಗೆ ಮಾರುವ ಕಟ್ಟೆಗಳೂ ಕೂಡ ಹೆಚ್ಚುತ್ತಿವೆ. ಈ ದಿವಸ ಹಾಸನ-ಬಳ್ಳಾರಿ-ಚಿತ್ರದುರ್ಗ-ಬೆಂಗಳೂರು-ಕೆ.ಜಿ.ಎಫ್. ಹೀಗೆ 5 ಸ್ಥಳಗಳಲ್ಲಿ ಈ ಸೆಂಟರುಗಳು ಇವೆ. ಇಷ್ಟಾಗಿದ್ದರೂ ಸರ್ಕಾರ ನೂಲುವುದಕ್ಕೆ ಸಾಕಷ್ಟು ಉತ್ತೇಜನ ಕೊಡುತ್ತಿಲ್ಲ. ಈ ಖಾದಿ ಕೈಗಾರಿಕೆಗೆ ಹೆಚ್ಚು ಉತ್ತೇಜನ ನೀಡತಕ್ಕ ಬಗ್ಗೆ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡಬೇಕೆಂದೂ, ಕೊಡತಕ್ಕ ಗ್ರಾಂಟಿನಲ್ಲಿ ಮೊಬಲಗನ್ನು ಖೋತಾ ಮಾಡದೆ ಆ ಪೂರಾ ಮೊಬಲಗನ್ನು ಖರ್ಚು ಮಾಡುವಂತೆ ಅವಕಾಶ ನೀಡಬೇಕೆಂದೂ ಕೇಳಿಕೊಳ್ಳುತ್ತೇನೆ. ಈ ವರೆಗೆ ಸರ್ಕಾರದವರು ಈ ಇಂಡಸ್ಟ್ರಿಯಲ್ ಕೆಲಸಗಾರರಿಗೆ ಕೊಟ್ಟಿರತಕ್ಕ ದ್ರವ್ಯ ಸಹಾಯಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಆದರೆ ನಾನು ಈ ಸಂಬಂಧವಾಗಿ ಸರ್ಕಾರಕ್ಕೆ ಮೂರು ಲಕ್ಷ ರೂಪಾಯಿಗಳ ಸಾಲ ನೀಡಬೇಕೆಂದು ಕೇಳಿದ್ದೇನೆ. ಈ ದಿವಸ ಸುಮಾರು 20ಸಾವಿರ ಕುಟುಂಬಗಳು ಈ ಉದ್ಯೋಗದಲ್ಲಿ ನಿಂತಿರುತ್ತವೆ. ನಾವು ಆ ರೀತಿ ಕೇಳಿರುವಾಗ ಸರ್ಕಾರದವರು ಕೇವಲ ಒಂದು 100 ರೂಪಾಯಿಗಳ ಟೋಕನ್ ಗ್ರಾಂಟ್ ಕೊಟ್ಟು ಬರುವ ಅಕ್ಟೋಬರ್ ಆಖೈರುವರೆಗೆ 50 ಸಾವಿರ ರೂಪಾಯಿಗಳನ್ನು ಮಾತ್ರ ಕೊಡುವುದಾಗಿ ತಿಳಿಸಿದ್ದಾರೆ. ಸರ್ಕಾರದವರು ಕೊಡತಕ್ಕ ಹಣಕ್ಕೆ ನಾವು ಬಡ್ಡಿ ಸಹ ಕೊಡುತ್ತಿದ್ದೇವೆ...

ಶ್ರೀ ಎಚ್. ಸಿದ್ದವೀರಪ್ಪ.—ನೀವು ಯಾವ ಯಾವಾಗ ಎಷ್ಟೆಷ್ಟು ಬಡ್ಡಿ ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಾದಯ್ಯ.—ವೇಜಸ್, ಡಿಪ್ರಿಸಿಯೇಷನ್ ಇತ್ಯಾದಿಗಳೆಲ್ಲಾ ಕಳೆದು 5 ಸಾವಿರಕ್ಕೂ ಮೇಲ್ಪಟ್ಟು ಲಾಭ ಕೊಟ್ಟಿದ್ದೇವೆ. ನಿಮ್ಮನ್ನು ನಾವು ಯಾವತ್ತೂ ಉಚಿತವಾಗಿ ಕೊಡಿ ಎಂದು ಕೇಳಿಲ್ಲ. ಈಗ 3ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟರೆ ಈ ಪವಿತ್ರ ಖಾದಿ ಉದ್ಯಮಕ್ಕೆ ಬಹಳ ಸಹಾಯ ನೀಡಿದಂತಾಗುತ್ತದೆ. ಈಗಲೂ ಸಹ ನಮ್ಮ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿ ಈ ಉದ್ಯಮಕ್ಕೆ 5ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಿಸಿದರೆ ಇವರ 50ಸಾವಿರ ರೂಪಾಯಿಗಳನ್ನು ನಾವು ವಾಪಸ್ಸು ಕೊಡುತ್ತೇವೆ. ನಾಳೆ ಬರುವ ಅಕ್ಟೋಬರ್

31ನೆಯ ತಾರೀಖಿನಿಂದ ಮಾರ್ಚಿ ಆಖೈರುವರೆಗೆ ಸುಮಾರು ಇನ್ನೂ ಮೂರು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದ್ದರಿಂದ ತಾವು ಏನಾದರೂ ಪ್ರಯತ್ನ ಮಾಡಿ ಕೇಂದ್ರದಿಂದ ಸಾಲ ತರಿಸಿಕೊಡಿ. ನಿಮ್ಮ 50 ಸಾವಿರ ರೂಪಾಯಿ ನಮಗೆ ಬೇಕಾಗಿಲ್ಲ. ನಾವು ಈಗ 3 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಿ ಎಂದು ಕೇಳಿದ್ದರೆ ಇಲ್ಲವೆಂದು ಹೇಳುತ್ತಿದ್ದಾರೆ. ಇದು ಸರಿಯೇ ಎಂದು ಕೇಳುತ್ತೇನೆ.

Sri H. SIDDAVEERAPPA.—The work has not been stopped even for one day.

ಶ್ರೀ ಎಂ. ಮಾದಯ್ಯ.—ಈಗ ತಾವು ಹೇಳುವ ಮೊಬಲಗು ಅಕ್ಟೋಬರ್‌ವರೆಗೆ ಮಾತ್ರ ಆಗುತ್ತದೆ ಎಂದು ಹೇಳುತ್ತಿದ್ದೀರಿ. ಈ ಮೊಬಲಗು 15 ದಿವಸಗಳಿಗೂ ಸಹ ಸಾಲುವುದಿಲ್ಲವೆಂದು ನಾನು ಹೇಳುತ್ತೇನೆ. ಆದ ಕಾರಣ ನಾನು ಈಗ ಕೇಳುತ್ತಿರುವುದು ಕೇಂದ್ರ ಸರ್ಕಾರದಿಂದ ಸಾಧ್ಯವಾಗದೆ ಹೋದರೆ ಆಗ ತಾವೇ ನಮಗೆ 3 ಲಕ್ಷ ರೂಪಾಯಿಗಳ ಸಾಲ ಮಂಜೂರು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಆ ಬದನವಾಳ ಕೇಂದ್ರದಲ್ಲಿ ಈಗ 20 ಸಾವಿರಕ್ಕಿಂತ ಹೆಚ್ಚಾಗಿ ಜನರು ಕೆಲಸ ಮಾಡುತ್ತಿದ್ದಾರೆ. ಒಬ್ಬೊಬ್ಬ ನೂಲುವವನೂ ದಿನ ಒಂದಕ್ಕೆ ಒಂದು ರೂಪಾಯಿಗಿಂತ ಹೆಚ್ಚು ಸಂಪಾದನೆ ಮಾಡುತ್ತಿದ್ದಾನೆ. ಆ ಕೂಲಿಗೆ ಆಗುವಷ್ಟು ಮೊಬಲಗನ್ನಾದರೂ ಸರ್ಕಾರದವರು ಕೊಟ್ಟರೆ ಸಾಕೆಂದು ಹೇಳುತ್ತಿದ್ದೇವೆ. ದಿವಸಕ್ಕೆ ಸರಾಸರಿ ಹತ್ತು ಸಾವಿರ ರೂಪಾಯಿಗಳ ಬಟವಾಡೆ ಆಗುತ್ತಿದೆ. ತಾವೀಗ ಕೊಡುವಂಥ ಹಣ ಅಲ್ಲಿ ಐದು ದಿವಸಗಳಿಗೆ ಮುಗಿದುಹೋಗುತ್ತವೆ. ಆದಕಾರಣ ಈ ಹಣ ಸಾಲದು, ಇನ್ನೂ ಹೆಚ್ಚು ಮೊಬಲಗನ್ನು ಕೊಡಬೇಕೆಂದು ಡಿಸ್ಟ್ರಿಕ್ಟ್ ರಿಲೀಫ್ ಸಮಿತಿಯಲ್ಲಿ ತೀರ್ಮಾನ ಮಾಡಿ ಕಳುಹಿಸಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಕ್ಷಾಮ ಉಂಟಾಗಿ ಜನರು ಜೀವನಕ್ಕೆ ತುಂಬಾ ಕಷ್ಟಪಡುತ್ತಿದ್ದಾರೆ. ಈ ಮಧ್ಯೆ ಸರ್ಕಾರದವರು ಒಂದು ಸರ್ಕ್ಯುಲರನ್ನು ಹೊರಡಿಸಿ ಎಲ್ಲೆಲ್ಲಿ ಕ್ಷಾಮಪರಿಸ್ಥಿಯುಂಟಾಗಿ ಜನರ ಜೀವನಕ್ಕೆ ತೊಂದರೆಯುಂಟಾಗಿದೆಯೋ ಅಲ್ಲೆಲ್ಲಾ—ಅಂಥಾ ಅಭಾವ ಪ್ರದೇಶಗಳಲ್ಲಿ—ಜನರಿಗೆ ಕೂಲಿ ಸಿಕ್ಕತಕ್ಕ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿಸಲಾಗಿತ್ತು. ಆ ಉದ್ದೇಶದಿಂದ ಈವರ್ಷದ ಬಡ್ಜೆಟ್ಟಿನಲ್ಲಿ ನಮ್ಮ ಜಿಲ್ಲೆಗೆ ಬದನವಾಳು ಖಾದಿ ಕೇಂದ್ರಕ್ಕೆ ಒದಗಿನ ಲಾಗಿದ್ದ ಮೊಬಲಗೆಲ್ಲಾ ಖರ್ಚಾಯಿತು. ಇಲ್ಲಿಗೆ ಒಂದು ತಿಂಗಳ ಹಿಂದೆ ನೂಲುವವರಿಂದ ನೂಲು ಕೊಳ್ಳಲು ದುಡ್ಡಿಲ್ಲದಂತಾಯಿತು. ಆಗ ಸರ್ಕಾರದವ ಡೈರೆಕ್ಟರ್‌ರಿಂದ ಬದನವಾಳ ಸೆಂಟರಿನಲ್ಲಿ ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸುವಂತೆ ಒಂದು ಸರ್ಕ್ಯುಲರ್ ಬಂದಿತು. ನಮ್ಮ ಜಿಲ್ಲೆಯಲ್ಲಿ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಯ ಸಂಬಂಧವಾಗಿ ಈ ಸೆಂಟರಿಗೆ ಸಂಬಂಧಪಟ್ಟ ಹಾಗೆ 30 ಟ್ರೈನಿಂಗ್ ಸೆಂಟರುಗಳನ್ನು ತೆರೆಯಲಾಗಿತ್ತು. ಈಗ ಆ ಒಂದು ಸರ್ಕ್ಯುಲರ್ ಬಂದನಂತರ ಅಲ್ಲಿಯ ನೂಲುವವರಿಗೆ ಬಹಳ ಕಷ್ಟಪರಿಸ್ಥಿತಿಯುಂಟಾಗಿದೆ. ಇದೇನೂ ಉತ್ಪ್ರೇಕ್ಷೆಯ ಮಾತಲ್ಲ. ಅಲ್ಲಿಯ ಅನುಭವವಿರುವ ಕೆಲವು ಮಾನ್ಯ ಸದಸ್ಯರು ಇಲ್ಲೇ ಇದ್ದಾರೆ. ತಾವು ಅವರಿಂದ ಈ ವಿಚಾರ ತಿಳಿದುಕೊಳ್ಳಬಹುದು. ಈ ದಿವಸ ಅಲ್ಲಿ 50 ಸಾವಿರ ಜನರಿಗೆ ಕೆಲಸವಿಲ್ಲದಂತಾಗಿದೆ. ತಾವು ಆಗಲೇ ಒಂದು ಲಕ್ಷ 75 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಬಹುದು. ಆದರೆ ಈ ಹಿಂದೆ ಸರ್ಕಾರದವರು ಇದಕ್ಕೆ 10 ಲಕ್ಷ ರೂಪಾಯಿಗಳು ಬೇಕಾದರೂ ಕೊಡುತ್ತೇವೆಂದು ಹೇಳಿದ್ದರು. ಈಗ ನಮ್ಮ ಮೈಸೂರು ಜಿಲ್ಲೆಯ ಡಿಸ್ಟ್ರಿಕ್ಟ್ ರಿಲೀಫ್ ಕಾಂಗಾರಿ ಕಮಿಟಿಯ ಅಧ್ಯಕ್ಷರಾಗಿರತಕ್ಕವರೂ ಮತ್ತು ಇಲ್ಲಿ ರೆವಿನ್ಯೂ ಮಂತ್ರಿಗಳಾಗಿರತಕ್ಕವರೂ ಆದ ಶ್ರೀಮಾನ್ ಚನ್ನಬಸಪ್ಪನವರು ಈ ಅಂಶವನ್ನು ಹಿಂದೆ ಹೊರಪಡಿಸಿದ್ದರು. ಈಗ ಕೊಟ್ಟಿರತಕ್ಕ ಮೊಬಲಗು ಆ ಫ್ಯಾಮಿನ್ ರಿಲೀಫ್ ಫಂಡಿನಿಂದ ಕೊಡಲ್ಪಟ್ಟಿದೆ. . . .

Mr. SPEAKER.—This is explained in the note. Please refer to it.

ಶ್ರೀ ಯು. ಎಂ. ಮಾದಪ್ಪ.—ನಾನು ಹೇಳುತ್ತಿರುವುದೂ ಸ್ಪಷ್ಟವಾಗಿಯೇ ಇದೆ. ಈಗ ತಾವು ಈ ಕಂಟಿಜೆನ್ಸಿ ಫಂಡಿನಿಂದ ಕೊಡತಕ್ಕ 50 ಸಾವಿರ ರೂಪಾಯಿಗಳು 5-6 ದಿನಗಳಿಗೂ ಸಹ ಸಾಲುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಅಷ್ಟು ಮೊಬಲಗಿನ ಪದಾರ್ಥಗಳು ತಯಾರಾಗಿ-ಅವುಗಳನ್ನು ಮಾರಾಟ ಮಾಡಿದಾಗ ಮತ್ತೆ ಅದಕ್ಕೂ ಹೆಚ್ಚಿನ ಹಣ ಬಂದೇ ಬರಬೇಕಲ್ಲವೆ?

ಶ್ರೀ ಯು. ಎಂ. ಮಾದಪ್ಪ.—ಸರ್ಕಾರದವರು ಕೊಡತಕ್ಕ ಹಣ ವೇನೂ ಹಾಗೆ ಲುಕ್ಸಾನಾಗುವುದಿಲ್ಲ. ತಯಾರಾದ ಪದಾರ್ಥಗಳಲ್ಲಿ ಅರ್ಧಭಾಗವನ್ನು ಯಾರು ತಯಾರಿಸುತ್ತಾರೋ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಅವರಿಗೆ ಈ ಅರ್ಧಭಾಗ ಬಟ್ಟೆ ರೂಪದಲ್ಲಿ ಅಡ್ಜೆಸ್ಟ್ ಆಗುತ್ತಿದೆ. ಇನ್ನುಳಿದ ಅರ್ಧ ಭಾಗ ಹೊರಗಡೆ ಮಾರಾಟಕ್ಕೆ ಹೋಗುತ್ತದೆ. ಅದರಿಂದ ನಾವು ಈ ಹಣವನ್ನು ಪಡೆಯಬೇಕಾಗಿದೆ. ಈ ಕೈಗಾರಿಕೆಗಳ ಉತ್ಪತ್ತಿ ಹೆಚ್ಚಾಗುತ್ತಿರುವುದರಿಂದಲೇ ಇತ್ತೀಚೆಗೆ ತಾವು ಒಂದು ಬೋರ್ಡನ್ನು ಸಹ ರಚನೆ ಮಾಡಬೇಕೆಂದು ಹೇಳುತ್ತಿದ್ದೀರಿ. ಹಾಗೆ ತಾವು ಈ ಗೃಹ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ಭಾವನೆಗೆ ಈಗ ತೋರಿಸುತ್ತಿರುವ ಭಾವನೆ ಒಂದು ದೊಡ್ಡ ಧಕ್ಕೆಯನ್ನು ತರುತ್ತಿದೆ. ಅದ್ದರಿಂದ ತಾವು ಮುಂದೆ ತೆರೆಯುವ ಬೋರ್ಡು ನಾಮಕಾವಸ್ತೆ ಬೋರ್ಡ್ ಎಂದು ಆಗಬಾರದು. ಈ ದಿವಸ ಆ ಪ್ರದೇಶದಲ್ಲಿ ಅನೇಕ ಜನ ಹೆಣ್ಣು ಮಕ್ಕಳೂ ನಣ್ಣ ಮಕ್ಕಳೂ ಉದ್ಯೋಗವಿಲ್ಲದೆ ಜೀವನಕ್ಕೆ ತೊಂದರೆ ಪಡಬೇಕಾದ ಸ್ಥಿತಿ ಬಂದಿದೆ. ಇಂಥಾ ಒಂದು ಭಯಂಕರ ಪರಿಸ್ಥಿತಿ. ನಂಜನಗೂಡು, ಚಾಮರಾಜನಗರ, ಯಳಂದೂರು, ಟಿ. ನರಸೀಪುರ ಇತ್ಯಾದಿ ಸ್ಥಳಗಳಲ್ಲಿ ಸಂಭವಿಸಿದೆ. ಆ ಪ್ರದೇಶದಲ್ಲಿ ಇಲ್ಲಿಯವರಗೂ ಮಳೆ ಬಿದ್ದಿಲ್ಲ. ಆದ್ದರಿಂದ ಈ ಬದನವಾಳದ ವ್ಯಾಪ್ತಿ ಆ ಒಂದು ಸಬ್‌ಡಿವಿಜನ್‌ಗೆ ಪೂರ್ತಿಯಾಗಿ ಹರಡಿ ಕೊಂಡಿರುತ್ತದೆ. ಆದುದರಿಂದ ನಾವೀಗ ಸರ್ಕಾರದವರನ್ನು ಎರಡು ಲಕ್ಷರೂಪಾಯಿಗಳನ್ನು ಉಚಿತವಾಗಿ ಕೊಡಿ ಎಂದೇನೂ ಕೇಳುತ್ತಿಲ್ಲ. ಇದರಲ್ಲಿ ಸರ್ಕಾರದವರ ಜವಾಬ್ದಾರಿಯೂ ಕೂಡ ಜಾಸ್ತಿ ಯಾಗಿದೆ. ಜನರಿಗೆ ಯಾವತ್ತೂ ಜೀವನಕ್ಕೆ ಮಾತ್ರ ತೊಂದರೆ ಆಗಬಾರದು. ದಿನಕ್ಕೆ ಒಂದು ರೂಪಾಯಿ ಕೂಲಿ ಮಾಡಿ ಎಂಟು ಆಣೆ ತೆಗೆದುಕೊಂಡು ಹೋಗತಕ್ಕ ಮನುಷ್ಯ ಯಾವರೀತಿ ಜೀವನ ಮಾಡಬೇಕು, ಅತನಿಗೆ ಎಷ್ಟು ಕಷ್ಟವಿದೆ ಎನ್ನುವುದನ್ನು ತಾವು ಮನಗಾಣಬೇಕು. ಈ ಹೊತ್ತು ಅಲ್ಲಿಯ ಜನರ ಜೀವನ ಬಹಳ ಕಾಠಿಣ್ಯ ಸ್ಥಿತಿಗೆ ಬಂದಿದೆ.

ಇನ್ನು ಎರಡನೇಯದಾಗಿ ಈ ರೇಷ್ಮೆ ವಿಚಾರವಾಗಿ ಈ ಕೈಗಾರಿಕೆ ಬರುವ ನವೆಂಬರ್ ತಿಂಗಳಿಂದ ನಡೆ

(ಶ್ರೀ ಯು. ಎಂ. ಮಾದಪ್ಪ)

ಯಲು ಒಂದೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವುದಾಗಿ ತಿಳಿಸಿದ್ದಾರೆ. ಈಗ ಆ ಫ್ಯಾಕ್ಟರಿಗಳಿವೆ. ಈ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳು ಒಂದು ದಿವಸಕ್ಕೂ ಸಹ ಸಾಲು ವುದಿಲ್ಲ. ಈಗ ಎಷ್ಟು ಬೇಸಿನ್‌ಗಳು ಕೆಲಸ ಮಾಡುತ್ತಿವೆ, ಎಷ್ಟು ಗೂಡು ಉತ್ಪನ್ನವಾಗುತ್ತಿದೆ, ಉತ್ಪನ್ನವಾಗುವ ಎಲ್ಲಾ ಗೂಡನ್ನೂ ಕಾರ್ಖಾನೆಯಲ್ಲಿ ನೂಲು ಬಿಚ್ಚಲು ಇನ್ನೂ ಎಷ್ಟು ಬೇಸಿನ್ ಬೇಕಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಹೀಗೆ ಎಲ್ಲಿಯ ವರೆಗೆ ಹೊಸ ಬೇಸಿನ್‌ಗಳನ್ನು ಪ್ರಾರಂಭ ಮಾಡುವುದಿಲ್ಲವೋ ಅಲ್ಲಿಯತನಕ ಈ ರೇಷ್ಮೆಯ ಬೆಲೆಯ ಏರು-ಪೇರು ಹೋಗುದಿಲ್ಲ. ಇವು ತಗ್ಗ ಬೇಕಾದರೆ. . . .

Sri H. SIDDAVEERAPPA.—Proposals regarding the working of the concerns and their development under the control of the Department are being worked out by the Director of Sericulture and pending examination of the question fresh funds from 1st November 1956 would be necessary. For this purpose it would be necessary to place at the disposal of the Department an amount of 1·5 lakhs from that date in order that the concern may be kept going during the interim period.

ಶ್ರೀ ಯು. ಎಂ. ಮಾದಪ್ಪ.—ನಾನು ಮುಂದೆ ಹೇಳುವಾಗ ಅದು ಅರ್ಥವಾಗುತ್ತದೆ. ಇಂಟೆರಿಮ್ ರಿಲೀಫ್ ಕೊಡುವುದನ್ನು ಒಪ್ಪಿಕೊಳ್ಳುತ್ತೇನೆ. ನಾನು ಮುಂದಿನ ಒಂದು ದೃಷ್ಟಿಯಿಂದ ಹೇಳುತ್ತೇನೆ. ಮುಂದೆ work out ಮಾಡುವಾಗ ಈ ಅಭಿಪ್ರಾಯವನ್ನಿಟ್ಟುಕೊಂಡು workout ಮಾಡಬೇಕು ಎಂದು ಹೇಳುತ್ತೇನೆ. Work out ಆಗುವಾಗ ಕ್ಯಾಪಿಟಲ್ ಎಷ್ಟಿತ್ತು, ಅವರು ರೇಷ್ಮೆಗೂಡನ್ನು ಸಾಲ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆಯೇ, ಹಾಗಿದ್ದರೆ ಆ ರೀತಿ ಸಾಲ ಎಷ್ಟಿದೆ ಎಂದು ನೋಡಿ; ಒಬೇರಾಯನ ಕಾಲದ ಬಡ್ಜೆಟ್ ಮುಂದುವರಿಸದೆ ಇರಲಿ ಎಂದು ನನ್ನ ಅಭಿಪ್ರಾಯ. ಜಾಯಿಂಟ್ ಸ್ಟಾಕ್ ಕಂಪೆನಿಯ ಆಡಳಿತದಲ್ಲಿದ ಬಡ್ಜೆಟ್ಟೇ Departmental budget ಆಗ ಪರಿವರ್ತನೆ ಆಗದಿರಲಿ. ಹಾಲಿ ಎಷ್ಟು ಬಿಸಿನೆಸ್ ಇದೆ, ಎಷ್ಟು ನಡೆಸುವುದಕ್ಕೆ ಅವಕಾಶವಿದೆ, ರೈತರಿಂದ ನೇರವಾಗಿ ಗೂಡನ್ನು ಕೊಂಡುಕೊಳ್ಳುವುದಕ್ಕೆ ಏನು ಏರ್ಪಾಡುಗಳಿವೆ ಎಂಬುದನ್ನೆಲ್ಲ ಕೂಲಂಕಷವಾಗಿ ಪರಿಶೀಲನೆ ಮಾಡಿ full swingನಲ್ಲಿ ತರಬೇಕೆಂದು ಪ್ರಾರ್ಥಿಸುತ್ತೇನೆ.

***Sri M. LINGANNA** (Nanjangud).—Sir, it is rather a sorry state of affairs if I reveal the truth why the Badanaval Centre could not work for a week at least. Of course by a subsequent circular from the Head of the Department, the Centre was asked to resume the activities as usual because they got a grant of nearly Rs. 50,000. Why I say this is, as was explained by my other colleague, the present prevailing position in the Badanaval area and round about is that of distress conditions. This particular avocation of spinning gives relief to those people who cannot go out of the doors and resort to work either on roads or on tanks and naturally during this period, the spinners have increased by leaps and bounds quite beyond 20,000 to 25,000. So, Sir, naturally the amount that was granted to this Centre has been expended more speedly than was expected by the Department. Now the centre is being replenished to the extent of Rs. 50,000 and a token sum of Rs. 100 is being asked to be voted by this House. My point is that once the centre is being run by the Government and when the necessity of continuing and developing the activity of this particular centre which was closed even prior to the attainment of Independence, is all the greater. Because of the distress conditions in the area, I submit that Government has asked the Distress Relief Committee to advance more than the money included in the grant.

There is one more lacuna. The amount that is being sanctioned by the Government to the centre will be converted into yarn or cloth and a particular portion of it will be spent on stock and when once the yarn is converted into cloth, that will be sold away and the amount realised will be credited to the treasury and not even a single pie of the amount so credited could be operated upon by the Spinning Centre. Whatever amount is being given into the Government treasury will be converted into asset. There seems to be some lurking doubt that this Spinning Centre is always working under loss. That is certainly not the case. They have given their balance sheet and I certainly believe that this centre is working at a profitable rate. The percentage of profit may be less. All the more so, if we take into consideration the principles that are responsible for the starting of this centre, we should not consider the percentage of profit that is going to be accumulated out of this

centre. Moreover, Sir, the Government should make such arrangements by means of which the centre or the Department can once again operate upon the amounts that are being remitted to the treasury from time to time. Suppose they can put three lakhs as working capital and that amount is allotted to the Department which can be operated by the concerned centre, then all this difficulty will automatically vanish. Simply because the amount that is being advanced by the Government will be automatically and speedily spent, the Centre will have to be kept closed for a large part of the year. Therefore, I submit that Government should make necessary arrangements to see that the centre works properly and works with more capital and at the same time every worker in the centre should not be under the impression that at some time the centre is going to be closed.

Sir, I more emphatically say this, that because distress conditions are still continuing in that area, for some more months, I request Government to make speedy arrangements to expand the activities of the centre by opening the relief centres also. There is, I believe, one proposal sent by the Head of the Department to give substantial relief in the distress area and that is to open a few more relief centres. I believe the proposal involves three lakhs of rupees. There is also a special resolution of the Relief Committee that three lakhs should be allotted by the Government for the working of these relief centres. Till now, I do not know what has happened to that. It only means that either the Government is not in a position to give the amount asked or the Government is reluctant.

Sri H. SIDDAVEERAPPA.—Spend out of ten lakhs that has already been given.

Sri M. LINGANNA.—Out of that amount, I believe there is only one lakh remaining and, even that one lakh is being asked by the Deputy Commissioner to be distributed to several taluk under distress to be spent on relief works like roads, desilting of tanks and other things. There is therefore practically no amount to be spent out of that amount. My point is that the Government should give outright three lakhs of rupees to the Badanaval centre so that relief work may be taken up at once.

So far as the other item is concerned, namely, the Silk Factory at T. Narsipur, it is being taken over by the Government. After incessant demand by this House and the Members of the particular area, Government has been generous enough to examine the question of taking over the factory and they have not provided 1.00 lakh of working capital. My point is that the basins working in the factory are not up-to-date and with the present basins, I believe the silk that we are producing will not be up to the standard. Therefore, there is more responsibility on the Government to improve the basins on modern lines so as to work the factory on an efficient basis.

With these few remarks, I support the demand and request that the Government should be generous enough to grant three lakhs of rupees to the Badanaval Centre in order to take up relief works because of the urgency of the matter and because of the distress conditions prevailing in that area.

*ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಈಗ ಮಾನ್ಯ ಸದಸ್ಯರು ಮಾಡಿದ ಚರ್ಚೆಯಲ್ಲಿ ನನಗೆ ಒಂದು ಅರ್ಥವಾಗುತ್ತದೆ. ಇದರಲ್ಲಿ ಹೆಚ್ಚಾಗಿ ದುಡ್ಡು ಕೊಡುವುದಕ್ಕೆ ಸರ್ಕಾರಕ್ಕೆ ತೊಂದರೆ ಇದೆ ಎಂದು ಮಾತನಾಡಿದರು. ಇದರಲ್ಲಿ ಕೊಟ್ಟಿರುವ ವಿವರಣೆ ಎಲ್ಲರಿಗೂ ಅರ್ಥವಾಗುವ ರೀತಿ ಯಲ್ಲಿದೆ ಎಂದು ತಾವು ಆಗಲೇ ಅಪ್ಪಣೆ ಕೊಡಿಸಿದಿರಿ. ಈಗ ಸರ್ಕಾರದವರು ಕೊಟ್ಟಿರುವ 50 ಸಾವಿರ ರೂಪಾಯಿಗಳನ್ನು ಕಂಟಿಙಜೆನ್ಸಿ ಫಂಡಿನಿಂದ ಕೊಟ್ಟಿದ್ದಾರೆ ನಾವು ಕಂಟಿಙಜೆನ್ಸಿ ಫಂಡ್ ಎಂದು ಬಡ್ಜೆಟ್ ಮಾಡಿದ ಕಾಲದಲ್ಲಿ ಸರ್ಕಾರದವರ ವಶದಲ್ಲಿ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. Consolidated Fund ನಿಂದ ಖರ್ಚು ಮಾಡಬೇಕಾದರೆ ಈ ಸಭೆಯ ಅನುಮತಿ ಬೇಕು. Contigency Fund ಸರ್ಕಾರದವರ ಬಳಿಯಲ್ಲಿಯೇ ಇರುವುದರಿಂದ ಅವರು ಏನಾದರೂ ಒಂದು ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಪ್ರವಾಹ ಬಂದಿರತಕ್ಕ ಜಾಗದಲ್ಲಿ ತಕ್ಷಣ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕಾದ ಸನ್ನಿವೇಶ ಒದಗಿದರೆ, ಅಂಥ ಸಂದರ್ಭಗಳಲ್ಲಿ ಹಣವನ್ನು ಒದಗಿಸಲು ಸಹಾಯವಾಗಲಿ ಎಂದೂ, ಸರ್ಕಾರದವರು ಈ ಸಭೆಯ ಅನುಮತಿಗಾಗಿ ಅಂಥ ಸಮಯಗಳಲ್ಲಿ ಕಾದು ಕುಳಿತುಕೊಳ್ಳಬಾರದು, ಹಣವನ್ನು ಅಂಥ ಕಾರ್ಯಗಳಿಗೆ ತಕ್ಷಣ ಕೊಡಲಿ ಎಂಬ ಉದ್ದೇಶದಿಂದ Contingency Fund ಕೊಟ್ಟಿದ್ದೇವೆ. ಅದರಲ್ಲಿ 50

(ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್)

ಸಾವಿರ ರೂಪಾಯಿಗಳನ್ನು ಕೊಡವುದಕ್ಕೆ ಸರ್ಕಾರದವರು ಅನುಮತಿ ಪಡೆಯಬೇಕಾಗಿಲ್ಲವೆಂದು ಆಗಲೇ ಹೇಳಿದೆ. ಈಗ ಕೊಟ್ಟಿರುವ 50 ಸಾವಿರ ರೂಪಾಯಿಗಳಿಗೆ ಅಧಿಕಾರ ತೆಗೆದುಕೊಳ್ಳಲು ಟೋಕನ್ ಗ್ರಾಂಟ್ ಕೇಳಿರುತ್ತಾರೆ. 50 ಸಾವಿರ ಮಾತ್ರವಲ್ಲ 5 ಲಕ್ಷ ರೂಪಾಯಿ ಬೇಕಾದರೂ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಸರ್ಕಾರದವರು ಯಾಕೆ ಹಿಂತೆಗೆಯುತ್ತಿದ್ದಾರೆಂಬುದು ತಿಳಿಯಲಿಲ್ಲ. ಈಗ ಟೋಕನ್ ವೋಟ್ ತೆಗೆದುಕೊಳ್ಳುವುದರಿಂದ ನನಗೂ ಸಹ ಒಂದು ಸಂತೋಷ. ಹೇಗೆಂದರೆ ಎಷ್ಟು ಬೇಕಾದರೂ ಖರ್ಚು ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರಬರುತ್ತದೆ. ನವಂಬರ್ ಒಂದನೆ ತಾರೀಖಿನ ತನಕ ಕಂಟಿನ್‌ಜೆನ್ಸಿ ಫಂಡಿನಲ್ಲಿ 30 ಲಕ್ಷ ರೂಪಾಯಿಗಳು ಖರ್ಚಾಗುವವರೆಗೂ ಸರ್ಕಾರಕ್ಕೆ ಸ್ವಾತಂತ್ರ್ಯವಿದೆ. ಅದಿಲ್ಲದೆ ಒಂದು ಗೊತ್ತಾದ ಗ್ರಾಂಟ್ ಕೊಟ್ಟಿದ್ದರೆ ಕಷ್ಟವಾಗುತ್ತಿತ್ತು.

ಎರಡನೆಯದಾಗಿ ಇದರಲ್ಲಿ ಇನ್ನೊಂದು ವಿಷಯವಿದೆ. ಏನೆಂದರೆ ಮಾನ್ಯ ಹಣಕಾಸಿನ ಮಂತ್ರಿಗಳು ಒಂದು ಅಭಿಪ್ರಾಯವನ್ನು ತಿಳಿಸಿದರು. ಖಾದಿ ಕೇಂದ್ರದಲ್ಲಿ ವ್ಯಾಪಾರವಾಗುವುದರಿಂದ ಆ ದುಡ್ಡು ಪುನಃ ಅಲ್ಲಿಯೇ ಬರುತ್ತದೆ. ಅದನ್ನೇ ಯಾಕೆ roll ಮಾಡಬಾರದು ಎಂದು ಹೇಳಿದರು. ಸಂಸ್ಥಾನದ ಲೆಕ್ಕಗಳನ್ನು 1950ನೆ ಇಸವಿಯಿಂದಲೂ ಬೇರೆ ರೀತಿಯಾಗಿ ಇಡುತ್ತಿದ್ದಾರೆ. ಯಾವ ಸರ್ಕಾರಿ ಕೈಗಾರಿಕೆಯಲ್ಲಿಯೇ ಆಗಲಿ, ಮಾಲನ್ನು ಮಾರಾಟಮಾಡಿದರೆ ಆ ಹಣವು ಜಮಾ ಬಾಬಿಗೆ ಹೊರಟು ಹೋಗುತ್ತದೆ. ಯಾವ ಸರ್ಕಾರಿ ಕಾರ್ಖಾನೆಯಲ್ಲೇ ಆಗಲಿ ಖರ್ಚು ಮಾಡಬೇಕಾದರೆ ಖರ್ಚಿನ ಬಾಬಿನಲ್ಲಿ ಶಾಸನಸಭೆ ಯಾವ ಲಿಮಿಟ್ ಗೊತ್ತು ಮಾಡುತ್ತದೆಯೋ ಅದರೊಳಗೇ ಖರ್ಚು ಮಾಡಬೇಕು. ಐವತ್ತು ಸಾವಿರ ರೂಪಾಯಿಗಳ ಮಿತಿ (limit) ಕೊಟ್ಟರೆ ಅದು ಖರ್ಚಾಗಿ ಹೋದರೆ ಪುನಃ ಹೆಚ್ಚಿಗೆ ಗ್ರಾಂಟಿಗೆ ಶಾಸನಸಭೆಗಳ ಮುಂದೆ ತರಬೇಕು. ನಾನು ಈ ಸಭೆಗೆ ತಿಳಿಯಪಡಿಸುವುದೇನೆಂದರೆ, ಯಾವ ಸರ್ಕಾರಿ ಇಲಾಖೆಯಲ್ಲಿಯೇ ಆಗಲಿ ಏನು ಖರ್ಚು ಮಾಡಬೇಕಾದರೂ ಶಾಸನಸಭೆಗಳಲ್ಲಿ ಏನು ಖರ್ಚು ಮಾಡಬೇಕೆಂದು ಮಿತಿಯನ್ನು ಗೊತ್ತುಮಾಡುತ್ತಾರೆಯೋ ಆ ಮಿತಿಗೊಳಪಟ್ಟು ಖರ್ಚು ಮಾಡಬೇಕು. ಜಮಾಬಾಬಿನಲ್ಲಿ ಬರತಕ್ಕ ಹಣವನ್ನು ಅವರು ಖರ್ಚು ಮಾಡುವ ಹಾಗಿಲ್ಲ. ಖರ್ಚು ಬಾಬಿಗೆ ಹಣವನ್ನು ತೆಗೆದುಕೊಳ್ಳಬೇಕಾದರೆ Consolidated Fund ನಿಂದ ತೆಗೆದುಕೊಳ್ಳಬೇಕು. ಸರ್ಕಾರದ ಹಣವೇನಿದೆ ಅದರಿಂದ ಖರ್ಚು ಮಾಡುವುದಕ್ಕೆ 50 ಸಾವಿರ ರೂಪಾಯಿಗಳ ವರೆಗೂ ಹೆಚ್ಚಿನ ಮಿತಿಯನ್ನು ಈಗ ಕೊಟ್ಟ ಹಾಗಾಯಿತು. ಜಮಾಬಾಬಿನಲ್ಲಿ ಹಣವನ್ನು ತೆಗೆದುಕೊಂಡು ಖರ್ಚು ಮಾಡುವ ಅಧಿಕಾರ ಸರ್ಕಾರಕ್ಕೆ ಬರುವುದಿಲ್ಲ. ಹಿಂದೆ ಒಂದೊಂದು ಇಲಾಖೆಗೂ ಸಹ ಅಡ್ವಾನ್ಸ್ ಕೊಡುತ್ತಿದ್ದರು. 10-15 ಲಕ್ಷ ರೂಪಾಯಿಗಳನ್ನು ವ್ಯವಸಾಯ ಇಲಾಖೆಯ ಡೈರೆಕ್ಟರ್ ಅವರಿಗೆ personal advance ಎಂದು ಕೊಟ್ಟಿದ್ದಾರೆಂದರೆ ಆ ಅಡ್ವಾನ್ಸ್‌ನಲ್ಲಿ ಕೊಳ್ಳುವುದು ಮಾರುವುದು ಎರಡನ್ನೂ ಮಾಡುತ್ತಿದ್ದರು. ಈಗ ಹಾಗೆ ಅಡ್ವಾನ್ಸ್ ಕೊಡುವುದಿಲ್ಲ. ಆ ಪದ್ಧತಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿಲ್ಲ. ಆದುದರಿಂದ ನಾವು ಹೇಳುವುದೇನೆಂದರೆ, ಯಾವಾಗ ಖರ್ಚು ಮಾಡತಕ್ಕ ಮಿತಿಯನ್ನು ಶಾಸನಸಭೆ ಗೊತ್ತು ಮಾಡುತ್ತದೆಯೋ ಅವಾಗ ಹೆಚ್ಚಿಗೆ ಖರ್ಚಿಗೆ ಈ ಸಭೆಯು ಮುಂದೆ ಬರಬೇಕಾಗುತ್ತದೆ. ಈಗ ಬದನವಾಳ ಖಾದಿ ಕೇಂದ್ರದಲ್ಲಿ ಏನು ವರಮಾನವಿದೆ, ಏನು ಖರ್ಚಿದೆ ಎಂದು ನಮಗೆ ಗೊತ್ತಿಲ್ಲ. ಕೆಲವರು ವರಮಾನ ಬರುತ್ತದೆಂದು ಹೇಳುತ್ತಾರೆ. ಹಾಗೆ ಅದರ ವಿವರಣೆ ಗೊತ್ತಾಗಬೇಕಾದರೆ ಆ ಕೇಂದ್ರದ ಲಾಭನಷ್ಟದ ಲೆಕ್ಕವನ್ನು ತೆಗೆದುಕೊಂಡು ನೋಡಿದರೆ ಸಂಪೂರ್ಣವಾಗಿ ಭರವಸೆ ಬರುತ್ತದೆ. ಅದರಲ್ಲಿ ಒಂದು ವೇಳೆ ನಷ್ಟವಾದರೆ ಅದು ನ್ಯಾಯವಾದ ನಷ್ಟವಾಗುತ್ತದೆ. ಹಾಗಾಗುವುದಕ್ಕೆ ಅವಕಾಶವಿಲ್ಲ, ಇದರಲ್ಲಿ ಹಣವೇನೂ ಹೋಗುವುದಿಲ್ಲ. ಹೋದರೂ ಸಹ ಅದು ನಷ್ಟವೆಂದು ಹೇಳುವುದಕ್ಕಾಗುವುದಿಲ್ಲ. ಯಾಕೆಂದರೆ ಆ ಖಾದಿ ಕೇಂದ್ರದ ಉದ್ದೇಶ ಹೆಚ್ಚು ಜನರಿಗೆ ಕೆಲಸ ಕೊಡುವುದು. ಶ್ರೀಮಾನ್ ಪಟ್ಟಾಭಿರಾಮನ್ ಅವರು ಬಹಳ ಸ್ಫೂರ್ತಿದಾಯಕವಾದ ವಿಷಯಗಳನ್ನು ಹೇಳಿದರು. ಖಾದಿಯ ವಿಚಾರದಲ್ಲಿ ಅದಕ್ಕೆ ಲಗತ್ತಾಗಿರುವ ಭಾವನೆ, ಆ ದೃಷ್ಟಿ, ಪೂಜ್ಯ ಭಾವನೆ, ಇವುಗಳಿಂದ ಸ್ವಲ್ಪ ಹಣ ಖರ್ಚಾದರೂ ಅದು ನಷ್ಟವೆಂದು ನಾವು ಹೇಳುವುದಕ್ಕಾಗುವುದಿಲ್ಲ, ಆದುದರಿಂದ ಸರ್ಕಾರದವರು ಪುನರಾಲೋಚನೆ ಮಾಡಿ, ಇದನ್ನು ಮಂಡಿಸುವುದಕ್ಕೆ ಮುಂಚೆ ಒಂದು ತಿದ್ದುಪಡಿಯನ್ನು ಕೊಟ್ಟರೆ ಒಳ್ಳೆಯದೆಂದು ತಿಳಿದುಕೊಂಡಿದ್ದೇನೆ. ಅದರಲ್ಲಿ ಏನೂ ಇಜ್ಜತ್ ಇಲ್ಲದೆ ಇರಲಿ ಎಂದು ಹೇಳುತ್ತೇನೆ.

3 P.M.

"For expanding its activities in the distress areas of Mysore District" ಎಂದು ನಮೂದಿಸಿದ್ದಾರೆ. ಆ ಆಕ್ಟಿವಿಟೀಸ್ ಏನೆಂದು ಹೇಳಿಲ್ಲ. ಈಗ ಮೈಸೂರು ಡಿಸ್ಟ್ರಿಕ್ಟಿನಲ್ಲಿ ನರಸೀಪುರ, ನಂಜನಗೂಡು, ಚಾಮರಾಜನಗರ, ಎಳಂದೂರು, ಮೈಸೂರು ತಾಲ್ಲೂಕಿನಲ್ಲಿ ಕೆಲವು ಕಡೆ ಡಿಸ್ಟ್ರೆಸ್ ಏರಿಯಾಸ್ ಇವೆ. ಅಲ್ಲೇನು ಕಾರ್ಯಕ್ರಮ ಕೈಕೊಳ್ಳಬೇಕು, ಸೆಂಟರ್ ಓಪನ್ ಮಾಡಬೇಕೆ ಟ್ರೈನಿಂಗ್ ಕೊಡಬೇಕೆ, ನಷ್ಟವಾಗಿದ್ದರೆ ಅದನ್ನು ಹೋಗಲಾಡಿಸಿ ಲಾಭ ಬರುವಂತೆ ಮಾಡಬೇಕೆ ಎಂಬುದನ್ನು ಸೂಚಿಸಲಿಲ್ಲ. ಯಾವ ಕಾರ್ಯಕ್ರಮ ಈಗಿವೆ, ಮುಂದೇನು ಮಾಡಬೇಕು ಎಂಬ ತಪಶೀಲನ್ನು ಕೊಡಬೇಕು. ಈಗೇನು ಕಾರ್ಯಕ್ರಮವಿದೆ. ಅದರಿಂದ ಕ್ಷಾಮ ಪರಿಹಾರಕ್ಕೆ ಅನುಕೂಲವಾಗಿ ಜನರಿಗೆ ಅನಕೂಲವಾಗುತ್ತಿದೆಯೆ ಎಂಬ ದೃಷ್ಟಿಯಿಂದ ವಿಮರ್ಶೆ ಮಾಡಬೇಕು.

ಮೂರನೆಯದಾಗಿ ಸಿಲ್ಕ್ ಫ್ಯಾಕ್ಟರಿ ವಿಚಾರ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ತಾನೆ ಯಾವ ರೀತಿ ಸರ್ಕಾರದವರು ಅದನ್ನು ತೆಗೆದುಕೊಂಡು ಖರ್ಚು ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆಂಬುದಕ್ಕೆ ಒಂದು ಉದಾಹರಣೆ ಕೊಟ್ಟಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಅಕ್ಟೋಬರ್ ಒಂದರಿಂದ ನವೆಂಬರ್ ಒಂದರವರೆಗೆ ಆರು ಕಾರ್ಖಾನೆಗಳನ್ನು ಸರ್ಕಾರ ತೆಗೆದುಕೊಂಡು ನಡೆಸುತ್ತದೆಂದು ಹೇಳಿದರು, ಸಂತೋಷ. ಅಕ್ಟೋಬರ್ ಒಂದರಿಂದ 3-4 ದಿವಸಗಳಲ್ಲಿ ಆರು ಕಾರ್ಖಾನೆಗಳು ಸರ್ಕಾರಿ ಆಡಳಿತದಲ್ಲಿ ಕೆಲಸ ಮಾಡುತ್ತವೆ, ಬಹಳ ಸಂತೋಷ. ಅದಕ್ಕಾಗಿ ವಂದನೆಗಳು. ಏಕೆಂದರೆ ಎರಡು ಸಾವಿರ ಕೆಲಸಗಾರರಿಗೆ ಅನುಕೂಲವಾಗುತ್ತದೆ ಮತ್ತು ಕ್ಷಾಮ ಕಾಲದಲ್ಲಿ ಇದರಿಂದ ಬಹಳ ಉಪಕಾರವಾಗುತ್ತದೆಂದು ಖಂಡಿತವಾಗಿ ಹೇಳುತ್ತೇನೆ. ಇವನ್ನು ಯಾವ ರೀತಿ ನಡೆಸುತ್ತಾರೆಂಬುದಕ್ಕೆ ವಿವರಣೆ ಕೊಟ್ಟಿಲ್ಲ. ಯಾವ ರೀತಿ ವ್ಯವಸ್ಥೆ ಮಾಡಬೇಕೆಂದು ವಿಮರ್ಶೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನವೆಂಬರ್ ಒಂದರಿಂದ ಜಾರಿಗೆ ಬರುತ್ತದೆಯೇ ಅಥವಾ ಅಕ್ಟೋಬರ್ ಒಂದರಿಂದ ಜಾರಿಗೆ ಬರುತ್ತದೆಯೆ ?...

ಶ್ರೀ ಎಚ್. ಸಿದ್ದವೀರಪ್ಪ.—ನವೆಂಬರ್ ಒಂದರಿಂದ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ನವೆಂಬರ್ ಒಂದರವರೆಗೆ ಯಾವರೀತಿ ಮಾಡಲಾಗುವುದು ? ಕಾರ್ಮಿಕ ವರ್ಗದ-ಹಿತ ನನಗೆ ಮುಖ್ಯವಾದುದು. ಆಲ್ ಇಂಡಿಯಾ ಸಿಲ್ಕ್ ಬೋರ್ಡ್ಇದೆ. ಅದರಿಂದ ಕೂಡ ಬೇಕಾದಷ್ಟು ಹಣ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ, 20 ಲಕ್ಷ ರೂಪಾಯಿಗಳನ್ನು ಬೇಕಾದರೂ ತರಬಹುದೆಂದು ಒಂದು ಸಲ ಹೇಳಿದರು. ಅದನ್ನು ಬರಮಾಡಿಕೊಳ್ಳದಿದ್ದರೆ ನವೆಂಬರ್ ಒಂದರಿಂದ ಕಷ್ಟವಾಗಬಹುದು, ಈಗಲೇ ಆ ಹಣ ಬರಮಾಡಿಕೊಂಡರೆ ಒಳ್ಳೆಯದು ಎಂಬ ದೃಷ್ಟಿಯಿಂದ ಎರಡು ಮಾತನ್ನು ಹೇಳಿದ್ದೇನೆ. 41ನೆಯ ಡಿಮ್ಯಾಂಡ್ ವಿಚಾರ ಆ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ.

Sri H. SIDDAVEERAPPA.—Lest I may forget, I may tell you that on the 6th of October there is a meeting here. They are considering this question as to what to do to T.-Narasipur Centre.

Mr. SPEAKER.—The House will now rise for lunch and meet at 3-35.

The House adjourned for lunch at Five minutes past Three of the Clock and reassembled at Thirty-five Minutes past Three of the Clock.

[MR. SPEAKER in the Chair.]

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಖಾದಿಯ ವಿಚಾರದಲ್ಲಿ ಈ ದಿವಸ ಜೋತಾ ಸೂಚನೆ ಕಳುಹಿಸಿರುವುದನ್ನು ನೋಡಿ ಬಹಳ ಸಂತೋಷವಾಗಿದೆ. ಕೈಗಾರಿಕೆ ವಿಚಾರದಲ್ಲಿ ಬಹಳ ಹೆಚ್ಚಿನ ಆಸಕ್ತಿಯನ್ನು ವಹಿಸಿರುವ ನಮ್ಮ ಮಾನ್ಯ ಮಂತ್ರಿಗಳು ಕೈಮಗ್ಗ ಮುಂತಾದುವಕ್ಕೆ ಬೇಕಾದಷ್ಟು ಹಣ ಒದಗಿಸಿದ್ದಾರೆಂಬುದು ಸಂಬಂಧಪಟ್ಟ ಸಮಿತಿಯಲ್ಲಿ ನಾನಿದ್ದುದರಿಂದ ಗೊತ್ತಾಯಿತು. ನಮ್ಮ ಮೈಸೂರು ಸಂಸ್ಥಾನದಲ್ಲಿ ಎಷ್ಟು ಖಾದಿ ಕೇಂದ್ರಗಳಿವೆಯೋ ಅವಕ್ಕೆಲ್ಲಾ ಸಹಾಯವಾಗಿ ಜನರಿಗೆ ಅನುಕೂಲವಾಗಬೇಕು. ಸಣ್ಣ ಮನೆ ಕೈಗಾರಿಕೆ, ಗ್ರಾಮ ಕೈಗಾರಿಕೆ ಇವಕ್ಕೆಲ್ಲಾ ಉತ್ತೇಜನ ದೊರಕಿ ಹೆಂಗಸರು, ಮುದುಕರು ಎಲ್ಲರಿಗೂ ಉದ್ಯೋಗ ದೊರಕಿ ನಿರುದ್ಯೋಗ ಪ್ರಶ್ನೆ ಖಾದಿ ಉತ್ತೇಜನದಿಂದ ಹೋಗಬೇಕು. ಮನೆಯಲ್ಲಿರುವ ಹೆಣ್ಣು ಮಕ್ಕಳು ನೂಲನ್ನು ತೆಗೆದು ನಾಲ್ಕು ಕಾಸು ಸಂಪಾದನೆ ಮಾಡಲು ಸೌಲಭ್ಯವಿರಬೇಕು. ಇದಕ್ಕೆಲ್ಲಾ ನಮ್ಮ ದೇಶದಲ್ಲಿ ಖಾದಿಯ ಕೈಗಾರಿಕೆ ಮುಖ್ಯಾಧಾರವಾಗಿದೆ. ಮಹಾತ್ಮ ಗಾಂಧಿಯವರ ಕಾಲದಿಂದ ಇದಕ್ಕೆ ಉತ್ತೇಜನ ದೊರೆಯುತ್ತಿದೆ. ಪಂಚಭೂತಗಳು ಹೇಗೆ ನಮ್ಮ ದೇಹಪೋಷಣೆಗೆ ಮುಖ್ಯವೋ ಹಾಗೆ ಅನ್ನ, ಬಟ್ಟೆ, ವಸತಿ, ವಿದ್ಯೆ, ಆರೋಗ್ಯ ಇವು ನಮ್ಮ ದೇಶದ ಉದ್ಧಾರಕ್ಕೆ ಮುಖ್ಯ ಎಂದು ಅವಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದಾರೆ. ಮಾನ್ಯ ಮಂತ್ರಿಗಳಿಗೂ ಇದರ ಅನುಭವವಿದೆ. ಅಂಥಾದ್ದರಲ್ಲಿ ಖಾದಿಗೆ ಈ ದಿವಸ ಸಾಕಷ್ಟು ಉತ್ತೇಜನವಿಲ್ಲ, ಖಾದಿ ಕೈಗಾರಿಕೆ ಮುಚ್ಚುವ ಪ್ರಸಂಗ ಬಂದಿದೆ. ಅದಕ್ಕೆ ಸಾಕಾದಷ್ಟು ಪ್ರೋತ್ಸಾಹ ಅವಶ್ಯಕ. ಕೇಂದ್ರ ಸಬ್ಸಿಡಿ ಕೊಡುವುದಲ್ಲದೆ ಹತ್ತು ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಡುತ್ತದೆಂದು ಹೇಳಿದರು. ಖಾದಿಗೆ ಉತ್ತೇಜನ ಕೊಡುವಾಗ ಶ್ರೀಮಾನ್ ಮಾದಯ್ಯನವರು ಹೇಳಿದಂತೆ ಬದನವಾಳದ ಖಾದಿಗೆ ಮಾತ್ರವಲ್ಲದೆ ನಮ್ಮ ಸಂಸ್ಥಾನದಲ್ಲಿರುವ ಅಜ್ಜಂಪುರ, ಐಮಂಗಲ ಮುಂತಾದ ಇತರ ಖಾದಿ ಕೇಂದ್ರಗಳಿಗೂ, ಮನೆಯಲ್ಲಿ ಹೆಂಗಸರು ಗೃಹ ಕೈಗಾರಿಕೆಯಂತೆ ಇಟ್ಟುಕೊಂಡು ನೂಲು ತೆಗೆದು ಎಂಟಾಣೆ ಕೂಲಿ ಸಂಪಾದನೆ ಮಾಡುವುದಕ್ಕೂ, ಹಾಗೆ ಮಾಡಿ ನಿರುದ್ಯೋಗ ನಿವಾರಣೆ ಮಾಡಿಕೊಳ್ಳುವುದಕ್ಕೂ ಪ್ರೋತ್ಸಾಹ ಅವಶ್ಯಕ. ಹಾಗೆ ಮಾಡುವುದರಿಂದ ನಿರುದ್ಯೋಗ ಪ್ರಶ್ನೆಯೂ ಪರಿಹಾರವಾಗಿ ಮರ್ಯಾದೆಯಿಂದ ಮನೆಯಲ್ಲಿ ಕೆಲಸಮಾಡುವ ಹೆಣ್ಣುಮಕ್ಕಳಿಗೂ ಸಹಾಯವಾಗುತ್ತದೆ. ಹಿರಿಯೂರು ತಾಲ್ಲೂಕಿನಲ್ಲಿ ಚರಕ ಕೆಲಸ ನಿಂತಿದೆಯೆಂದು ಹೇಳುತ್ತಿದ್ದಾರೆ. ಅದರಿಂದ 10-15 ಸಾವಿರ ಸಂಸಾರಗಳು ಅಲ್ಲಿ ಜೀವನ ಮಾಡುತ್ತಿದ್ದುವು. ಮೈಸೂರು ಸರ್ಕಾರದ ಗ್ರಾಂಟನ್ನು ಈ ದಿವಸ ನಿಲ್ಲಿಸಿದ್ದಾರೆಂದು ಹೇಳುತ್ತಾರೆ. ಇಡೀ ಸಂಸ್ಥಾನದಲ್ಲಿ ಖಾದಿಗೆ ಉತ್ತೇಜನ ಕೊಡಬೇಕು. ಹ್ಯಾಂಡ್‌ಲೂಂ ಕಮಿಟಿಯೆಂದು ಮಾಡಿ ಕೇಂದ್ರದಿಂದ ಹಣ ಸಹಾಯ ಕೇಳಿದ್ದಾರೆ. ಇತರ ಕೈಗಾರಿಕೆಗಳಿಗೆ ಬೇಕಾದಷ್ಟು ಉತ್ತೇಜನ ನೀಡುವಾಗ ಖಾದಿಗೇಕೆ ಪ್ರೋತ್ಸಾಹ ನೀಡಬಾರದು ? ಈ ದಿವಸ ಖಾದಿ ಹಾಕುವವರು ಹಿಂದೇನು ಹಾಕುತ್ತಿದ್ದರು ? ಈಗ ಒಳ್ಳೆಯ ನಮೂನೆ ಸೀರೆ ಸಿಕ್ಕುವುದಿಲ್ಲ, ಉಡುವವರಿಗೆ ಆಕರ್ಷಣೆಮಾಡುವ ಶಕ್ತಿ ಖಾದಿ ಕೈಗಾರಿಕೆಗೆ ಬಂದಿಲ್ಲ. ಇದಕ್ಕೆ ಮಂತ್ರಿಗಳು ಸಾಕಷ್ಟು ಗಮನ ಕೊಡದಿರುವುದೇ ಮುಖ್ಯಕಾರಣ. ಕೈಮಗ್ಗದಲ್ಲಿ ಹೊಸಹೊಸ ತರಹ ನೆಯ್ಗೆಗೆ ಅವಕಾಶ ಕಲ್ಪಿಸಿರುವ ಹಾಗೆ ಖಾದಿಯಲ್ಲೂ ಅವಕಾಶಮಾಡಿ ಆಕರ್ಷಣೀಯವಾದ ಬಟ್ಟೆ ತಯಾರಿಸಿದರೆ ಬೇಕಾದಷ್ಟು ಖಾದಿ ಬಟ್ಟೆ ಖರ್ಚಾಗುತ್ತದೆ. ಆ ರೀತಿ ಮಾಡಬೇಕು. ಇವಕ್ಕಾಗಿ ಎಷ್ಟು ಹಣ ಅವಶ್ಯಕವೋ ಅಷ್ಟನ್ನು ಕೊಡಬೇಕು. ಯಾವ ಮುಖಾಂತರವೇ ಆಗಲಿ ಸಹಾಯ ದೊರೆಯಬೇಕು, ಈ ಕೈಗಾರಿಕೆಯಲ್ಲಿ ನಿರತರಾಗಿರುವವರಿಗೆ ಹೊಟ್ಟೆ ತುಂಬುವಷ್ಟು ಸಂಪಾದಿಸಲು ಅವಕಾಶವಾಗಬೇಕು. ಯಾವ ಕೇಂದ್ರವನ್ನೂ ಮುಚ್ಚುವ ಯೋಚನೆ ಮಾಡಬಾರದು. ಹೆಂಗಸರು, ಮಕ್ಕಳು ಎಲ್ಲರೂ ಖಾದಿ ಕೈಗಾರಿಕೆಯಲ್ಲಿ ನಿರತರಾಗಲು ಅವಕಾಶಮಾಡಿ ಇದಕ್ಕೆ ಸಾಕಾದಷ್ಟು ಹಣ, ರಕ್ಷಣೆ ನೀಡಬೇಕು. ಕೈಮಗ್ಗದಲ್ಲಿ ತಯಾರಾಗುವಂತೆ ನಮೂನೆಯಾದ ಸೀರೆ ಮತ್ತು ಬಟ್ಟೆ ಖಾದಿಯಲ್ಲೂ ಮಾಡಲು ವ್ಯವಸ್ಥೆಮಾಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಪೂರೈಸುತ್ತೇನೆ.

Sri H. SIDDAVEERAPPA.—If I make a statement regarding Badanval, perhaps Hon'ble Members may not find it desirable to offer any further remarks. If you permit me, I shall speak.

Mr. SPEAKER.—Yes.

*ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಮಾನ್ಯ ಸದಸ್ಯರು ಬದನವಾಳದ ಖಾದಿ ಕೇಂದ್ರದ ಕಾರ್ಯ ವಿಸ್ತರಣೆ ಪ್ರಕೃತ ಸಾಲಿನಲ್ಲಿ ಯಾವ ರೀತಿ ಹೆಚ್ಚಾಗಿದೆ, ಹಣದ ವ್ಯವಸ್ಥೆ ಹೇಗೆ ಆಗಬೇಕು ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಿಗೂ ನನಗೂ ಆ

(ಶ್ರೀ ಎಚ್. ಸಿದ್ದವೀರಪ್ಪ)

ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದ ಹಾಗೆ ಖಾದಿ ಕೆಲಸ ನಿಲ್ಲಿಸಬೇಕೆಂದು ಯಾರು ಆರ್ಡರು ಮಾಡಿದ್ದಾರೋ ನನಗೆ ಗೊತ್ತಿಲ್ಲ. ಹಣದ ಅಭಾವದಿಂದ ಏನಾದರೂ ಡೈರೆಕ್ಟರು ತಿಳಿಸಿದ್ದಾರೆಯೆ ಎಂಬುದನ್ನು ವಿಚಾರ ಮಾಡಬೇಕು. ಆದರೆ ಒಂದನ್ನು ಮಾತ್ರ ಈ ಸಮಯದಲ್ಲಿ ಹೇಳುತ್ತೇನೆ. ಕೇಂದ್ರ ಸರ್ಕಾರದವರು ಖಾದಿಗೆ ಯಾವ ಪ್ರೋತ್ಸಾಹವನ್ನು ಕೊಡುತ್ತಾರೋ ಆ ಸಹಾಯವನ್ನು ಪಡೆಯಲು ಕಾರಣಾಂತರದಿಂದ ಇದುವರೆಗೂ ನಮಗೆ ಸಾಧ್ಯವಾಗಿರಲಿಲ್ಲ. ಹಣದ ಅಭಾವದಿಂದ ಆ ಖಾದಿ ಕೇಂದ್ರದ ಕೆಲಸ ನಿಂತುಹೋಗಿದೆ ಎಂದು ಹೇಳುತ್ತಿರುವುದು ಬಹಳ ಶೋಚನೀಯವಾದ ಮಾತಾಗಿದೆ. ಅಲ್ಲಿ ಕೆಲಸವನ್ನು ಮುಂದುವರಿಸಲು ಈಗ ಸಾಕಷ್ಟು ಹಣವಿದೆ. ಇವರ ಜೊತೆಗೆ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಬೇರೆ ಹೇರಳವಾಗಿ ಹಣವನ್ನೊದಗಿಸಲಾಗಿದೆ. ಎಲ್ಲ ಸೌಕರ್ಯಗಳೂ ಇವೆ. ಆದರೆ ನಮ್ಮಲ್ಲಿ ಒಂದು ಸರಿಯಾದ ಸೆಟ್‌ಅಪ್ ಇಲ್ಲ. ಅಷ್ಟೇವಿನಾ ಹಣಕ್ಕೆ ಅಭಾವವೇನೂ ಇಲ್ಲ. ಬದನವಾಳದಲ್ಲಿ ಕೆಲಸ ನಿಲ್ಲಿಸಬೇಕಾದಂಥ ಪ್ರಮೇಯವೆಂದೂ ಬರಲಾರದು. ಅದಕ್ಕೆ ಬೇಕಾಗತಕ್ಕ ಹಣವನ್ನು ಸರ್ಕಾರದಲ್ಲಿ ಡಿಪಾಜಿಟ್ ಇಡಲಾಗಿದೆ. ಆದರೆ ಈಗಿನ ಪ್ರಶ್ನೆಯದಲ್ಲ. ಡಿಸ್ಟ್ರೆಸ್ ಏರಿಯಾದಲ್ಲಿ ಜನರಿಗೆ ರಿಲೀಫ್‌ಕಾಂಗಾರಿಗಳನ್ನೊದಗಿಸಲು ಕೊರತೆಯಾಗಿದ್ದ ಕಾರಣ ಈ ಸಂಬಂಧದಲ್ಲಿ ಆ ಕೊರತೆಯನ್ನು ಸಾಧ್ಯವಾದಮಟ್ಟಿಗೂ ನಿವಾರಣೆ ಮಾಡಬೇಕೆಂಬ ಉದ್ದೇಶವಿಂದ ಈ ಏರ್ಪಾಡನ್ನು ಮಾಡಿದ್ದೆವು. ಆದರೆ ಈ ಪ್ರಕೃತ ಸಂದರ್ಭದಲ್ಲಿ ಎಷ್ಟು ಹಣ ಬೇಕಾದರೂ ಒದಗಿಸಬೇಕೆಂಬುದೇ ನಮ್ಮಗಳ ಆಸೆ. ಆ ರೀತಿ ಹಣದ ಅಭಾವ ಇದೆ ಎಂದು ಕಂಡುಬಂದರೆ ಒಂದು ಲಕ್ಷ ರೂಪಾಯಿಗಳವರೆಗೂ ಸಹಾಯ ನೀಡಲು ಸರಿಯಾದ ಏರ್ಪಾಡುಗಳನ್ನು ಮಾಡಬೇಕೆಂಬ ಇರಾದೆಯುಳ್ಳವರಾಗಿದ್ದೇವೆ ಎಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟರೆ ಸಾಕೆಂದು ಕಾಣುತ್ತದೆ. ಆದರೆ ತಾವು ಕೇಳುತ್ತಿರವ ಮೂರು ಲಕ್ಷ ರೂಪಾಯಿಗಳ ಸಾಲದ ಮಂಜೂರಾತಿಗೂ ಕೂಡ ಸಾಕಷ್ಟು ಪ್ರಯತ್ನಮಾಡೋಣ. ಹಾಗೆ ಹಣದ ತೊಂದರೆಯಿಂದ ಅಲ್ಲಿ ಕೆಲಸ ನಿಲ್ಲಿಸಲು ಅವಕಾಶಕೊಡುವುದಿಲ್ಲವೆಂಬ ಭರವಸೆಯನ್ನು ಮಾತ್ರ ನಾನೀಗ ತಮಗೆ ಕೊಡಬಲ್ಲೆ. ಈ ಭರವಸೆಯ ಮೇಲಾದರೂ ತಾವು ಹೇಳತಕ್ಕ ತಮ್ಮ ಹೇಳಿಕೆಗಳನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಒದಗಿಸಿರುವ 50 ಸಾವಿರ ರೂಪಾಯಿಗಳು ರಾಮೆಟೀರಿಯಲ್ಸ್ ಕೊಳ್ಳಲು ಸಾಕಾಗುವುದಿಲ್ಲ. ಬದನವಾಳದಲ್ಲ ಇಲ್ಲಿಯವರೆಗೆ ಅಂಥಾ ಲುಕ್ಸಾನೇನೂ ಆಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಾನೂ ಸಹ ಆ ವಿಚಾರ ಸ್ವಲ್ಪಮಟ್ಟಿಗೆ ತಿಳಿದಿದ್ದೇನೆ. ಸ್ವಲ್ಪ ಲಾಭ ಬಂದಿದೆ. ನಷ್ಟದ ಪ್ರಶ್ನೆಯೇ ಇಲ್ಲ ಉದ್ಭವಿಸುವುದಿಲ್ಲ. ಇದೊಂದು human life problem ಎನ್ನುವ ದೃಷ್ಟಿಯಿಂದ ಇದನ್ನು ಪರಿಶೀಲನೆಮಾಡಬೇಕಾಗಿದೆ.

Sri V. M. MASCARENHAS (St. John's Hill).—Mr. Speaker, the story of the Mysore Silk Filatures is interesting. Started before the Second World War as a public limited company, this company had fared very well for a few years of its existence, and fair dividends were declared. Instead of consolidating their position it is unfortunate that this company went a little mad in its ventures. And to-day we see them coming to the Government with a begging bowl. If only this company had been very careful in the early stages I am of the opinion that this situation would not have arisen. Over and above, I am constrained to remark that the Government when giving them loans have not been very vigilant to see that those loans were properly used, with the result we are taking over a concern with a deficit of Rs. 18 lakhs. What hopes the Government of Mysore have got to rehabilitate this concern, when their own concern in Kanakapura is faring no better, is hard for me to understand. We may only look at this problem from the standpoint of employment to a large number of people. With the development of silk industry in Kollegal which is coming into Mysore, I only hope that the Mysore Government and specially the department of Sericulture, and the Director of Industries will put their heads together and see that this industry will turn the corner and become more profitable to the State.

*Sri T. MARIAPPA (Mysore City North).—Sir, I would like to offer a few remarks on Demand No. 41. As my Hon'ble friend Sri Mascarenhas happened to remark the Mysore Silk Filatures was in a flourishing condition during the War. In fact it had an absolute monopoly in the manufacture of parachute silk and the income was very substantial in those days. If the Managers of the Silk Filature Factory were prudent they could have built up a substantial reserve for the rainy days. They did not build up the reserve fund that were required to rehabilitate the Silk Filatures in case the demand of parachute silk failed. Therefore after the cessation of hostilities the Silk Filatures fell on evil days and as early as 1940 itself they came to Government for financial accommodation. On 29th October 1940 the Government lent Rs. 79,000 and on 17th March 1943 they

lent Rs. 9,60,000. Things did not improve and therefore they came to Government for further accommodation. On 2nd July 1949 they took another loan of Rs. 2 lakhs and on 23rd September 1949 additional two lakhs. Sir, Sri P. Subbarama Chetty, who was my colleague in the last Ministry was a man who was greatly interested in the development of silk industry in this country. He went into the whole question of rehabilitating the industry and pursuaded the Government to advance loans so that it could be rehabilitated. But, nevertheless, the condition of silk industry was in a hopelessly perilous condition in those days. One factor which was responsible for the non-stabilisation of this industry was, we had fluctuations in the market. If you examine the market rates of silk for the last ten years, you may be able to see very wide fluctuations of the imported silk and consequent depression of the local silk filature. Even Kankanhalli filature was not able to make much headway in this direction. It is now time that the Government of Mysore examines the whole field of production of silk filature. The filature now produced is not even of D grade. It requires a lot of improvement. If the idea of Government is merely to take over some of the sections of the Mysore Silk Filature with a view to have their loans repaid, the real purpose for which they are taking will not be served. Their idea ought to be to take those concerns with a view to rehabilitate them, modernise the filature and see that we also make some advance in the production of silk of international standard. It is true that it takes a long period for the production of high grade silk. Therefore we have to take initial steps from now onwards if we have to make some headway in this field. The south of Mysore State is peculiarly suited for the development of sericulture and silk industry. In the south almost on 55,000 acres mulberry is grown. It is therefore necessary that the defunct basins at Kanakapura and Chamarajanagar be revived and the existing basins improve. It is only then will be able to make some headway.

Sir, some of our friends expressed whether it would be a profitable concern. I can assure the House I have some experience in this field and provided we have necessary experts for three or four years it would be possible to make the whole venture a paying proposition. My Hon'ble friend Sri V. M. Mascarenhas doubted whether it is merely to find employment for a few people. It is not so; it is not only for finding employment for the people of the area but also to earn from a name for Mysore in the production of silk. Mysore State had almost monopoly in the production of silk. Mysore silk has a r putation to maintain and that bright shining is exclusive to Mysore silk. I think Mysore State produces about 16 lakhs pounds of silk and we do not want the State to lose that monopoly. After independence even other States are making headway in this field. After the Central Silk Board was formed States like Kashmir, West Bengal and some parts of Orissa are already in the field. Before other States come into the field and snatch the opportunity it is time for the Mysore State to think of rehabilitation of this industry. With the taking over of these concerns except one at Sidlaghatta, Mysore holds monopoly in the manufacture of silk. There are some small private concerns; but that apart Mysore certainly holds monopoly.

Added to this, I would like to impress upon the Government the need for rehabilitating the Spun Silk Mills at Channapatna. They have a branch of silk filature factory. Mysore Government also holds shares in this Mill. I had an occasion to visit that factory recently. All is not well with that concern. It is time the Government contemplate taking over that concern so that it may be rehabilitated. Very recently the Public Accounts Committee had an occasion to go into the affairs of this company. They have also suggested that the Government should look into the affairs of the company so that it can be rehabilitated ano placed on sound working conditions.

Sir, one word and I closeI stated earlier that with the taking over of

(SRI T. MARIAPPA)

these conc erns it is not enough if you satisfy that we have our moneys worth. They must be prepared to sink more money to modernise the filatures.

Sir, another friend happened to remark that the Central Silk Board is prepared to give money. I have also got some information in that behalf and if my information is correct they are prepared to advance to the extent necessary so that this industry could be rehabilitated completely and placed on sound footing.

Sir, one word of caution I would like to sound in this behalf. In taking over the liabilities, I want my friend to go through very carefully. Because they were not able to work this filature it became necessary for them even to borrow from private investors. The Managing Director who was in charge of this concern had to almost toil single-handed to get money so that the filature could run.

4. P. M.

I have seen him carrying silk to Bangalore so that he can get money immediately to pay for labour. I have also seen that labour had to wait for weeks to get their wages. Therefore, under great stress and strain the filatures at T.-Narsipur were kept going. Therefore, it is time that the Government of Mysore takes all the steps necessary. With all the resources at their disposal, and with the necessary aid that the Government can get from the Central Silk Boards, it is possible to modernise these factories. They can get some experts from Japan for 3 or 5 years so that Mysore can hold its own in the field of sericulture for many years to come.

With these few words, I want the Government of Mysore to take all necessary steps as early as possible so that the money we have sunk should not go into waste.

Mr. SPEAKER.—There is another important Demand. Shall we close this at this stage? The Hon'ble Minister in charge will make his reply now.

***Dr. R. NAGAN GOWDA** (Minister for Industries and Excise).—There are just a few words regarding this Badanaval Centre that I wanted to say in addition to what my friend the Hon'ble the Minister for Finance has said.

One of the Hon'ble Members was stating that spinners were not paid according to the counts. I have made enquiries and I am told that they are paid according to counts. If finer counts are made, they are paid higher wages.

At no time there was any doubt in our minds as to the importance of the Spinning Centre at Badanaval. Now public enthusiasm there has been so great that arrangements were made to carry it on and the amount that we had budgeted for the whole year has been spent before the end of August or the beginning of September. Since then, we have made funds available and as was stated by the Hon'ble the Minister for Finance, we will keep it going by providing all the funds needed by the Centre, Sir.

ಶ್ರೀ ಬಿ. ಎಂ. ಶೀನಪ್ಪ (ಕಬ್ಬನ್‌ಪೇಟೆ).—A point of information, Sir, Court of Enquiry for Sericulture Industry ಎಂದು 1952 ನೆ ಇಸವಿಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದರು. ಅವರ ವರದಿಯು ಏನಾಯಿತು, ಅದನ್ನು ಈ ಸಭೆಯು ಗಮನಕ್ಕೆ ಯಾಕೆ ತರಲಲ್ಲ ಎಂಬ ವಿವರಣೆಯನ್ನು ಕೊಡಬೇಕು.

***Sri H. SIDDAVEERAPPA** (Minister for Home and Finance.) Sir, the Hon'ble Member Sri B. M. Seenappa asked, what happened to his report. I know he was a member of that Committee. It has given a very useful report and I have read that report and we bear in mind the suggestions made therein when the question relating to the silk industry comes up for examination.

I am indeed thankful to the Hon'ble Members who welcomed the idea of the Government taking over the Mysore Filatures. As my Hon'ble friend Sri Mariappa stated and as also expressed by Sri Mascarenhas, the history of the Mysore Silk Filatures is a sad reading I do not want to go into the reasons for it. Suffice it to say that the expectations with which this company was floated were not fulfilled. Whatever may be the reason, here I am not standing to blame anybody. The only

purpose with which I referred to this aspect was just to say how urgent and important it is for the Government to take over these concerns and start on Gtovernmental lines. While so doing, is was not with a view of sympathy for this company share-holders we had to do but as a compelling duty towards the large number of families depending upon sericulture in various sectors, starting with .mulberry cultivators, reelers, cocoon rearers and thousands of charka reelers and various people. Unless we modernise this industry, there is no hope for us. There is no hope unless the Government are prepared to develop it in all its sectors. Sri Mariappa was perfectly correct when he stated that the Government should not hesitate in taking over this factory. It would have taken years for this factory to repay the entire loan outstanding from the year 1947.

Therefore one purpose is served namely, we can write off the debts due to Government from a very long time, as both interest and principal have been accruing. Apart from that, what was worrying me all these years was that, inspite of my very best efforts, it was not found possible to make this concern a profitable concern, and it was not possible for the Government to take the concern as a going concern under some agreement. For the share amount which they have invested to the tune of 9 lakhs, we find 10 lakhs of Government capital also locked up by way of share amount. We have agreed to leave one factory namely, the one at Sidlaghatta, to their control. Otherwise it would have amounted to a very big figure. Any way, by way of some compensation for the share amount, they have also gladly agreed. We have left it at that.

Sri L. SIDDAPPA.—So, the other factories become the . property of Government?

Sri H. SIDDAVEERAPPA.—We have got factories like this with a capacity of 936 basins—T-Narasipur, 200, Mysore 200 and Kuderu 48, Chamarajanagar 68, Santhemarahalli 100, Mamballi 200, Sidlaghatta 120. Out of 936 we leave a factory with a basin capacity of 120 at Sidlaghatta and take the rest.

A MEMBER.—What about the liabilities?

Sri H. SIDDAVEERAPPA.—Liabilities are more than the assets.

Therefore, Sir, as I was just mentioning, our responsibility does not cease as soon as we take over the factory. I might say that responsibility has increased. The purpose is this today, as the machinery stands, it is out-dated and out-moded. It serves little purpose. Other countries have advanced tremendously in the technical know-how and also in modernised machinery. We have to spend yet more money if we want to improve it. I am glad to say that I have already secured an advance promise from the Central Silk Board that they are prepared to spend any amount that is found necessary for renovating and modernising and equipping these factories with up-to-date machinery. Some of it may have to be scrapped. We are got the talent here. Our reeling machinery must be modernised. We are trying to fabricate and we have successfully fabricated much to the astonishment of the Japanese experts who come here. I just now said that the Central Government will place the necessary funds at our disposal. But the industry cannot depend upon doles. We must always take money by way of loans. I am quite positive that we have sufficient funds. What was wanted was that we must take these things. Apart from these factories, we have another important sericultural area and factory coming under the new State, that is Kollegal. Putting all these together, Mysore will have the virtual monopoly of about 85 to 90 per cent of Indian sericulture located only in Mysore. That will be one of the monopolies. Therefore, I feel that apart from modernising machinery, we must also improve our charkas. We must have domestic basins. We have got schemes for all of them. The Central Silk Board has been at it. We have to start from mulberry—how to improve the quality of mulberry, how to maintain foreign race and Mysore race.

(SRI H. SIDDAVEERAPPA.)

Quality also should be improved. All these things are being worked out though the results may not be spectacular. Now the Channapatna Research Station is also coming. After the States Reorganisation takes place, all the integrated parts will have to be co-ordinated so that the sericultural industry in the State is placed on a firm and sure footing.

My Hon'ble friend Sir Mariappa also incidentally referred to the Channapatna Spun Silk Mills. I feel there is much force in what he says. If you take the waste silk that is produced in this country, we find that today this factory consumes about lbs. 38,000, if I am correct. But we produce 1.50 lakhs lbs. of waste silk in our State. After the advent of Kollegal, it may be a little more. Unfortunately, this factory also has not been working, as the balance sheet discloses in a happy manner. The results of the working of this factory also reflects prosperity to the people. We cannot afford to keep it in isolation and be satisfied when we have taken the Mysore Filatures also. If they cannot work and if at any time, the Government feel that leaving this factory as it is may hamper their schemes to develop this industry, perhaps Government may also consider in the same way in which they have now thought of Mysore Filatures. If the Directors of the Company or the share-holders feel that they can well entrust this to the Government as has been done in the case of Mysore Filatures, nobody will be happier than I. I do not think Government will come in the way.

A MEMBER.—A private merchant was making some negotiations to purchase it.

Sri H. SIDDAVEERAPPA.—There were some private negotiations which I feel every one should not welcome, for the very simple reason that no factory can depend upon the sympathies or doles that any private individual may think of giving to the factory. I should not have bothered about this but for the fact that this is also irretrievably linked up with the prosperity of our agriculturists because it is an agricultral industry. Therefore I feel that private negotiations will work adversely to the interests of our agriculturists and is not less than 10 lakhs are depending upon this industry and no Government can view such private negotiations with equanimity. Therefore, I feel that we must examine it on its own merits. I personally feel this scheme is not the complete picture, not full. The question of bringing the Channapatna Spun Silk Mill also under this requires further examination. At the moment we are interested in improving the working conditions of the Mysore Filatures. I would like to tell my friend Sri Srinivasa Iyengar not to think of the rights of the labourers as soon as Government takes it over. These labourers must put their heart and soul into the concern and make the concern profitable. On behalf of the Government I assure the labourers that they must show good results, better results and then think of their own prosperity or otherwise. I think I have made the position quite clear. I hope Hon'ble Members will agree in granting me this amount.

Mr. SPEAKER.—The question is:

"That a further sum not exceeding Rs. 400 be granted to the Government, to defray the charges which will come in course of payment during the period ending 31st day of October 1956, in respect of 'Industries and Supplies'."

The motion was adopted.

DEMAND NO. 30—FAMINE RELIEF.

94 FAMINE.

Mr. SPEAKER.—Motion moved:

"That a further sum not exceeding Rs. 8,50,000 be granted to the Government to defray the charges which will come in course of payment during the period ending 31st day of October 1956, in respect of 'Famine'."

I would like to bring to the notice of the House that we have to close at

5'0 clock. Members expect a satisfactory reply from Government I suppose and I think there is no necessity to have a long discussion on this subject because Government are already aware of the situation. Only one or two members can speak.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಇಷ್ಟುವೇಳೆಗೆ ಎಷ್ಟು ಲಕ್ಷ ಪಲ್ಲ ದವಸ ಮೈಸೂರು ಜನತೆಯು ಕೈಲಿ ಹತ್ತು ಲಕ್ಷ ಪ್ರಜೆಗಳ ಕೈಲಿ ಇರುತ್ತಿತ್ತು ಎಂಬುದು ಈ ಸಭೆಗೆ ಗೊತ್ತಾಗಿಲ್ಲ. ಎಷ್ಟೋ ಪ್ರಮಾಣದ ಜೋಳ ಬರುತ್ತಿತ್ತು. ಈ ದಿವಸ ಅವರು ಭಿಕಾರಿಗಳಾಗಿದ್ದಾರೆ. ಬೆಳೆದವರಿಂದ ಕೂಲಿಗಳ ಮನೆಗಳಿಗೆ ಧಾನ್ಯ ಕೂಲಿ ರೂಪವಾಗಿ ಹೋಗುತ್ತಿತ್ತು. ಈ ದಿವಸ ಅವರಿಗೆ ತಿನ್ನುವುದಕ್ಕೆ ಅನ್ನವಿಲ್ಲ, ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ಮಳೆ ಆ ಪ್ರಾಂತದಲ್ಲಿ ಬರಲಿಲ್ಲ, ದನಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ಮೇವಿಲ್ಲ. ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ರೂಪಾಯಿಗೆ ನಾಲ್ಕೈದು ಸೇರಿನಂತೆ ಅಲ್ಲಿ ಅಕ್ಕಿ ಮಾರಾಟ ಮಾಡಿ ಎಂದು ಕೇಳಿದಾಗ ಕುಬೇರನ ಕಣಜ ಸಿಕ್ಕಿದಾಗ ಹಾಗೆ ಮಾಡಬಹುದೆಂದು ಹೇಳಿದರು. ಆದರೆ ಜವಾಬ್ದಾರಿ ಹೊತ್ತಿರುವ ಸರ್ಕಾರ ಯಾವ ರೀತಿ ಪರಿಸ್ಥಿತಿಯನ್ನು ಎದುರಿಸಲು ಪ್ಲಾನ್ ಮಾಡಿದೆಯೆಂಬುದನ್ನು ಹೇಳಲಿಲ್ಲ. ಇದುವರೆಗೆ ಕೆಲಸಮಾಡಿ 6 ಲಕ್ಷ ರೂಪಾಯಿಗಳಲ್ಲಿ 5 ಲಕ್ಷ ರೂಪಾಯಿಗಳನ್ನು ಮುಗಿಸಿಬಿಟ್ಟಾರೆ. ಈ ದಿವಸ ಜನಗಳಿಗೆ ಕೆಲಸ ಮಾಡುವುದಕ್ಕೆ ಶಕ್ತಿಯಿಲ್ಲ, ಕೊಳ್ಳುವುದಕ್ಕೆ ಹಣವಿಲ್ಲ, ಏನು ಮಾಡುತ್ತೀರಿ ಎಂದು ಕೇಳಿದರೆ ಸರಿಯಾದ ಉತ್ತರ ದೊರೆಯಲಿಲ್ಲ. ಈಗ ಕೊಟ್ಟಿರುವ ಹಣದ ಜೊತೆಗೆ ಕೆರೆ ಕೆಲಸ, ರಸ್ತೆ ಕೆಲಸ, ಕಟ್ಟೆ ಕೆಲಸ, ರಿಲೀಫ್ ಕಾಂಗಾರಿ ಮುಂತಾದುವಕ್ಕೆ ಮೈಸೂರು ಜಿಲ್ಲೆಗೆ ಇನ್ನೂ 10 ಲಕ್ಷ ರೂಪಾಯಿಗಳನ್ನು ಕೊಡಬೇಕು, ತಾಲ್ಲೂಕು ಒಂದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕು. ಈಗಿನ ಪರಿಸ್ಥಿತಿ ಇನ್ನೂ ಕೆಲವು ದಿವಸ ಮುಂದುವರಿದರೆ ಜನರ ಕೈಲಿ ರಾಗಿ, ಜೋಳ ಇರುವುದಿಲ್ಲ; ಅವರು ಸಾಯುತ್ತಾರೆ. ಸರ್ಕಾರದವರು ಉದಾರ ಮನಸ್ಸಿನಿಂದ ಈ ಜಿಲ್ಲೆಗೆ 10 ಲಕ್ಷ ರೂಪಾಯಿಗಳನ್ನು ಕೊಡದಿದ್ದರೆ ಜನ ಸಾಯುವುದೂ ಅಲ್ಲದೆ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುದಿಲ್ಲ. ಇದನ್ನು ಗಮನಿಸಿ ಂಡಿತ ಸಾಕಾದಷ್ಟು ಹಣ ಒದಗಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಪ್ರಕೃತಿಯ ಒಂದು ಕೋಪಕ್ಕೊಳಗಾಗಿ ಇಡೀ ಇಂಡಿಯಾ ದೇಶದಲ್ಲೇ ಒಂದೊಂದು ಕಡೆ ಒಂದೊಂದು ರೀತಿಯ ನಷ್ಟ ಸಂಭವಿಸಿದೆ. ಒಂದು ಕಡೆ ಹೆಚ್ಚು ಪ್ರವಾಹ ಬಂದು ನಷ್ಟವಾಗಿರುವುದನ್ನು ನೋಡುತ್ತಿದ್ದೇವೆ. ಇಲ್ಲಿ ನಮ್ಮ ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯಿಲ್ಲದೆ ಅಭಾವ ಪರಿಸ್ಥಿತಿಯುಂಟಾಗಿರುವುದನ್ನು ಒಂದು ಕಡೆ ನೋಡುತ್ತಿದ್ದೇವೆ. ಈ ಎರಡು ವಿಧವಾದ ತೊಂದರೆಗೊಳಗಾಗಿರುವ ಕಡೆಗಳಿಗೆ ಸರ್ಕಾರ ಸಾಕಷ್ಟು ಪರಿಹಾರ ನೀಡುವ ಸ್ಥಿತಿಯಲ್ಲಿಲ್ಲದಿದ್ದರೂ ಕೂಡ ಕಷ್ಟಕ್ಕೊಳಗಾಗಿರುವ ಜನಗಳಿಗೆ ಸಾಧ್ಯವಾದಮಟ್ಟಿಗೆ ಕೈಲಾದಷ್ಟು ಸಹಾಯ ಮಾಡಿದೆ, ಕೆಲಸಕಾರ್ಯ ಒದಗಿಸುತ್ತಿದೆ, ದಿನಸಿ, ದವಸ ಧಾನ್ಯ ಇರುವ ಕಡೆಯಿಂದ ತಂದು ಹಂಚುತ್ತಿದೆ. ಇದಕ್ಕಾಗಿ ನಾನು ಮೈಸೂರು ಜಿಲ್ಲೆ ಅಭಾವ ಪ್ರದೇಶದಲ್ಲಿರುವ ಜನರ ಪರವಾಗಿ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಬೇಕಾಗಿದೆ. ಇದರ ಜೊತೆಗೆ ಸರ್ಕಾರದವರೇ ಏನೊಂದು ಆಶ್ವಾಸನೆ ಜನರಿಗೆ ಕೊಟ್ಟಿದ್ದರೋ ಅದರಂತೆ ನಡೆದುಕೊಳ್ಳುತ್ತಿದ್ದರೂ ಸಹ ನಮ್ಮ ದುರದೃಷ್ಟದಿಂದ ಪರಿಸ್ಥಿತಿ ಇನ್ನೂ ಉತ್ತಮವಾಗಿಲ್ಲ. ಇದುವರೆಗೆ ಸುಮಾರು 27 ಇಂಚು ಮಳೆಯಾಗುತ್ತಿದ್ದ ನಮ್ಮ ಜಿಲ್ಲೆಯಲ್ಲಿ ಸಾಕಷ್ಟಾಗದೆ ರಾಗಿ ಬಿತ್ತನೆ ಒಣಗಿ ಹೋಗಿ ದನಗಳಿಗೆ ಕೂಡ ಮೇವಿಲ್ಲದಂತಾಗಿದೆ. ನೆರೆ ಜಿಲ್ಲೆಯಾದ ಮಂಡ್ಯದಿಂದ ಹುಲ್ಲನ್ನು ಖರೀದಿಗೆ ತೆಗೆದುಕೊಂಡು ಅಭಾವ ಪ್ರದೇಶಗಳಿಗೆ ಉದಾರವಾಗಿ ಸರಬರಾಯಿ ಮಾಡಿದ್ದಾರೆ. ಇದಕ್ಕಾಗಿ ಜನರ ಪರವಾಗಿ ವಂದಿಸುತ್ತೇನೆ. ಪರಿಸ್ಥಿತಿ ಇನ್ನೂ ಬಹಳವಾಗಿ ಕೆಡುತ್ತಿರುವುದರಿಂದ ಉತ್ತಮಗೊಳ್ಳುವವರೆಗೆ ಹೆಚ್ಚು ಪರಿಹಾರ ಕಾರ್ಯಗಳನ್ನು ಕೈಕೊಂಡು ಇನ್ನೂ ಹೆಚ್ಚಾಗಿ ಸಹಾಯ ಮಾಡಬೇಕು. ಲಕ್ಷಾಂತರ ರೂಪಾಯಿಗಳ ಸಂಪಾದನೆ ಮಾಡುವ ರೇಷ್ಮೆ ಕೈಗಾರಿಕೆ ನಡೆಯದೆ ಬಹಳ ತೊಂದರೆಯಾಗಿದೆ. ಜೋಳದ ಫಸಲೂ ಸಹ ಕೆಟ್ಟಿರುವುದರಿಂದ ಶ್ರೀ ಮಾದಯ್ಯನವರು ಹೇಳಿದಂತೆ ಖಾದಿ ಕೇಂದ್ರ, ರಿಲೀಫ್ ಸೆಂಟರ್ ಈಗ ತೆರೆದಿರುವುದಲ್ಲದೆ ಇನ್ನೂ ಹೆಚ್ಚಾಗಿ ತೆರೆದು ಜನರಿಗೆ ಕಸುಬು ಒದಗುವ ಹಾಗೆ ಮಾಡಬೇಕು ಮತ್ತು ರೆವಿನ್ಯೂ ಇಲಾಖೆಯಲ್ಲಿ ರಿಲೀಫ್ ಕಾಂಗಾರಿ ಒಂದು ಇಲಾಖೆಗೆ ವಹಿಸಿ ಕೆಲಸ ಮಾಡಿಸುತ್ತಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಪ್ರತ್ಯೇಕವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಲು ಅನೇಕ ಯೋಜನೆಗಳಿವೆ. ಚಿಕ್ಕಹೊಳೆ ಪ್ರಾಜೆಕ್ಟ್ ಮಂಜೂರುಮಾಡಿ ಕೆಲಸ ಬೇಗ ಮುಗಿಸಬೇಕು, ಕೆಲವು ಕೆರೆಗಳ ಸಂಬಂಧವಾಗಿ ಮುಚ್ಚಳಿಕೆ ಬರೆದುಕೊಟ್ಟು ರೈತರು ಒಪ್ಪಿಗೆ ನೀಡಿದ್ದಾರೆ. ಆದರೆ ಸರ್ಕಾರ ಮುಂದಿನ ಕೆಲಸ ಕೈಗೊಂಡಿಲ್ಲ. ದೊಡ್ಡ ದೊಡ್ಡ ಕೆರೆ ಕಾಂಗಾರಿ ತೆಗೆದುಕೊಂಡರೆ ಉಪಯೋಗಿಸುವ ಹೆಚ್ಚಿಗೆ ಹಣ ಕೂಡ ರೈತರಿಗೆ ಉಪಯೋಗವಾಗುವುದಲ್ಲದೆ ಕೂಲಿಗಾರರಿಗೆ ಕೂಲಿ ಸಹ ಸಿಕ್ಕುತ್ತದೆ. ಈ ದೃಷ್ಟಿಯಿಂದ ಬರೀ ರೆವಿನ್ಯೂ ಇಲಾಖೆಯಿಂದ ರಿಲೀಫ್ ಕೆಲಸ ಮಾಡುವುದಕ್ಕೆ ಬದಲಾಗಿ ಎಲ್ಲಾ ಇಲಾಖೆಗಳೂ ಈ ವರ್ಷ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣದ ಜೊತೆಗೆ ಹೆಚ್ಚಿನ ಹಣ ಕೊಟ್ಟು ಪರಿಸ್ಥಿತಿ ಉತ್ತಮವಾಗುವವರೆಗೆ ಕೆಲಸಕಾರ್ಯ ಕೈಗೊಳ್ಳುವಂತೆ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕ್ಷಾಮ ಬಹಳವಾಗಿದೆ; 6 ತಾಲ್ಲೂಕುಗಳಲ್ಲಿ ಬಹಳ ಕಷ್ಟವಿದೆ. ಇದಕ್ಕಾಗಿ ಮೊದಲು ಸರ್ಕಾರದವರು ಒಂದು ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು. ಅದರಿಂದೇನೂ ಅಷ್ಟು ಸಹಾಯವಾಗಲಿಲ್ಲ. ಆಮೇಲೆ ಸರ್ಕಾರದಲ್ಲಿ ನಾನೂ ಮತ್ತು ಇತರರು ಕೆಲವರೂ ಮನವಿ ಮಾಡಿದಮೇಲೆ ರಾತ್ರಿ 11 ಗಂಟೆಯ ಸಮಯದಲ್ಲಿ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರಿಗೆ ಪರಿಸ್ಥಿತಿ ಹೇಗೆ ಇದೆಯೆಂಬುದನ್ನು ತಿಳಿಸಿದ ಮೇಲೆ 10 ಲಕ್ಷ ರೂಪಾಯಿಗಳನ್ನು ಕೊಟ್ಟರು. ಈಗ ಆ ಹಣ ಮುಗಿಯುತ್ತಾ ಬಂದಿದೆ. 10 ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಪರಿಸ್ಥಿತಿ ಹೇಗಿತ್ತೋ ಅದು ಈಗ ಅದರ ಮೂರರಷ್ಟು ಹದಗೆಟ್ಟಿದೆ; ಈಗ ಎಷ್ಟು ಕೊಟ್ಟರೂ ಸಾಲದು. ಶ್ರೀ ಮಾದಯ್ಯನವರು ಒಂದು ಲಕ್ಷ ರೂಪಾಯಿ ಕೊಟ್ಟರೆ ಸಾಕೆಂದು ಹೇಳಿದರು. ಅದು ಸಾಲದು, ತಾಲ್ಲೂಕಿಗೆ 3 ಲಕ್ಷ ರೂಪಾಯಿಗಳಂತಾದರೂ ಕೊಡಬೇಕು. ಏಕೆಂದರೆ ಯಾರಿಗೂ ಕೆಲಸ ಮಾಡಲು ಇನ್ಯಾವ ಆಧಾರವೂ ಇಲ್ಲ. ಜೋಳ,

(ಶ್ರೀ ಶಿವನಂಜೇಗೌಡ.)

ಕಾರುರಾಗಿ, ಹೈನುಘಸಲು ಎಲ್ಲಾ ಹೋಯಿತು. ಕೆಲವರು ಬಿತ್ತಿದರು, ಕೆಲವರು ಬಿತ್ತನೆಯನ್ನೇ ಮಾಡಲಿಲ್ಲ. ಎಲ್ಲಾ ಗೊಬ್ಬರದ ಗುಂಡಿಯು ಹಾಗಾಗಿದೆ. ಬೇಕಾದರೆ ಬಂದು ಅಜಮಾಯಿಷಿ ಮಾಡಬಹುದು. ಸುಮಾರು 2 ತಿಂಗಳೊಳಗೆ ಕೊಟ್ಟ ಹಣವೆಲ್ಲಾ ಮುಗಿದುಹೋಗಿದೆ. ವರ್ಷಗಟ್ಟಲೆ ಕೆಲಸ ನಡೆಯಬೇಕಾಗಿದೆ. ಇನ್ನೂ ಹೇಳುವುದಾದರೆ ಮನೆ ಮನೆಗೂ ಫ್ಯಾಮಿಲಿ ರಿಲೀಫ್ ಎಂದು ಹೊತ್ತುಕೊಂಡು ಹೋಗಿ ಕೊಡಬೇಕಾಗಿದೆ. ದಿಟ್ಟತನದಿಂದ ಸರ್ಕಾರದವರು ಆದಷ್ಟು ಜಾಗ್ರತೆ ಈಗ ಜನರಿಗೆ ಒದಗಿರುವ ಕಷ್ಟವನ್ನು ಪರಿಹಾರ ಮಾಡುವುದಾಗಿ ವಾಗ್ದಾನ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

4-30 P.M.

*ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸರ್ಕಾರಕ್ಕೂ ಮತ್ತು ಮಾನ್ಯ ಸಭಿಕರಿಗೂ ಈ ವಿಷಯದಲ್ಲಿ ಚೆನ್ನಾಗಿ ಮನವರಿಕೆಯಾಗಿದೆ. ಆದಾಗ್ಯೂ ನಾನು ಈ ವಿಷಯದಲ್ಲಿ ಎರಡು ಮಾತನ್ನು ಹೇಳಬೇಕಾಗಿದೆ. ಫ್ಯಾಮಿಲಿ ರಿಲೀಫ್‌ಗಾಗಿ $8\frac{1}{2}$ ಲಕ್ಷ ರೂಪಾಯಿಗಳ ಡಿಮ್ಯಾಂಡ್ ಮನವಿಯನ್ನಿಟ್ಟಿದ್ದಾರೆ. ಆದರೆ ಸರ್ಕಾರಿ ಆಜ್ಞೆ ಪ್ರಕಾರ ಸ್ಟೇಟ್ ಕಂಟಿಂಜೆನ್ಸಿ ಫಂಡಿನಿಂದ 10ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಪ್ರೆಸ್ ಕಮ್ಯೂನಿಕೇಷನ್ ಮುಖೇನ ತಿಳಿಸಿದ್ದೂ ಈಗ $8\frac{1}{2}$ ಲಕ್ಷರೂಪಾಯಿಗಳಿಗೆ ಅದು ಕುಂಠಿತವಾಗಿದೆ. ಇದರ ದೆಸೆಯಿಂದ $1\frac{1}{2}$ ಲಕ್ಷ ರೂಪಾಯಿಗಳು ಕಡಮೆಯಾಗಿದೆ. ಅದು ಯಾವ ಉದ್ಯಮಗಳಿಗೆ ಸೇರಿದೆಯೋ ಗೊತ್ತಿಲ್ಲ. ಮೊನ್ನೆತಾನೆ ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿ ಏನು ಕೆಲಸ ಮಾಡಿದೆಯೆಂದು ತನಿಖೆ ಮಾಡಿದಾಗ ಸುಮಾರು 9 ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಕೆಲಸವಾಗಿದೆ, ಕೊಟ್ಟಿರುವ ಹಣ ಪೂರ್ತಿಯಾಗಿ ಖರ್ಚಾಗುವ ಸಂದರ್ಭವಿದೆ ಎಂದು ಗೊತ್ತಾಯಿತು. ಆದರೆ ಪರಿಸ್ಥಿತಿ ಹೇಗಿದೆಯೆಂಬುದನ್ನು ಗಮನಿಸಬೇಕು. ಅಭಾವ ಪರಿಸ್ಥಿತಿ ಮೈಸೂರು ಜಿಲ್ಲೆಯಲ್ಲಿನ 5-6 ತಾಲ್ಲೂಕುಗಳಲ್ಲಿ ಕಡಮೆಯಾಗಿದೆಯೆ ಅಥವಾ ಇನ್ನೂ ಇದೆಯೆ ಎಂಬುದನ್ನು ಸರ್ಕಾರ ಕೂಡ ಈ ದಿವಸ ಪರಿಶೀಲಿಸಬೇಕು. ಆ ಜಿಲ್ಲೆಯ ಪರಿಸ್ಥಿತಿ ಅಷ್ಟು ಹದಗೆಟ್ಟಿರುವ ವೇಳೆಯಲ್ಲಿ ಸರ್ಕಾರದವರು ನೀಡಿದ ಸಹಾಯಕ್ಕಾಗಿ ನಾವೆಲ್ಲರೂ ಅವರಿಗೆ ಆಭಾರಿಯಾಗಿದ್ದೇವೆ. ಆದರೆ ಇಲ್ಲಿಯತನಕ ಆ ಭೀಕರ ಪರಿಸ್ಥಿತಿಗಳು ಸುಧಾರಿಸುವಂಥ ಚಿನ್ಹೆಗಳೇ ಕಂಡುಬರುತ್ತಿಲ್ಲ. ಇತ್ತೀಚೆಗೆ ಜನರನ್ನು ವಿಚಾರಮಾಡಿದ್ದರಲ್ಲಿ ಆ ಪ್ರಾಂತ್ಯದಲ್ಲಿ ಮಳೆಯೇ ಬಿದ್ದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಮೈಸೂರಿನ ಕೆಲವು ಭಾಗಗಳಲ್ಲೇನೋ ಪನ್ನೀರುದಾನಿಯಲ್ಲಿ ಪನ್ನೀರೆರಚುವಂತೆ ಮಳೆ ಬಿದ್ದಿದೆಯೆಂದು ಹೇಳುತ್ತಿದ್ದಾರೆ. ಹಿಂದಿನ ಸಾಲಿನಲ್ಲಿ ಆ ಪ್ರಾಂತ್ಯದಲ್ಲಿ ಜೋಳದ ಬೆಳೆ ಸಂಪೂರ್ಣವಾಗಿ ಆಗಲೇ ಇಲ್ಲ. ಅದರ ಜೊತೆಗೆ ಈ ವರ್ಷ ಸಹ ರಾಗಿ ಮತ್ತು ಜೋಳ ಈ ಎರಡು ಬೆಳೆಗಳೂ ಸಂಪೂರ್ಣವಾಗಿ ಹೋಗಿಬಿಟ್ಟಿವೆ. ಬೆಳೆಯೆನ್ನುವ ಮಾತೇ ಇಲ್ಲ. ಹೀಗಿದೆ ಎನ್ನುವುದನ್ನು ನಾವು ಸರ್ಕಾರದವರ ಗಮನಕ್ಕೆ ತಂದರೆ ಅವರು ಬಾಯಿನಲ್ಲೇನೋ ಬಹಳ ಹೇಳಿಬಿಡುತ್ತಾರೆ. ಮಾನ್ಯ ಮಂತ್ರಿಗಳು ಈ ಹಿಂದೆ ಆ ಪ್ರದೇಶಗಳ ಪರಿಸ್ಥಿತಿ ಸುಧಾರಿಸುವವರೆಗೂ ನಾವು ಅಲ್ಲಿ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ಕೈಕೊಳ್ಳುತ್ತೇವೆಂಬುದಾಗಿ ತಿಳಿಸಿದ್ದರು. ಆ ವೇಳೆಯಲ್ಲಿ ಅವರು ನಮ್ಮ ಪ್ರಾಂತ್ಯದ ಬಗ್ಗೆ ಖರ್ಚು ಮಾಡತಕ್ಕ ಮೊಬಲಗನ್ನು 10 ಲಕ್ಷ ರೂಪಾಯಿ ಗಳೆಂದು ನಿಗದಿಮಾಡಬಾರದೆಂದೂ ಮಂತ್ರಿಗಳಿಗೆ ಮನಸ್ಸಿದ್ದು ಅಲ್ಲಿ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದರೆ ಇದರಿಂದ ತೊಂದರೆ ಬರಬಹುದೆಂದೂ, ಅದಕ್ಕಾಗಿ ಹೀಗೆ ಖರ್ಚು ಮಾಡತಕ್ಕ ಮೊಬಲಗನ್ನು ನಿರ್ಧಾರ ಮಾಡತಕ್ಕದ್ದು ಸೂಕ್ತವಲ್ಲವೆಂದೂ ಹೇಳಿದ್ದರು; ಅಂಥ ಪರಿಸ್ಥಿತಿಗಳು ಬಂದರೂ ಬರಬಹುದೆಂದು ಹೇಳಿದ್ದರು. ಆದರೆ ಈ ದಿವಸ ಅಲ್ಲಿ ನಿಖರವಾಗಿ ಇಂತಿಂಥ ಕಾಮಗಾರಿಗಳನ್ನೇ ಕೈಗೊಳ್ಳುತ್ತೇವೆಂದು ಯಾವುದನ್ನೂ ತಿಳಿಸಿಲ್ಲ. ಈಗ ತ್ವರಿತವಾಗಿ ಮೈಸೂರು ಜಿಲ್ಲೆಯಲ್ಲಿ, ಮೈಸೂರು, ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಇತ್ಯಾದಿ ಪ್ರದೇಶಗಳಲ್ಲಿ ಹೆಚ್ಚಿನ ರಿಲೀಫ್ ಕಾಂಗಾರಿಗಳನ್ನು ಕೈಕೊಳ್ಳಬೇಕಾಗಿದೆ. ಈಗ ಅಲ್ಲಿ ಅನೇಕ ಹೊಸಹೊಸ ಕೆಲಸಗಳನ್ನು ಕೈ ಗೊಳ್ಳಬೇಕಾಗಿದೆ. ಅವುಗಳನ್ನೆಲ್ಲಾ ಪೂರೈಸಬೇಕಾದರೆ ಸುಮಾರು 10 ಲಕ್ಷ ರೂಪಾಯಿಗಳಿಗೂ ಜಾಸ್ತಿ ಬೇಕಾಗುತ್ತದೆ. ಈ ದೃಷ್ಟಿಯಿಂದ ಜನತಾ ಸರ್ಕಾರ ಜನರ ಬೇಡಿಕೆಗಳಿಗೆ ಸರಿಯಾಗಿ ಮನ್ನಣೆಕೊಟ್ಟು ಸೋಷಿಯಲ್ ಪ್ರಾಬ್ಲಂ ಯಶಸ್ವಿಯಾಗಿ ನಡೆಸಬೇಕು. ಜನರ ಅಭಾವ ಪರಿಸ್ಥಿತಿಯನ್ನು ನೀಗಲು ಹಣಕಾಸಿನ ಮಂತ್ರಿಗಳು ತಮ್ಮ ಕೈಯನ್ನು ಬಿಗಿಹಿಡಿಯಬಾರದು. ಈ ಹಿಂದೆ ಯಾವ ರೀತಿಯಾಗಿ ಕೋಲಾರ-ತುಮಕೂರು-ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಒದಗಿದ್ದುದನ್ನು ಯಾವ ರೀತಿ ದಿಟ್ಟತನದಿಂದ ಎದರಿಸಿದರೋ ಅದೇ ರೀತಿಯಾಗಿ ಇಲ್ಲಿಯೂ ಈ ಪರಿಸ್ಥಿತಿಯನ್ನು ಎದುರಿಸಲು ಸಹಾಯ ನೀಡತಕ್ಕ ಬಗ್ಗೆ ಆ ಪರಿಸ್ಥಿತಿಯ ಭೀಕರಸ್ವರೂಪ ಹತೋಟಿಗೆ ಬರುವವರೆಗಾದರೂ ಮಾನ್ಯ ಹಣಕಾಸಿನ ಸಚಿವರು ತಮ್ಮ ಕೈಯನ್ನು ಬಿಗಿಹಿಡಿಯಬಾರದೆಂದು ಪ್ರಾರ್ಥಿಕೊಳ್ಳುತ್ತೇನೆ. ಆ ರೀತಿ ಸರ್ಕಾರದವರು ನಿರ್ವಂಚನೆಯ ಭಾವನೆಯಿಂದ ಕೆಲಸ ಮಾಡುತ್ತಾರೆಂದು ನಾನು ನಂಬಿದ್ದೇನೆ. ಹೀಗೆ ಯಾವಯಾವ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿಯುಂಟಾಗಿದೆಯೋ ಅಲ್ಲಿ ಈ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ಪ್ರಾರಂಭಿಸಲು ಆ ಕಮಿಟಿಗಳಿಗೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಮೈಸೂರು ಜಿಲ್ಲೆಯಲ್ಲಿ ಉಂಟಾಗಿರತಕ್ಕ ಪರಿಸ್ಥಿತಿ ಏನು ಮತ್ತು ಸರ್ಕಾರದವರು ಆ ಬಗ್ಗೆ ಒದಗಿಸಿರತಕ್ಕ ಸಹಾಯವೇನು ಎನ್ನುವುದರ ಬಗ್ಗೆ ಈಗಾಗಲೇ ಹಲವು ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಆದ್ದರಿಂದ ಈ ವಿಷಯವಾಗಿ ನಾನು ಅಷ್ಟೇನೂ ಹೆಚ್ಚಾಗಿ ಮಾತನಾಡಬೇಕಾಗಿಲ್ಲ. ಮೈಸೂರು ಜಿಲ್ಲೆಯ ಜನರ ಕಷ್ಟನಿವಾರಣೆಗಾಗಿ ಸರ್ಕಾರದವರು ನೀಡಿರತಕ್ಕ ಸಹಾಯಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಸರ್ಕಾರದವರು ಆ ಪ್ರದೇಶಕ್ಕೆ ನೀಡುತ್ತೇವೆಂದು ಹೇಳುತ್ತಿರುವ ಸಹಾಯ ಕೇವಲ ಹಂಗಾಮಿಯ ಸ್ವರೂಪದ್ದು; ತಾತ್ಕಾಲಿಕವಾದಂಥ ಪರಿಹಾರವಾಗಿದೆ. ಆದರೆ ನಾನು ಒಂದು ಖಾಯಂ ಪರಿಹಾರ ನಿಧಿಯನ್ನೇ ಒದಗಿಸಬೇಕೆಂದು ಒತ್ತಾಯ ಮಾಡ ಲಿಚ್ಛಿಸುತ್ತೇನೆ. ಆ ಜಿಲ್ಲೆಯಲ್ಲಿ ಇದುವರೆಗಾಗಲೇ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳ ಬಾಬಿನಲ್ಲಿ 8 ಲಕ್ಷದ 50 ಸಾವಿರ ರೂಪಾಯಿಗಳು ಖರ್ಚಾಗಿವೆ. ಇನ್ನು ಮುಂದೆಅಲ್ಲಿ ಕೂಲಿಗೆ ಬರತಕ್ಕ ಜನರಿಗೆ ಕೂಲಿಕೊಡಲು ದುಡ್ಡಿರುವುದಿಲ್ಲ. ಎಲ್ಲಿಯವರೆಗೆ ಇಂಥ ಒಂದು ಭೀಕರ ಪರಿಸ್ಥಿತಿ ಅಲ್ಲಿ ಮುಂದುವರಿಯುತ್ತದೋ ಅಲ್ಲಿಯವರೆಗೂ ಸರ್ಕಾರ ಸಾಕಷ್ಟು ಧನ ಸಹಾಯವನ್ನುನೀಡಲೇಬೇಕಾಗಿದೆ. ಖಾಯಂ

ಕ್ಷಾಮ ನಿವಾರಣಾ ಏರ್ಪಾಡನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ ಮೈಸೂರು ಜಿಲ್ಲೆಯ ಜನರಿಗೆ ಹೀಗೆ ಭಿಕ್ಷೆ ಬೇಡಬೇಕೆಂಬ ಇರಾದೆ ಯಾವತ್ತಿಗೂ ಇಲ್ಲ. ಎಂಥಾ ಪರಿಸ್ಥಿತಿ ಬಂದಾಗ್ಲೂ ನಾವು ದುಡಿಯುತ್ತಲೇ ಇದ್ದೇವೆ. ತಾವು ಸಾಲವಾಗಿ ಕೊಟ್ಟ ಹಣವನ್ನು ತೀರಿಸಿರುತ್ತೇವೆ ಆದರೆ ತಾವು ಖಾಯಂ ಪರಿಹಾರ ಕ್ರಮವನ್ನು ಕೈಗೊಂಡರೆ ಜನರಿಗೂ ಉಪಕಾರ; ದೇಶದಲ್ಲಿ ಆಹಾರ ಪರಿಸ್ಥಿತಿಯೂ ಉತ್ತಮಗೊಳ್ಳಲು ತುಂಬಾ ಅನುಕೂಲವಾಗುತ್ತದೆ. ಅದಕ್ಕಾಗಿ ತಾವು ಈ ಬಗ್ಗೆ ಒಂದು ಖಾಯಂ ಯೋಜನೆಯನ್ನು ಹಾಕಿಕೊಳ್ಳುವುದು ತೀರಾ ಅಗತ್ಯ. ಅನೇಕ ಕೆರೆಗಳಲ್ಲಿ ಹೂಳು ತುಂಬಿ ಮುಚ್ಚಿ ಹೋಗಿದೆ. ಅಂಥಾ ಕೆರೆಗಳಲ್ಲಿ ಹೂಳು ತೆಗೆಸುವ ಕೆಲಸ ನಡೆಸಬೇಕಾಗಿದೆ. ಕೆರೆಗಳ ಜೀರ್ಣೋದ್ಧಾರ ಕಾರ್ಯ ಬೇರೆ ನಡೆಯುವುದು ಬಹಳವಾಗಿದೆ. ಈ ಬಾಬಿನಲ್ಲಿ ಈಗ್ಗಾಗಲೇ ಅನೇಕ ಕಾಂಗಾರಿಗಳ ಅಂದಾಜುಗಳು ಕ್ರಮವಾಗಿ ತಯಾರಿಸಲ್ಪಟ್ಟು ಸ್ಕ್ರೂಟಿನಿಯಾಗಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಥವ ಚೀಫ್ ಇಂಜಿನಿಯರ್ ಆಫೀಸಿನಲ್ಲಿ ಮಂಜೂರಾತಿ ಬಗ್ಗೆ ನಿಂತಿರುತ್ತವೆ, ಈ ಕೆಲಸಗಳನ್ನೆಲ್ಲಾ ಕಾರ್ಯಗತ ಮಾಡಬೇಕಾದದ್ದು ಅಗತ್ಯ. ಇದರಿಂದ ದೇಶಕ್ಕೆ ಬಹಳ ಉಪಕಾರವಿದೆ. ಆದರೆ ಈಗಾಗಲೇ ಶ್ರೀ ಬಿ. ರಾಚಯ್ಯನವರು ಹೇಳಿದಂಥ ಚಿಕ್ಕ ಹೊಳೆ ಪ್ರಾಜೆಕ್ಟ್ ರಿಜರ್ವಾಯರಿನ ಕೆಲಸ ಪ್ರಾರಂಭವಾಗಬೇಕಾಗಿದ್ದರೆ ಇನ್ನೂ ಒಂದು ವರ್ಷ ಕಾಲ ಹಿಡಿಯುತ್ತದೆ. ಅಲ್ಲಿ ಆ ಇಂಜಿನಿಯರಿಂಗ್ ಷೆಡ್, ರಸ್ತೆ ಇತ್ಯಾದಿ ಕೆಲಸಗಳೆಲ್ಲಾ ಮುಗಿಯಬೇಕಾಗಿದ್ದರೆ ಕಾಲ ವಿಳಂಬ ಆಗೇ ಆಗುತ್ತದೆ. ಆದಕಾರಣ ಅಲ್ಲಿ ಜನರಿಗೆ ಜೀವನಕ್ಕೆ ತೊಂದರೆಯಿರುವುದರಿಂದ ತ್ವರಿತವಾಗಿ ಮಟ್ಟಿ ಕಾಂಗಾರಿ ಛಾನಲ್ ಕೆಲಸ ಇತ್ಯಾದಿ ಬಾಬುಗಳನ್ನು ಕೈಗೊಳ್ಳುವಂತೆ ಸರ್ಕಾರ ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಬೇಕು ಆ ಪ್ರಾಂತ್ಯದಲ್ಲಿ ಕೆಲವು ಕಡೆ ಖುಷ್ಕಿ ಜಮೀನುಗಳಲ್ಲಿ ನೀರಿನ ಸೌಕರ್ಯವಿರತಕ್ಕವರಿಗೆ-ಕಪಿಲೆ ಹಾಕಲು ಸಾಧ್ಯವಾಗುತ್ತಿಲ್ಲ. ಅಂಥ ಪ್ರದೇಶಗಳಿಗೆ ತಾವು ಸ್ಪೆಷಲ್ ಅಂಟೆರ್‌ಷರ್ ಕೊಟ್ಟು ಬೇಗ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕು. ಇಷ್ಟು ಅನುಕೂಲಗಳನ್ನು ಆದಷ್ಟು ಬೇಗ ಆ ಜನರಿಗೆ ನೀಡಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.- ನರಸೀಪುರ).—ಸ್ವಾಮಿ, ಈ ಬಗ್ಗೆ ನಾನು ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಮೈಸೂರು ಜಿಲ್ಲೆಯ ಎಲ್ಲ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ಈಗ ಸರ್ಕಾರದವರು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಹೇಳಿರತಕ್ಕ 8-5 ಲಕ್ಷ ರೂಪಾಯಿಗಳ ಅವಕಾಶ ನಾಳೆ ನವೆಂಬರ್ 1 ನೆಯ ತಾರೀಖಿಗೆ ಆಖೈರಾಗುವುದೆಂದು ನನ್ನ ಮನಸ್ಸಿಗೆ ತೋರುತ್ತಿದೆ. ಅನಂತರ ಹೊಸ ಬಡ್ಜೆಟ್ ಪಾಸಾಗಬೇಕು. ಈಗ ಫ್ಯಾಮಿನ್ ಬಾಬಿನಲ್ಲಿ ಮೈಸೂರು ಜಿಲ್ಲೆಗೆ ಹೇಳಿರತಕ್ಕ 30 ಸಾವಿರ ರೂಪಾಯಿಗಳು ಏತಕ್ಕೂ ಸಾಲುವುದಿಲ್ಲ. ನವೆಂಬರ್ ತಿಂಗಳಿಂದ ಮುಂದಿನ ಜೂನ್ ಆಖೈರುವರೆಗೆ ಯಾವ ಬೆಳೆಗಳೂ ಬರುವಂಥ ನಿರೀಕ್ಷಣೆಯಿಲ್ಲ. ಈಗಲೇ ಜಾನುವಾರುಗಳಿಗೆ ಹುಲ್ಲು-ನೀರಿಗೆ ತುಂಬಾ ತೊಂದರೆಯಾಗಿದೆ. ಇನ್ನು ಜನರ ಪರಿಸ್ಥಿತಿ ಏನಾಗಿದೆಯೆಂಬುದನ್ನು ಹೇಳಬೇಕಾದ್ದೇ ಇಲ್ಲ. ನವೆಂಬರ್ ನಂತರ ತರತಕ್ಕ ಬಡ್ಜೆಟ್ಟಿನಲ್ಲಿ ಹೊಸ ವರ್ಷದ ಬಡ್ಜೆಟ್ ಆಗುವ ತನಕ ಕನಿಷ್ಟ ಪಕ್ಷ 30 ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕು.

ಇನ್ನೊಂದು ವಿಷಯ. ಕ್ಷಾಮಕ್ಕೆ ಒಳಗಾಗಿರತಕ್ಕ ಪ್ರದೇಶದಲ್ಲಿ ಯಾಕೆ ಕ್ಷಾಮ ಬಂದಿದೆ ಎಂದರೆ ಬಹುಭಾಗ ಮಳೆಯ ಆಧಾರದ ಮೇಲೆ ಬೆಳೆಯಾಗತಕ್ಕ ಪ್ರದೇಶವಾಗಿದೆ. ಆದುದರಿಂದ ಕೇವಲ ಮಳೆಯ ಮೇಲೆ ಆಧಾರಮಾಡಿಕೊಳ್ಳದೆ ಎಲ್ಲೆಲ್ಲಿ ಸಾಧ್ಯವೋ ಆ ಜಾಗದಲ್ಲಿ ಖಾಯಂಆಗಿ ಕೆರೆಕಟ್ಟುವುದರ ಮುಖಾಂತರ ಅದನ್ನು ಹೋಗಲಾಡಿಸಿಕೊಳ್ಳಬಹುದು. ಚಾಮರಾಜನಗರ, ಟಿ.-ನರಸೀಪುರ, ಯಳಂದೂರು ಮೊದಲಾದ ತಾಲ್ಲೂಕುಗಳಲ್ಲಿ ಇಂಥ ಕಾರ್ಯಗಳನ್ನು ತೆಗೆದುಕೊಳ್ಳಬೇಕು. ಬಿಳಗುಂದ ಬಳಿ ಒಂದು ಕೆರೆ ಕಟ್ಟಲು ಅಂದಾಜು ತಯಾರಾಗಿದೆ. ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡುವುದೇನೆಂದರೆ, ಮರಾಮತ್ತು ಇಲಾಖೆಯಿಂದ ಈ ಅಂದಾಜು ಯಾವ ಹಂತದಲ್ಲಿಯೇ ಇರಲಿ ಕೂಡಲೆ ತರಿಸಿಕೊಂಡು, ಅದನ್ನು ಮಂಜೂರು ಮಾಡಿ ಕೆಲಸ ಮಾಡಿಸಬೇಕು. ಹಾಗೆ ಮಾಡಿದರೆ ಬಹಳ ಉಪಕಾರಮಾಡಿದಹಾಗಾಗುತ್ತದೆ ಮತ್ತು ಅವರ ಕರ್ತವ್ಯ ನೆರವೇರಿಸಿದಹಾಗಾಗುತ್ತದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಮೈಸೂರು ಜಿಲ್ಲೆಯಿಂದ ಹತ್ತು ಜನರು ಮಾತನಾಡಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಿಂದ ಒಬ್ಬರು ಮಾತನಾಡಬೇಕು ಎಂದರೆ ನಮ್ಮ ಗೋಳು ಕೇಳುವವರು ಯಾರು ? ಮೈಸೂರು ದೇಶದಲ್ಲಿ ಮಳೆ ಇಲ್ಲವೆಂದು ದೇಶಾದ್ಯಂತ ಸಾರುತ್ತಿದ್ದಾರೆ. ಮೈಸೂರು ದೇಶದಲ್ಲಿ ಯಾವ ವಿಚಾರ ತೆಗೆದುಕೊಂಡರೂ ಕೂಡ ನಮ್ಮ ಚಿಕ್ಕಮಗಳೂರು ಜಿಲ್ಲೆ ಯಾವಾಗಲೂ ಕೂಡ ಬಡತನದ ಜಿಲ್ಲೆ ಎಂದು ಹೇಳುತ್ತಿದ್ದೇವೆ. ಆ ವಿಷಯ ಸರ್ಕಾರದ ರಿಕಾರ್ಡಿನಲ್ಲಿದೆ. ಇವೊತ್ತಿನವರೆಗೂ ಚಿಕ್ಕಮಗಳೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ, ಕೆಲವು ಹೋಬಳಿಗಳಲ್ಲಿ ಆರಂಗುಲ ಮಳೆಯಾಗಿದೆ. ಇವೊತ್ತು ಕೆಲವು ಕಡೆ ಮಳೆಬಂದಿಲ್ಲ. ಕಡೂರು ಹೋಬಳಿ, ಯಗಟಿ ಹೋಬಳಿ, ಶಿಂಗಡಗೆರೆ ಹೋಬಳಿಗಳಲ್ಲಿ ಮಳೆ ಬಂದಿಲ್ಲ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಸಂತೆಯೊಳಗೆ ಮೂರು ಜನ ವ್ಯಾಪಾರಕ್ಕೆ ಹೋಗಿದ್ದರಂತೆ. ಒಬ್ಬನು ಅಕ್ಕಿರಾಶಿ, ಇನ್ನೊಬ್ಬನು ಉಪ್ಪಿನ ರಾಶಿ, ಮತ್ತೊಬ್ಬನು ಕಾಯಿರಾಶಿ ಹಾಕಿಕೊಂಡಿದ್ದರಂತೆ. ಆಗ ಮಳೆ ಬಂದು ಎಲ್ಲ ರಾಶಿಗಳೂ ನೆನೆದುವು. ಉಪ್ಪಿನರಾಶಿ ಕರಗಿಹೋಯಿತು. ಅಕ್ಕಿರಾಶಿ ಮಳೆಯಲ್ಲಿ ನೆನೆದು ಅಳತೆಗೆ ಹೆಚ್ಚಿತು ಮತ್ತು ಕಾಯಿರಾಶಿಯವನಿಗೆ ಏನೂ ತೊಂದರೆಯಾಗಲಿಲ್ಲ. ಈ ಮೂರು ಜನರೂ ತಮಗೆ ನಷ್ಟವಾಯಿತೆಂದು ಅತ್ತರಂತೆ. ಇಲ್ಲಿ ನಡೆಯುತ್ತಿರುವ ಭಾಷಣಗಳನ್ನು ನೋಡಿದರೆ ಹೀಗಾಗಿದೆ ಎಂದು ಹೇಳಬಹುದು. ಮೈಸೂರು ದೇಶದ ಇತಿಹಾಸದಲ್ಲಿ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯಾಗಿ ಒಂದು ಬೆಳೆ ಬಂದು ಇವತ್ತಿಗೆ ಮೂರು ವರ್ಷವಾಗಿದೆ ಒಲೆಮುಂದೆ ಬಡತನ; ಊರು ಮುಂದೆ ಹೊಲ ಎಂಬಂತಾಗಿದೆ. ಆದುದರಿಂದ ಮೈಸೂರು ಜಿಲ್ಲೆಗೆ ಹತ್ತು ಲಕ್ಷ—ಇಪ್ಪತ್ತು ಲಕ್ಷ ಕೇಳುತ್ತಿರುವಾಗ ನಮ್ಮ ಜಿಲ್ಲೆಗೆ ಎರಡುಲಕ್ಷ ರೂಪಾಯಿಗಳನ್ನಾದರೂ ಕೊಡಬೇಕೆಂದು ಕೇಳುತ್ತೇನೆ. ಇದರಿಂದ ಕೆರೆಕಟ್ಟೆಗಳನ್ನು ಕಟ್ಟಿಸಬೇಕೆಂದು ಹೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಉಗ್ರವಾದ ಪರಿಸ್ಥಿತಿ ಇದೆ ಎಂದು ಉದಾರವಾಗಿ ಸಹಾಯ ಮಾಡುತ್ತಿದ್ದೀರಿ. ಅದೇರೀತಿಯಾಗಿ ಚಿಕ್ಕಮಗಳೂರು ಜಿಲ್ಲೆಗೂ ಸಹ

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಸಹಾಯಮಾಡಲು ಹೆಚ್ಚಿಗೆ ಗ್ರ್ಯಾಂಟ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈ ಸಭೆಯಲ್ಲಿ ಅನೇಕ ಮುಖಂಡರುಗಳು ಅವರವರ ಜಿಲ್ಲೆಗಳಲ್ಲಿ ಏನೇನು ಅಭಾವವಾಗಿದೆ ಎನ್ನುವುದನ್ನು ವಿವರಿಸಿದ್ದಾರೆ. ಬೆಂಗಳೂರು, ದೇಶಕ್ಕೆ ಮುಖ್ಯವಾದ ಪಟ್ಟಣ. ಆದರೆ ಬೆಂಗಳೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ಅನೇಕ ಕೆರೆಗಳಲ್ಲಿ ನೀರುನಿಲ್ಲದೆ ಬಹಳ ನಷ್ಟವಾಗುತ್ತಿದೆ. ಬೆಟ್ಟಗುಡ್ಡಗಳಿಂದ ಕೂಡಿರತಕ್ಕ ಜಿಲ್ಲೆ ಇದು. ಇದರಲ್ಲಿ ನಮ್ಮ ಮಾಗಡಿ ತಾಲ್ಲೂಕಿನಲ್ಲಿರುವ 120 ಮೈನರ್ ಕೆರೆಗಳು ಮತ್ತು 24 ಮೇಜರ್ ಕೆರೆಗಳ ಪೈಕಿ 5 ಕೆರೆಗಳಲ್ಲಿ ಕೂಡ ನೀರುನಿಲ್ಲದೆ ಬಹಳ ತೊಂದರೆಯಾಗಿದೆ. ಆದುದರಿಂದ ಸರ್ಕಾರದವರು ಈ ವಿಷಯವನ್ನು ಪರಿಶೀಲಿಸುವಾಗ ಎಲ್ಲ ಜಿಲ್ಲೆಗಳನ್ನೂ ಗಮನಕ್ಕೆ ತೆಗೆದುಕೊಂಡು ಸರಿಯಾದ ರಿಪೋರ್ಟನ್ನು ಆಯಾ ತಾಲ್ಲೂಕಿನ ಅಮಲ್ದಾರರಿಂದ ತರಿಸಿಕೊಂಡು ಸೂಕ್ತಪರಿಹಾರವನ್ನು ಎಲ್ಲ ಜಿಲ್ಲೆಗಳಿಗೆ ಕೊಡಬೇಕೆಂದು ಹೇಳುತ್ತೇನೆ. ಕ್ಷಾಮನಿವಾರಣೆಗಾಗಿ, ಎಲ್ಲ ಜನಗಳ ಪುರೋಭಿವೃದ್ಧಿಗೋಸ್ಕರ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಬೆಂಗಳೂರು ಜಿಲ್ಲೆಗೂ ಸಹ ಹೆಚ್ಚಿನ ಮಟ್ಟದಲ್ಲಿ ಸಹಾಯ ಮಾಡಬೇಕು. ಮಾಗಡಿ ತಾಲ್ಲೂಕು ಬಹಳ ಹಿಂದುಳಿದಿರತಕ್ಕ ತಾಲ್ಲೂಕಾದ್ದರಿಂದ ಅಲ್ಲಿಗೆ ಹೆಚ್ಚಿಗೆ ಸಹಾಯ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಈ ಕ್ಷಾಮನಿವಾರಣೆಗೋಸ್ಕರವಾಗಿ ಕೊಡತಕ್ಕ ಗ್ರ್ಯಾಂಟ್ ಬರೀ ಮೈಸೂರು ಜಿಲ್ಲೆಗೆ ಏನು ಖರ್ಚಾಗಿದೆ, ಅದಕ್ಕೆ ಮಂಜೂರಾತಿ ಪಡೆಯುವುದಕ್ಕೆ ಕೇಳುತ್ತಿದ್ದಾರೆಯೇ, ಅಥವಾ, ಮುಂದೆ ನವೆಂಬರ್ ಒಂದನೇ ತಾರೀಖಿನವರೆಗೆ ಖರ್ಚುಮಾಡತಕ್ಕ ಗ್ರ್ಯಾಂಟಿಗೋಸ್ಕರ ಕೇಳುತ್ತಿದ್ದಾರೆಯೇ ಎಂದು ನನ್ನ ಮನಸ್ಸಿಗೆ ಸ್ಪಷ್ಟವಾಗಿಲ್ಲ. ನವಂಬರ್ ಒಂದನೇ ತಾರೀಖಿನವರೆಗೆ ಖರ್ಚಾಗತಕ್ಕದ್ದು ಎಂದು ಈಗ ಡಿಮ್ಯಾಂಡ್ ನಂಬರ್ 30ರಲ್ಲಿ ಹೇಳಿರುವ ಹಾಗಿದೆ. ಚೀಫ್ ಇಂಜಿನಿಯರ್ ಆಫೀಸಿನಲ್ಲೂ, ಸರ್ಕಾರದಲ್ಲೂ ಇವೊತ್ತು ಬೇಕಾದಷ್ಟು ಕೆರೆ ಮತ್ತು ನಾಲಾ ಕೆಲಸಗಳು ಪೆಂಡಿಂಗ್‌ನಲ್ಲಿವೆ. ಮಂಜೂರಾಗಿರುವುದು, ಮಂಜೂರಾಗುವುವು ಬೇಕಾದಷ್ಟಿವೆ. ಮೊನ್ನೆತಾನೆ ಕ್ಷಾಮಪರಿಹಾರಕ್ಕೆ ಸಂಬಂಧಿಸಿದ ಮಂತ್ರಿಗಳು ಬಂದಮೇಲೆ ಕ್ಷಾಮಬಂದಿದೆ. ಅವರು ತುಮಕೂರು ಜಿಲ್ಲೆಗೆ ಬಂದಿದ್ದು ಅಲ್ಲಿ ಎಷ್ಟರಮಟ್ಟಿಗೆ ಪರಿಸ್ಥಿತಿ ಇದೆ ಎಂದು ನೋಡಿಕೊಂಡು ಬಂದರು. ತುಮಕೂರು ಜಿಲ್ಲೆಯಲ್ಲಿ ಎರಡಾಣೆ, ಮೂರಾಣೆ, ನಾಲ್ಕಾಣೆ ಬೆಳೆ ಆಗಿರುವ ಪ್ರದೇಶಗಳು ಅನೇಕವಿವೆ. ಎಷ್ಟೋ ಕಡೆಗಳಲ್ಲಿ ಮಳೆ ಬಂದಿಲ್ಲ, ಬೆಳೆ ಸರಿಯಾಗಿ ಆಗುವುದಿಲ್ಲವೆಂದು ಅವರಿಗೂ ಸಹ ಗೊತ್ತಿದೆ. ಆದುದರಿಂದ ತುಮಕೂರು ಜಿಲ್ಲೆಯ ವಿಷಯವನ್ನು ಪರಿಶೀಲನೆಮಾಡಿ ನವಂಬರ್ ಒಂದನೆ ತಾರೀಖಿನೊಳಗೆ ಎಷ್ಟು ಕೆರೆಗಳನ್ನು ಮಂಜೂರ್ಮಾಡಬಹುದೊ, ಎಷ್ಟು ನಾಲಾಗಳನ್ನು ಮಂಜೂರ್ಮಾಡಬಹುದೊ ಅವನ್ನೆಲ್ಲ ಮಂಜೂರ್ಮಾಡಿ, ಈಗ ಪೆಂಡಿಂಗ್‌ನಲ್ಲಿರತಕ್ಕ ಅಂದಾಜುಗಳನ್ನೆಲ್ಲ ಜರೂರಾಗಿ ತರಿಸಿಕೊಂಡು, ಹಿಂದುಮುಂದು ಓಡಾಡಿಸದೆ, ಮಂಜೂರ್ಮಾಡಿ ಕೆಲಸ ಮಾಡಿಸಿದರೆ ಅನುಕೂಲವಾಗುತ್ತದೆಂದು ಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಕ್ಷಾಮ, ಕ್ಷಾಮ, ಎಂದು ವಿಪರೀತವಾದ ಕೂಗು ಕೆಲವು ಸ್ನೇಹಿತರಿಂದ ಈ ಸಭೆಯಲ್ಲಿ ಕೇಳಿ ಬರುತ್ತಿದೆ. ನಾನು ಮೈಸೂರಿಗೆ ಬಸ್ಸುಗಳಲ್ಲಿ ಹೋಗಿ ಮೈಸೂರಿನ ಕೆಲವು ತಾಲ್ಲೂಕುಗಳನ್ನೂ, ಕೆಲವು ಪ್ರದೇಶಗಳನ್ನೂ ನೋಡಿದ್ದೇನೆ. ಉತ್ಕಟವಾದ ಕ್ಷಾಮ ಪರಿಸ್ಥಿತಿ ನಮ್ಮ ದೇಶದಲ್ಲಿ ಒದಗಿದೆ ಎಂಬ ಅಂಶವನ್ನು ನಾನು ಒಪ್ಪುವುದಿಲ್ಲ. ಉತ್ಕಟವಾದ ಕ್ಷಾಮ ಮೈಸೂರು ಜಿಲ್ಲೆಗೆ ಒದಗಿ ಬಂದಿದೆ ಎಂಬ ವಾದವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅನಾವೃಷ್ಟಿ ಪರಿಸ್ಥಿತಿ ನಮ್ಮ ದೇಶದಲ್ಲಿ ಒದಗಿದೆಯೇ ಹೊರತು, drought conditions ಒದಗಿದೆಯೇ ಹೊರತು ನಿಜವಾದ ಕ್ಷಾಮ ಪರಿಸ್ಥಿತಿಯೊದಗಿದೆ ಎಂದು ನಾನು ಒಪ್ಪುವುದಿಲ್ಲ. ನಿಜವಾದ ಕ್ಷಾಮ ಒದಗಿದ್ದರೆ, ಅವರು ಎರಡು ಸೇರು ಅಕ್ಕಿ ಕೊಡುತ್ತೇವೆ ಎಂದರೂ ಕೂಡ ಎರಡು ಸೇರು ಬೇಡ, ನಾಲ್ಕು ಸೇರಿನಂತೆ ಒದಗಿಸಬೇಕು ಎಂದು ಕೇಳುತ್ತಾರೆಯೇ? ಕೆರೆಗಳ ರಿಪೇರಿಯನ್ನು ಮತ್ತು ರಸ್ತೆ ಕಾಮಗಾರಿಗಳನ್ನು ಕ್ಷಾಮ ಪರಿಸ್ಥಿತಿಯಲ್ಲಿ ಯಾವ ಕಂಡಿಷನ್‌ಗಳ ಮೇಲೆ ಮಾಡಬೇಕೆಂದಿದೆಯೋ, ಆ ಕಂಡಿಷನ್‌ಗಳನ್ನು ಹಾಕಿದರೆ ಅನೇಕ ಜನರು ಕೆಲಸಕ್ಕೆ ಬರುವುದಿಲ್ಲ; ನಿಜವಾಗಿ ಹೊಟ್ಟೆಗೆ ಇಲ್ಲದಿರುವ ಪರಿಸ್ಥಿತಿ ಇದ್ದರೆ ಕೆಲಸ ಸಿಕ್ಕಿದರೆ ಸಾಕು, ಅಕ್ಕಿ ಕೊಟ್ಟರೆ ಸಾಕು ಎಂದು ಇರುತ್ತಾರೆ. ಮೈಸೂರಿಗೆ ಒಂದು ದುಸ್ಥಿತಿ ಒದಗಿದಾಗ ಅರಸೀಕೆರೆ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳ ಬಾರ್ಡರ್ ಹಳ್ಳಿಗಳಲ್ಲಿ ಸಂಪೂರ್ಣವಾಗಿ ಮಳೆ ಬರಲಿಲ್ಲ. ಆ ಸಂದರ್ಭದಲ್ಲಿ ಅಲ್ಲಿ ಒಂದು ಬಹಿರಂಗಸಭೆ ನಡೆದು ನಮ್ಮ ಕಾಂಗ್ರೆಸ್ ಅಧ್ಯಕ್ಷರು ಮತ್ತು ಜನರಲ್ ಸೆಕ್ರೆಟರಿಗಳು ಬಂದಿದ್ದರು. ಆವಾಗ ಸ್ವಲ್ಪ ಮಳೆ ಬಂತು. ಪುನಃ ಹದಿನೈದು ದಿವಸಗಳ ನಂತರ ಮತ್ತೊಂದು ಸಭೆಯನ್ನು ಏರ್ಪಾಡು ಮಾಡಿದ್ದಾಗ ಮತ್ತೆ ಮಳೆ ಬಂತು. ನಾನು ಮೈಸೂರಿನ ಪರಿಸ್ಥಿತಿ ಉತ್ತಮವಾಗಿದೆ ಎಂದು ಹೇಳುತ್ತಿಲ್ಲ. ಕಷ್ಟಗಳಿವೆ. ಮಳೆ ಬಂದಿಲ್ಲ, ಪೈರು ಇಟ್ಟಿಲ್ಲ, ದನಕರುಗಳಿಗೆ ಹುಲ್ಲು ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವೊತ್ತಿನ ದಿವಸ ವಾಸ್ತವಾಂಶವನ್ನು ತೆಗೆದುಕೊಂಡರೆ, ಮೈಸೂರು ಜಿಲ್ಲೆಯಲ್ಲಿ ಹುಲ್ಲು ಬಣವೆಗಳಿವೆ; ಅನೇಕರ ಮನೆಯಲ್ಲಿ ಧಾನ್ಯದ ದಾಸ್ತಾನಿದೆ ಎಂದು ಕೇಳಿದ್ದೇನೆ. ಆದುದರಿಂದ ಈ ದಿವಸ ಅಲ್ಲಿ ಕ್ಷಾಮವಿದೆ ಎಂದು ಸುಮ್ಮನೆ ಅದನ್ನು ಒಂದು ಪೆಡಂಭೂತವಾಗಿ ಮಾಡುವುದಕ್ಕಾಗುವುದಿಲ್ಲ.

(*Interruptions*)

ಶ್ರೀ ಶಿವನಂಜೇಗೌಡ.—ಮೈಸೂರು ತಾಲ್ಲೂಕಿನಲ್ಲಿ ಇವರು ಎಲ್ಲೆಲ್ಲಿ ನೋಡಿದ್ದಾರೆಂಬುದನ್ನು ತಿಳಿಸಬೇಕು. ಒಂದು ಹುಲ್ಲು ಬಣವೆಯನ್ನು ಅವರು ತೋರಿಸಿದರೂ ಸಹ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮೈಸೂರು ಜಿಲ್ಲೆಯ ಪರಿಸ್ಥಿತಿಯನ್ನು ನಾನಾಗಲೇ ಹೇಳಿದ್ದೇನೆ. ಅಲ್ಲಿಯ ಸ್ಥಿತಿ ಉತ್ತಮವಾಗಿದೆ ಎಂದು ಹೇಳಲಿಲ್ಲ. ಅಲ್ಲಿಯ ಪರಿಸ್ಥಿತಿ ಹೇಗೆ ಕೆಟ್ಟಿದೆಯೋ ಹಾಗೆಯೇ ಹಾಸನ ಜಿಲ್ಲೆಯೂ ಇದೆ. ಹಾಸನ ಜಿಲ್ಲೆಯಲ್ಲಿ ಮುಂಗಾರು ಮಳೆ ಮೂರು ನಾಲ್ಕು ತಿಂಗಳಿಂದಲೂ ಬರಲಿಲ್ಲ. ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಹಿಂಗಾರು ಮಳೆ ಒಂದು, ಒಂದೂವರೆ ತಿಂಗಳಿನಿಂದ ಬಂದಿದೆ. ಮೈದಾನ ಪ್ರದೇಶಗಳಲ್ಲಿ ಈಗ ಸ್ವಲ್ಪ ಮಳೆಯಾಗಿದೆ. ಯಾವ ಕೆರೆಗಳಿಗೂ ಕೂಡ ನೀರು ಬಂದಿಲ್ಲ, ಗಿಡ್ಡರಾಗಿ ಮತ್ತು ದೊಡ್ಡರಾಗಿ ಈ ಎರಡ

ರಲ್ಲೂ ಪೈರು ಬಂದಿಲ್ಲ. ಶ್ರೀಮಾನ್ ಚಂದ್ರಶೇಖರಯ್ಯನವರು ಕಡೂರು ತಾಲ್ಲೂಕಿನ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳಿದರು. ನಮ್ಮ ಕಡೆಯೂ ಕೆಲವು ತಾಲ್ಲೂಕುಗಳಲ್ಲಿ ಅನಾವೃಷ್ಟಿ ದೆಶೆಯಿಂದ ಪರಿಸ್ಥಿತಿ ಚೆನ್ನಾಗಿಲ್ಲ. ಸಾಮಾನ್ಯವಾಗಿ ಬೆಂದ ಮನೆಯಲ್ಲಿ ಹಿರಿದವನೇ ಜಾಣ ಎಂಬ ಗಾದೆಗನುಸಾರವಾಗಿ ಕ್ಷಾಮನಿಧಿ ಎಂದು ಮಾಡಿ ಕಾಂಗಾರಿ ಕೆಲಸ ಮಾಡುವಾಗ ಸಿಕ್ಕಾಪಟ್ಟೆ ಹಣ ಖರ್ಚಾಗುತ್ತಿದೆ, ವ್ಯವಸ್ಥಿತವಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ದೇಶದ ಹಿತದೃಷ್ಟಿಯಿಂದ ಅವಸರದಲ್ಲಿ ಕೆಲಸಮಾಡುವಾಗ ಯಾವ ಕಾಂಗಾರಿ ನಡೆದರೂ ವ್ಯವಸ್ಥಿತವಾಗಿಯೂ ಮತ್ತು ಸರಿಯಾದ ರೀತಿಯಲ್ಲೂ ವ್ಯಯವಾಗುತ್ತಿದೆಯೆ ಎಂದು ನೋಡಿಕೊಂಡು ಹಣ ಪೋಲಾಗದಂತೆ ಎಚ್ಚರಿಕೆಯಿಂದ ಇರಬೇಕು. ಒಟ್ಟಿನಲ್ಲಿ ಗದ್ದಲ ಮಾಡಿದರೆ ಮಾಡಿದವರಿಗೆ ಮಾತ್ರ ಹಣ ದೊರೆಯಬೇಕೆಂದು ಹೇಳುವುದು ಸರಿಯಲ್ಲ. , ಕೂಲಂಕಷವಾಗಿ ಎಲ್ಲೆಲ್ಲಿ ಯಯವಯಾವ ಪರಿಸ್ಥಿತಿಯಿದೆಯೆಂಬುದನ್ನು ಅರಿತು ಸಂಸ್ಥಾನದ ಎಲ್ಲಾ ಕಡೆಯೂ ಕ್ಷಾಮದ ಪರಿಸ್ಥಿತಿಯಿರುವುದರಿಂದ ಎಲ್ಲಾ ಕಡೆಗೂ ಈ ನಿಧಿಯನ್ನು ಒದಗಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಕಾಲ ಬಹಳ ಕೊಂಚವಿದೆ. ಆದರೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಮುಖ್ಯ ವಿಚಾರ ಮಾತ್ರ ಪ್ರಸ್ತಾಪ ಮಾಡುತ್ತೇನೆ. ದೇಶದಲ್ಲಿ ಯಾವ ಮೂಲೆಯಲ್ಲೇ ಆಗಲಿ ಸಮರ್ಪಕವಾಗಿ ಮಳೆ ಬೆಳೆ ಆಗದೆ ಕಷ್ಟ ಪರಿಸ್ಥಿತಿ ಬಂದಾಗ ಅದನ್ನು ಪರಿಹಾರ ಮಾಡಲು ಆವಶ್ಯಕವಾದ ಏರ್ಪಾಡು ಮಾಡುವುದು ಸರ್ಕಾರದ ಪ್ರಥಮ ಜವಾಬ್ದಾರಿಯಾಗಿದೆ. ಮೈಸೂರು ಜಿಲ್ಲೆಯಾಗಲಿ ಅಥವಾ ಹಾಸನ ಜಿಲ್ಲೆಯಾಗಲಿ ಅದು ಅಷ್ಟು ಪ್ರಾಮುಖ್ಯವಲ್ಲ. ಎಲ್ಲಿ ಮಳೆ ಸಾಕಾದಷ್ಟಾಗದೆ ಅದೂ ಸಕಾಲದಲ್ಲಾಗದೆ ಕ್ಷಾಮ ಪ್ರಾಪ್ತವಾಗಿದೆಯೆಂಬುದು ಮುಖ್ಯವಾದ ವಿಷಯ. ಮಳೆ ಸಾಕಷ್ಟು ಸಕಾಲದಲ್ಲಿ ಆಗಬೇಕಾದದ್ದೂ ಅತ್ಯಾವಶ್ಯಕ. ಈಗ 3-4 ಉದಾಹರಣೆ ಕೊಡುತ್ತೇನೆ. ಅರಸೀಕೆರೆಯಲ್ಲಿ ಹೋದ ವರ್ಷ ಇದೇ ಕಾಲದಲ್ಲಿ 13·52 ಇಂಚು ಮಳೆಯಾಗಿತ್ತು, ಈಗ $3\frac{1}{2}$ ಇಂಚು ಆಗಿದೆ. ಅಲ್ಲಿ ಸ್ವಲ್ಪ ಹೆಚ್ಚು ಕಡಮೆ $10\frac{1}{4}$ ಇಂಚು ಮಳೆ ಸಕಾಲದಲ್ಲಿ ಆಗಿಲ್ಲವೆಂದಮೇಲೆ ಅಲ್ಲಿ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಹದಗೆಟ್ಟಿದೆಯೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅದೇ ರೀತಿ ಮೈಸೂರು ಜಿಲ್ಲೆ ಟಿ. ನರಸೀಪುರದಲ್ಲಿ ಹೋದ ವರ್ಷ ಎಷ್ಟಾಗಿತ್ತು, ಈ ವರ್ಷ ಎಷ್ಟಾಗಿದೆ ಎಂದು ಹೋಲಿಕೆ ಮಾಡಿದರೆ $8\frac{3}{4}$ ಇಂಚು ಕಡಮೆಯಾಗಿದೆ ; ಈ ವರ್ಷ ನಂಜನಗೂಡಿನಲ್ಲಿ $7\frac{1}{2}$ ಇಂಚು ಕಡಿಮೆಯಾಗಿದೆ, ಮೈಸೂರಿನಲ್ಲಿ 11 ಇಂಚು ಕಡಮೆಯಾಗಿದೆ. ತುಮಕೂರಿನಲ್ಲಿ $7\frac{1}{2}$ ಇಂಚು ಕಡಿಮೆಯಾಗಿದೆ. ಹೀಗೆ ಯಾವ ಯಾವ ತಾಲ್ಲೂಕುಗಳಲ್ಲಿ ವಿಶೇಷ ಅಭಾವವಿದೆಯೋ ಅಲ್ಲಿಗೆ ಹೆಚ್ಚು ಗಮನ ಕೊಡಬೇಕು. ಅಕಸ್ಮಾತ್ ಒಂದೆರಡು ಇಂಚು ಹೆಚ್ಚುಕಡಮೆಯಾದರೆ ಅದೇನೂ ಅಂಥ ಪ್ರಮಾದವಲ್ಲ. ಮಳೆ ಕಡಮೆಯಾಗುವುದರ ಜೊತೆಗೆ ಸಕಾಲದಲ್ಲಿ ಮಳೆಯಾಗಿಲ್ಲದಿರುವುದು ಮುಂತಾದ್ದನ್ನೆಲ್ಲಾ ಗಮನಿಸಿ ಸರ್ಕಾರದವರು ಯಾವ ರೀತಿ ಸುಧಾರಣೆ ಆಗಬೇಕೆಂಬುದನ್ನು ದೃಷ್ಟಿಯಲ್ಲಿಟ್ಟು ಯಾವ ಪ್ರಮಾಣದಲ್ಲಾಗಬೇಕೆಂಬುದನ್ನು ದೃಷ್ಟಿಯಲ್ಲಿಟ್ಟು ಯಾವಯಾವ ತರಹ ರಿಯಾಯಿತಿ ಕೊಡಬೇಕೆಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಆದ್ದರಿಂದ A to Z ಎಲ್ಲಾ ಕಡೆಗೂ ಒಂದೇ ಮಂತ್ರ ಹೇಳುವುದಕ್ಕಾಗುವುದಿಲ್ಲ.

ಈ ಸಂದರ್ಭದಲ್ಲಿ ಹಣದ ವಿಚಾರ ಪ್ರಸ್ತಾಪ ಮಾಡಿ ನಿರ್ದಿಷ್ಟವಾಗಿ ಒದಗಿಸಬೇಕೆಂದು ಹೇಳಿದರು. ಅದು ಸರಿಯೇ ಎಂದು ಪ್ರಶ್ನೆ ಹಾಕುತ್ತೇನೆ. ಕಷ್ಟ ಪರಿಸ್ಥಿತಿ ಒಂದುವೇಳೆ 2 ತಿಂಗಳಲ್ಲಿ ಸುಧಾರಣೆ ಆಗಬಹುದು, 6 ತಿಂಗಳಲ್ಲಿ ಆಗಬಹುದು. ಇಷ್ಟೇ ಇರಬೇಕೆಂದು ಕಟ್ಟುನಿಟ್ಟಾಗಿ ಹಣ ಮುಡುಪಾಗಿಡುವುದು ರೀತಿ ನೀತಿಯಲ್ಲ. ಒಟ್ಟಿನಲ್ಲಿ ಮೈಸೂರಾಗಲಿ, ಹಾಸನವಾಗಲಿ, ತುಮಕೂರಾಗಲಿ ಅಥವಾ ತಿಪಟೂರಾಗಲಿ ವಿಶೇಷ ಪರಿಸ್ಥಿತಿಯುಂಟಾಗಿ ಜನರಿಗೆ ಕಷ್ಟವೆಲ್ಲೆಲ್ಲಿ ಪ್ರಾಪ್ತವಾಗುತ್ತದೆಯೋ ಅಲ್ಲಲ್ಲಿ ಯಾವರೀತಿ ಯಾವ ಪ್ರಮಾಣದಲ್ಲಿ ಹೇಗೆ ಸುಧಾರಣೆ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ತೆಗೆದುಕೊಂಡು ಆಗತ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ಹಿಂತೆಗೆಯುವುದಿಲ್ಲ ಎಂದು ಮಾತ್ರ ಖಚಿತವಾಗಿ ಭರವಸೆ ಕೊಡುತ್ತೇನೆ.

ಈಗ ಮೈಸೂರು ಜಿಲ್ಲೆಗೆ $8\frac{1}{2}$ ಲಕ್ಷ ರೂಪಾಯಿಗಳು ಬೇಕೆಂದು ಕೇಳಿರುವುದು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ ಹಾಗೆ ಎಲ್ಲಾ ಜಾಗ್ರತೆ ಖರ್ಚಾಗುತ್ತದೆಯೆಂದು ಕೇಳಿದ್ದೇವೆ. 10 ಲಕ್ಷಕೊಡದೆ $1\frac{1}{2}$ ಲಕ್ಷ ಉಳಿಸಿದ್ದಾರೆಂದು ಹೇಳಿದರು. ಆ ಪ್ರಶ್ನೆಗೆ ಅವಕಾಶವಿಲ್ಲ. ಮೈಸೂರು ಜಿಲ್ಲೆಯಲ್ಲಿ ತೆಗೆದುಕೊಂಡಿರುವ ಕಾಯಕ್ರಮ ಡಿಸ್ಟ್ರೆಸ್ ರಿಲೀಫ್ ಕಮಿಟಿಯಲ್ಲಿ ವಿವರವಾಗಿ ತಿಳಿಸಲಾಗಿದೆ. ಮುಖ್ಯವಾಗಿ ರಸ್ತೆಗಳನ್ನು ಮಾಡಿಸುವುದು, ಗೋಕಟ್ಟೆ ಕಟ್ಟಿಸುವುದು, ಇರಿಗೇಷನ್ ವರ್ಕ್ಸ್, ಮೈನರ್ ಕೆರೆ ರಿಪೇರಿ ಮಾಡಿಸುವುದು, ಹುಲ್ಲನ್ನೊದಗಿಸುವುದು, ತಕಾವಿಸಾಲ ಕೊಡುವುದು, ರಾಗಿ, ಜೋಳ ಹಂಚಿಕೆ, ಗೊಬ್ಬರಕ್ಕೆ ಸಾಲ ಕೊಡತಕ್ಕದು, ಮಿಲ್ಕ್‌ಬಾರ್, ಗ್ರೂಯಲ್ ಸೆಂಟರ್ ತೆರೆಯುವುದು, ಅಕ್ಕಿಯನ್ನು ಕೂಲಿ ಕೆಲಸ ಮಾಡುವವರಿಗೆ 3 ಸೇರಿನಂತೆ ಕೊಟ್ಟು ಹೆಚ್ಚುವರಿಯಾದ ನಷ್ಟವನ್ನು ಸಬ್ಸಿಡೈಸ್ ಮಾಡುವುದು ಮುಂತಾದ ಕೆಲಸಗಳನ್ನು ನಾನಾ ಕ್ಷೇತ್ರಗಳಲ್ಲಿ ವಿಶೇಷ ರೀತಿಯಲ್ಲಿ ಕೈಕೊಂಡಿದೆ. ಈಗ ರಸ್ತೆ, ಗೋಕಟ್ಟೆ, ಇರಿಗೇಷನ್ ವರ್ಕ್ಸ್ ಮುಂತಾದ ಕೆಲಸಗಳಿಗೆ 6 ಲಕ್ಷ ರೂಪಾಯಿಗಳು ಖರ್ಚಾಗಿವೆ, ತಕಾವಿ ಸಾಲಕ್ಕೆ ಸುಮಾರು ಒಂದು ಲಕ್ಷ 20 ಸಾವಿರ ರೂಪಾಯಿಗಳು ಖರ್ಚಾಗಿವೆ; 10 ಲಕ್ಷ ಖರ್ಚಿನ ಜೊತೆಗೆ ಶ್ರೀಮಾನ್ ಹುಮಂತಯ್ಯನವರು ವಾಗ್ದಾನ ಮಾಡಿದ 10 ಲಕ್ಷದ ಜೊತೆಗೆ ಹಿಂದೆ ಒಂದು ಲಕ್ಷ 25 ಸಾವಿರ ರೂಪಾಯಿಗಳನು ಒದಗಿಸಿದ್ದೆವು. ಅದರಲ್ಲಿ ಅನೇಕ ಭಾಗ ಖರ್ಚಾಗಿದೆ. ಆದ್ದರಿಂದ ಯಾರಿಗೂ ಕೂಡ ಸರ್ಕಾರ ಉಗ್ರಪರಿಸ್ಥಿತಿ ಯಾವ ತಾಲ್ಲೂಕಿನಲ್ಲಿದೆಯೆಂಬುದನ್ನು ಗಮನಿಸುವುದಿಲ್ಲ ಎಂಬ ಅನುಮಾನ ಇರಬೇಕಾಗಿಲ್ಲ. ಮೊನ್ನೆ ತುಮಕೂರು ಜಿಲ್ಲೆಗೆ ಹೋದಾಗ ತಿಪಟೂರು ಮತ್ತು ಇನ್ನೂ ಕೆಲವುಕಡೆ ಸ್ವಲ್ಪ ಅಭಾವವಿರುವುದು ಕಂಡಿತು. ಆಗ ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಮೈಸೂರಿನಲ್ಲಿ ತೆಗೆದುಕೊಂಡ ಹಾಗೆ ಕೆಲಸಕಾರ್ಯ ಕೈಗೊಳ್ಳಬೇಕೆಂದು ಸೂಚನೆ ಕೊಟ್ಟೆ. ಜಿಲ್ಲಾಬೋರ್ಡ್, ಪಂಚಾಯಿತಿ, ಎಲ್. ಇ. ಎಸ್. ಬ್ಲಾಕ್ಸ್, ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸಗಳನ್ನು ಕೈಕೊಂಡು ಕೆಲಸ ಒದಗಿಸಬೇಕು, 50 ಸಾವಿರ ರೂಪಾಯಿಗಳವರೆಗೂ ಆವಶ್ಯಕತೆ ನೋಡಿ ಕೊಡಬಹುದು ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಹಾಗೆಯೇ ಅರಸೀಕೆರೆಯಲ್ಲೂ ಕನಿಷ್ಠ ಪರಿಸ್ಥಿತಿಯಿರುವುದರಿಂದ ತುಮಕೂರಿನಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆಯೋ ಅದರ ಪ್ರಕಾರ ಕೆಲಸಕಾರ್ಯ ಕೈಕೊಳ್ಳಿ, 25 ಸಾವಿರ ರೂಪಾಯಿ ಒದಗಿಸಿ ಎಂದು ಹಾಸನದ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಯಾವಯಾವ ತರಹ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಬಗ್ಗೆ ಕಾಲವಿಲ್ಲದಿರುವುದರಿಂದ ಈಗ ವಿವರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಯಾವ ತಾಲ್ಲೂಕಿನಲ್ಲಿ ಕಷ್ಟ ಪ್ರಾಪ್ತವಾಗಿದೆಯೋ ಅಲ್ಲಿ ಸೂಕ್ತ ಕಾರ್ಯಕ್ರಮವನ್ನು ಸೂಕ್ತ ಪ್ರಮಾಣದಲ್ಲಿ ಕೈಕೊಂಡು ಕಷ್ಟ ನಿವಾರಣೆ ಮಾಡಲು ಸರ್ಕಾರ ಹಿಂದೆಗೆಯುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಒಂದುವೇಳೆ ಆ ರೀತಿ ಕಷ್ಟಗಳು ಬಂದರೆ ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ, ಜನರ ಯೋಗಕ್ಷೇಮ ಮತ್ತು ಅವರ ಪ್ರಾಣರಕ್ಷಣೆ ಮಾಡಬೇಕಾದದ್ದು ಅತಿಮುಖ್ಯವಾದದ್ದು. ತಾವುಗಳೆಲ್ಲರೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಈ ವಿಚಾರದಲ್ಲಿ ಸರ್ಕಾರದವರು ಆದಷ್ಟು ಸಹಾನುಭೂತಿ ತೋರಿಸಲು ಸಿದ್ಧವಾಗಿದ್ದಾರೆಂಬುದನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಇಷ್ಟು ಭರವಸೆಯಮೇಲೆ ತಾವು ಇದಕ್ಕೆ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a further sum not exceeding Rs. 8,50,000 be granted to the Government to defray the charges which will come in course of payment during the period ending 31st day of October 1956 in respect of 'Famine'."

The motion was adopted.

Demand No. 41. Industrial Development.

72. Capital outlay on Industrial Development.

Mr. SPEAKER.—The question is:

"That a further sum not exceeding Rs. 100 be granted to the Government to defray the charges which will come in course of payment during the period ending 31st day of October 1956, in respect of 'Capital Outlay on Industrial Development'."

The motion was adopted.

Bussiness of the House.

Mr. SPEAKER.—Before adjournment, I want to announce that there is a little change in the programme of business for tomorrow. The first item after question hour would be consideration of the Khadi and Village Industries Bill as reported by the Select Committee and consideration of the reports of the Public Accounts Committee and Finance Enquiry Committee.

Now, the House will adjourn and meet tomorrow at 12 NOON.

The House adjourned at Five Minutes past Five of the Clock to meet again at Twelve of the Clock on Friday the 28th September 1956.

WD 1110—GPB—550—3-12-56